ಸಂಪುಟ: 33
ಸಂಚಿಕೆ: 05
ಬೆಲೆ ರೂ. 8.00
ಮಂಗಳೂರು

ಸಜ್ಜನರ ಸಂಗಾತಿ
www.sanmarga.com

# ಸನ್ಮಾರ್ಗ ವಾರಪತ್ರಿಕೆ

2010 ಎಪ್ರಿಲ್ 18 – 24
1431 ಜುಮಾದಿಲ್ ಅವ್ವಲ್ 02 – 08




# ಗೋ ಸಂತತಿ ಉಳಿಸುವುದೆಂದರೆ...

■ ಅರಫಾ ಮಂಚಿ

ಅಭಿವೃದ್ಧಿಗೆ ಓಟು ಎಂಬ ಘೋಷಣೆಯನ್ನು ಜನರು ಸ್ವೀಕರಿಸಿದ್ದಾರೆಂದು ಹೇಳುವ ರಾಜ್ಯದ ಬಿಜೆಪಿ ಸರಕಾರ ಜನರಿಗೆ ಶಾಕ್ ಟ್ರೀಟ್‌ಮೆಂಟ್ ನೀಡಿರುವುದು ಆಘಾತಕಾರಿಯಾಗಿದೆ. ನಂದಿನಿ ಹಾಲಿನ ಮೂಲಕ, ಕರೆಂಟು ಕಣ್ಣಾಮುಚ್ಚಾಲೆಯ ಮೂಲಕ, ಇದೀಗ ಕುಡಿಯುವ ನೀರಿನ ಬಿಲ್ಲಿಗೂ ಬಿಸಿ ಮುಟ್ಟಿಸಿ ಸರಕಾರ ಬಿ.ಬಿ.ಎಂ.ಪಿ. ಚುನಾವಣೆಯಲ್ಲಿ ಕೈ ಹಿಡಿದ ಜನತೆಯ ಕೈಯನ್ನೇ ಕತ್ತರಿಸಹೊರಟಿರುವುದು ಒಂದರ್ಥದಲ್ಲಿ ಅಕ್ಷಮ್ಯ ಅಪರಾಧವೇ ಸರಿ.




ಗೋ ವಧೆ ನಿಷೇಧ ಕಾನೂನು ತಂದು ಪಶುಸಂತತಿಗಳನ್ನು ಉಳಿಸುವ ಮಹಾ ಕಾರ್ಯ ಸಾಧಿಸಿರುವ ಸರಕಾರ ಅದೇ ವೇಳೆ ಗೋ ಕೆಚ್ಚಲಿನಿಂದ ಮನುಷ್ಯರ ಹೊಟ್ಟೆ ಸೇರುವ ಹಾಲನ್ನು ಪ್ರತಿ ಲೀಟರ್‌ಗೆ ಸುಮಾರು 3ರಿಂದ 4 ರೂಪಾಯಿಯ ವರೆಗೂ ಹೆಚ್ಚಿಸಿ ಮನುಷ್ಯರ ಪಾಲಿಗೆ ಅದನ್ನು ವಿಷ ಮಾಡಿದ್ದು ಒಂದರ್ಥದಲ್ಲಿ ಗೋ ಸಂತತಿಯನ್ನು ಉಳಿಸುವ ಸಂಕಲ್ಪದ ಮುಂದೆ ಮಾನವ ಸಂತತಿಯೇ ಅಳಿದರೂ ವಿಷಾದವಿಲ್ಲ ಎಂಬ ನೀತಿ ಸರಕಾರದ್ದು ಎಂದಾಯಿತು. ಗೋಪಾಲಕನು ನಷ್ಟದಲ್ಲಿದ್ದಾನೆ ಎಂಬ ಕಾಳಜಿ ಸರಕಾರಕ್ಕಿದ್ದರೆ, ಅದುವೇ ಗೋ ವಧೆಗೂ ಕಾರಣವೆಂದು ಸರಕಾರ ತಿಳಿದಿದ್ದರೆ, ಗೋಪಾಲಕರಿಗೆ ಗೋವನ್ನು ಸಾಕಲು ಹಾಲಿನ ದರವನ್ನು ಹೆಚ್ಚಿಸುವ ಮೂಲಕ ಈ ರಾಜ್ಯದ ಶೇ. 75ರಷ್ಟು ಇರುವ ಬಡಪ್ರಜೆಗಳಿಂದ ಮೂರ್‍ನಾಲ್ಕು ರೂಪಾಯಿಯನ್ನು ಕಿತ್ತು ಅವರಿಗೆ ಕೊಡುವ ಸರಕಾರದ ಯತ್ನ ಖಂಡಿತಾ ಬೇಜವಾಬ್ದಾರಿಯದ್ದಾಗಿದೆ. ಗೋವಿನೊಂದಿಗೆ ಗೊಲ್ಲನನ್ನೂ ಉಳಿಸಲು ಹೋಗಿ ಹಾಲಿನಂತಹ ಪೋಷಕ ಆಹಾರವನ್ನು ತುಟ್ಟಿಯಾಗಿಸುವ ಮೂಲಕ ಒಟ್ಟಾರೆ ರಾಜ್ಯದ ಪ್ರಜಾಸಮೂಹವನ್ನೇ ಅದರಲ್ಲೂ ಬಡವರನ್ನು ಮತ್ತು ಅವರ ಮಕ್ಕಳನ್ನು ಹಾಲು ಕುಡಿಯದಂತೆ ಮಾಡಿರುವುದು ಈ ಸರಕಾರದ ಘೋರ ಅಪರಾಧವಾಗಿದೆ. ಬಿ.ಬಿ.ಎಂ.ಪಿ. ಚುನಾವಣೆಯಲ್ಲಿ ಬಿಜೆಪಿ ಸರಕಾರಕ್ಕೆ ಸಿಕ್ಕಿದ ಮಹಾ ಯಶಸ್ಸು ಇಡೀ ರಾಜ್ಯದ ಜನರ ಕೊರಳಿಗೆ ಹಾಲು, ನೀರು, ಕರೆಂಟುಗಳ ಮೂಲಕ ಪ್ರಥಮ ಶಾಕಾಗಿ ಪರಿಣಮಿಸಿದೆ.

ಬೆಲೆಯೇರಿಕೆಯಿಂದ ಈ ದಿನಗಳಲ್ಲಿ ಹಾಲು-ಸಕ್ಕರೆ-ದವಸ ಧಾನ್ಯ, ಅಕ್ಕಿ-ಕಾಳೆಲ್ಲ ಪ್ರಜೆಗಳ ಬದುಕನ್ನೇ ಬರ್ಬರಗೊಳಿಸಿರುವಾಗ ಈ ಸರಕಾರ ಕನಿಕರವಿಲ್ಲದಂತೆ ಕುಡಿಯುವ ನೀರಿನ ಬೆಲೆಯನ್ನು ಏರಿಸಲು ಹೊರಟಿರುವುದು ಪ್ರಜೆಗಳ ಪಾಲಿಗೆ ಚೇತರಿಸಲಾಗದ ಚಿತಾವಣೆಯಾಗಿದೆ. ಅದು ಕೂಡಾ ಕುಡಿವ ನೀರಿಗೆ ಬವಣೆ ಎದುರಿಸುತ್ತಿರುವ ಸುಡು ಬೇಸಿಗೆಯಲ್ಲಿ ಈ ನೀರಿನ ಬಿಲ್ಲನ್ನು ಹೆಚ್ಚಿಸುವ ಕೆಲಸಕ್ಕೆ ಹೊರಟಿರುವ ಜಲಮಂಡಳಿಯ ಅಧ್ಯಕ್ಷ ಕಟ್ಟಾ ಸುಬ್ರಹ್ಮಣ್ಯ ಸ್ವಾಮಿಯವರ ಇಲಾಖೆ ಪ್ರಜೆಗಳನ್ನು ಅದರಲ್ಲೂ ಬಡವರನ್ನು ನೀರಿಲ್ಲದೆ ಸಾಯುವಂತೆ ಮಾಡಲು ಹೊರಟಿದೆ ಎಂದು ಹೇಳಬೇಕು. ಅಂದರೆ ಈ ಸರಕಾರಕ್ಕೆ ಗೋಪಾಲಕ ಮತ್ತು ಗೋವುಗಳನ್ನು ರಕ್ಷಿಸುವುದು ಮುಖ್ಯವಾಗಿದೆ. ಆದರೆ ಹಾಲು ಕೊಡಿಸಲಾಗದ ಸ್ಥಿತಿಯಲ್ಲಿ ಶಿಶು ಮರಣ ನಡೆದರೆ, ಕುಡಿಯುವ ನೀರಿಲ್ಲದೆ ಜನರು ಬಸವಳಿದು ಸತ್ತರೆ ಪ್ರಾಮುಖ್ಯವಲ್ಲ ಎಂದು ಅರ್ಥ ಮಾಡಿಕೊಳ್ಳಬಹುದು. ನಿಜವಾಗಿಯೂ, ಜನರ ಮೂಲಭೂತ ಅವಶ್ಯಕತೆಗಳನ್ನು ಈ ರೀತಿ ದುಬಾರಿಯಾಗಿಸುವುದೆಂದರೆ, ಅದು ಸಾಮೂಹಿಕ ಕಗ್ಗೊಲೆ ನಡೆಸುವುದಕ್ಕೆ ಸಮವಾಗುತ್ತದೆ. ಈ ಸಂಸ್ಕೃತಿ, ಸಂಸ್ಕಾರ ಎಂಬುದಕ್ಕೆ ಕೋಟಿಗಟ್ಟಲೆ ಹಣ ಚೆಲ್ಲುವ ಸರಕಾರ ಮಠ-ಮಾನ್ಯಗಳಿಗೆ ಕೋಟಿಗಟ್ಟಲೆ ಹಣ ಕೊಟ್ಟು ಮತದಾರರನ್ನು ಸೃಷ್ಟಿಸುವ ಕೆಲಸಕ್ಕೆ ಹೊರಟಿರುವ ಯಡಿಯೂರಪ್ಪ ಸರಕಾರದ ಈ ಎಲ್ಲ ಗೋಸುಂಬೆ ನೀತಿಯನ್ನು ಒಂದು ವೇಳೆ ಜನ ಅಭಿವೃದ್ಧಿ ಎಂದು ಅರ್ಥ ಮಾಡಿಕೊಳ್ಳುತ್ತಾರೆಂದಾದರೆ ಅದನ್ನು 'ಪ್ರಜಾ ಹಣೆಬರಹ' ಎಂದೇ ವಿಶ್ಲೇಷಿಸಬೇಕಾಗುತ್ತದೆ.

ರಾಜ್ಯದಲ್ಲಿ 30 ನಗರಗಳಲ್ಲಿ ಕುಡಿಯುವ ನೀರಿನ ಕೊರತೆಯಿದೆ. ಪೌರಾಡಳಿತ ನಿರ್ದೇಶನಾಲಯದ ಪ್ರಕಾರವೇ 214 ನಗರ ಮತ್ತು ಪಟ್ಟಣಗಳಲ್ಲಿ 22 ಸಾವಿರ ಕೊಳವೆ ಬಾವಿಗಳಲ್ಲಿ 3,300 ಬತ್ತಿ ಹೋಗಿವೆ. ಪ್ರಾಮುಖ್ಯವಾಗಿ ವಿದ್ಯುತ್ತಿನ ಕಣ್ಣಾಮುಚ್ಚಾಲೆಯಿಂದಾಗಿ ಜಲಮಂಡಳಿಗಳಿಗೆ ನೀರು ಸರಬರಾಜನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗಿಲ್ಲ ಎಂದು ವರದಿಯಾಗುತ್ತಿದೆ. ಒಂದೆಡೆ ನೀರಿಲ್ಲ. ನೀರಿದ್ದರೂ ಕರೆಂಟಿಲ್ಲ. ಹಾಲಿದ್ದೂ ಕುಡಿಯುವಂತಿಲ್ಲ ಎಂಬುದು ಯಡಿಯೂರಪ್ಪ ಸರಕಾರದ ದೇಣಿಗೆಯಾಯಿತು. ಇದನ್ನು ಅಭಿವೃದ್ಧಿಯೆಂದು ಮೂರ್ಖರಿಗೆ ಮಾತ್ರ ವಿಶ್ಲೇಷಿಸಲು ಸಾಧ್ಯ. ಗೋಸಂತತಿ ಉಳಿಯಲಿ, ಹಾಲೇಕೆ ದುಬಾರಿಯಾಗಬೇಕು? ಕರೆಂಟೇ (ಕೊನೆಯ ಪುಟಕ್ಕೆ)

## 'ದಿ ಹಿಂದೂ'ವಿನ ಪ್ರವೀಣ್ ಸ್ವಾಮಿ ವಿರುದ್ಧ ದಾವೆ

### - ಜಮಾಅತ್ ಎಚ್ಚರಿಕೆ


Islamism, modernity & Indian

Indian jihadists are often seen as backward-looking fanatics. They are, in fact, products of a modern, pluralist society.

ನವದೆಹಲಿ: 'ದಿ ಹಿಂದೂ' ಆಂಗ್ಲ ದೈನಿಕದ ಹಿರಿಯ ಪ್ರತಿನಿಧಿ ಪ್ರವೀಣ್ ಸ್ವಾಮಿಯವರ 'ಇಸ್ಲಾಮಿಝಂ, ಮಾಡರ್ನಿಟಿ ಆಂಡ್ ಇಂಡಿಯನ್ ಮುಜಾಹಿದೀನ್' ಎಂಬ ಇತ್ತೀಚಿನ ಲೇಖನದ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲು ಜಮಾಅತೆ ಇಸ್ಲಾಮಿ ಹಿಂದ್ ಮುಂದಾಗಿದೆ.

"ಮುಸ್ಲಿಮ್ ಸಂಘಟನೆಗಳನ್ನು ವಿಶೇಷತಃ (15ನೇ ಪುಟಕ್ಕೆ)

## ಈ ಮಸೂದೆ ದೌರ್ಜನ್ಯವನ್ನು ತಡೆದೀತೇ?

ಕಳವು ಪ್ರಕರಣವೊಂದಕ್ಕೆ ಸಂಬಂಧಿಸಿ ಇತ್ತೀಚೆಗೆ ದ.ಕ. ಜಿಲ್ಲೆಯ ಪುತ್ತೂರು ನಗರ ಪೊಲೀಸರು ಖಲಂದರ್ ಶಾಫಿ ಎಂಬ ಯುವಕನನ್ನು ನಾಲ್ಕು ದಿನಗಳ ಕಾಲ ಠಾಣೆಯಲ್ಲಿ ಚಿತ್ರಹಿಂಸೆ ನೀಡಿ ನಂತರ ಸ್ವಲ್ಪ ಹಣವನ್ನು ಕೊಟ್ಟು ಕಳಿಸಿದ್ದಾರೆ. ವಿಷಯವೇನೆಂದರೆ ಪದ್ಮನಾಭ ಎಂಬ ವ್ಯಕ್ತಿ ಖಲಂದರ್ ಜೊತೆ ಪೈಂಟರ್ ಕೆಲಸ ಮಾಡುತ್ತಿದ್ದ. ಪದ್ಮನಾಭನ ನಡತೆ ಸರಿಯಿಲ್ಲವೆಂದು ಖಲಂದರ್ ಆತನ ಲೆಕ್ಕ ಚುಕ್ತಾ ಮಾಡಿ ದೂರ ಮಾಡಿದ್ದ. ನಂತರ ಪದ್ಮನಾಭ ಕಳ್ಳತನ ಪ್ರಕರಣವೊಂದರಲ್ಲಿ ಪೊಲೀಸ್ ಬಂಧಿಯಾದ. ಈಗಾಗಲೇ ಖಲಂದರ್ ಮೇಲೆ ಕೋಪಗೊಂಡಿದ್ದ ಪದ್ಮನಾಭ ಠಾಣೆಯಲ್ಲಿ ಖಲಂದರ್‌ನ ಹೆಸರು ಹೇಳಿಬಿಟ್ಟ. ಕೆಲಸ ಮುಗಿಸಿ ನಡೆದು ಕೊಂಡು ಬರುತ್ತಿದ್ದ ಖಲಂದರ್‌ನನ್ನು ಪೊಲೀಸರು ಎತ್ತಿ ಹಾಕಿದರು. ನಂತರ ನಡೆದದ್ದೇ ಬೇರೆ. ಕಣ್ಣಿಗೆ ಮೆಣಸಿನ ಪುಡಿ ಎರಚಿ ಲಾಠಿಯಿಂದ ಹೊಡೆದರು. ಸಿಗರೇಟಿನಿಂದ ಚುಚ್ಚಿದ ಗಾಯಗಳು ಚಿತ್ರ ಹಿಂಸೆಯ ವೃತ್ತಾಂತವನ್ನು ಸಾರಿ ಹೇಳುತ್ತವೆ.

ಸ್ವತಂತ್ರ ಭಾರತದಲ್ಲಿ ಪೊಲೀಸ್ ದೌರ್ಜನ್ಯಗಳ (ಕೊನೆಯ ಪುಟಕ್ಕೆ)

## ಮನುಷ್ಯರಲ್ಲಿ ಮಲ ತಿನ್ನಬೇಕಾದವರೂ ಇದ್ದಾರೆಯೇ?



■ ಸಲೀಮ್ ಬೋಳಂಗಡಿ

ಇತ್ತೀಚೆಗೆ ಹರ್ಯಾಣದ ಜಿಲ್ಲಾ ಸೆಶನ್ಸ್ ನ್ಯಾಯಾಲಯವು ಯುವ ಜೋಡಿಯೊಂದನ್ನು ಕೊಂದ ಕಾರಣಕ್ಕೆ ಐವರಿಗೆ ಗಲ್ಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಪ್ರಕರಣದ ವಿವರ ಈ ರೀತಿ ಇದೆ. ಒಂದೇ ಗೋತ್ರದವರಾದ ಮನೋಜ್ ಮತ್ತು ಬಬ್ಲಿ ಪರಸ್ಪರ ಪ್ರೀತಿಸಿ ಸಾಮಾಜಿಕ ಕಟ್ಟಳೆಗಳನ್ನು ವಿರೋಧಿಸಿ ಮದುವೆಯಾದರು. ಇದರಿಂದ ಕೆರಳಿದ ಖಾಪ್ ಪಂಚಾಯತ್ ಕಟ್ಟೆಯು ಅವರನ್ನು ಹತ್ಯೆ ಮಾಡಲು ಆದೇಶಿಸಿತು. ಅದರಂತೆ ಆ ನವ ಜೋಡಿಯನ್ನು ಅಪಹರಿಸಿ ಕೊಲ್ಲಲಾಯಿತು. ಈ ಬಗ್ಗೆ ಯುವಕನ ಕಡೆಯವರು ಕೋರ್ಟಿನ ಮೊರೆ ಹೋದರು. ಕೋರ್ಟು, ವಾದ ವಿವಾದಗಳನ್ನು ಆಲಿಸಿ ಒಂದು ಐತಿಹಾಸಿಕ ತೀರ್ಪನ್ನು ನೀಡಿತು. ಇದು ತನ್ನದೇ ಆದ ರೀತಿಯಲ್ಲಿ ಕಾನೂನು ರಚಿಸಿ ದಬ್ಬಾಳಿಕೆ ನಡೆಸುವ ಮೇಲ್ವರ್ಗದ ಕೆಲವು ಪ್ರಭಾವೀ ಶಕ್ತಿಗಳಿಗೆ ನೀಡಿದ ಎಚ್ಚರಿಕೆಯು ಕರೆಗಂಟೆಯಾಗಿದೆ. ಕಾನೂನನ್ನು (15ನೇ ಪುಟಕ್ಕೆ)

# 1 CAD COMPANY IN ASIA

CADD CENTRE

UDUPI
0820 - 2522741
0820 - 2521374

MANGALORE
0824 - 3256070
0824 - 4285772

INDUSTRY SPECIFIC SPECIALIZED COURSES
● Mechanical CADD ● Civil CADD ● Architectural CADD ● Electrical CADD ● Interior Architecture & Design ● 3DS Max ● Project Planning & Management using Primavera / M.S. Project. ANSYS

L.C.C. Building Opp. M.G.M. College, Kunjibettu, Udupi - 576102
Ist flr, Prime Towers, Opp. Mangalore Nursing Home, Bendoorwell, Mangalore - 3

ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಶಶಿ ತರೂರ್‌ರ ಬಹು'ಪತ್ನಿತ್ವ'

ಈ ದೇಶದ ಕೆಲವು ಮಾಧ್ಯಮಗಳು ಮುಸ್ಲಿಮರಿಗೆಂದೇ ಕೆಲವು ವಿಶೇಷ ಪದಗಳನ್ನು ಮತ್ತು ರೇಖಾ ಚಿತ್ರವನ್ನು ತಯಾರಿಸಿ ಇಟ್ಟುಕೊಂಡಿವೆ. ಅವಕಾಶ ಸಿಕ್ಕಾಗಲೆಲ್ಲಾ ಅವು ಎಷ್ಟು ನಾಜೂಕಾಗಿ ಇವುಗಳನ್ನು ಬಳಸುತ್ತವೆ ಅಂದರೆ, ವ್ಯಕ್ತಿ ಯಾವ ಧರ್ಮಕ್ಕೆ ಸೇರಿದವ ಎಂಬುದನ್ನು ಪದಪ್ರಯೋಗದಿಂದಲೇ ಅಂದಾಜಿಸಬಹುದು. ಭಯೋತ್ಪಾದಕ ಎಂಬ ಪದ ಬರುವಲ್ಲೆಲ್ಲಾ 'ಮುಸ್ಲಿಮ್' ಎಂದು ಓದುವಷ್ಟರ ಮಟ್ಟಿಗೆ ಆ ಪದದ ಮೂಲ ಅರ್ಥವನ್ನು ಕೆಡಿಸಿಬಿಡಲಾಗಿದೆ. ಗಡ್ಡ ಮತ್ತು ಪೈಜಾಮ ಇಲ್ಲದ ಟೆರರಿಸ್ಟ್‌ನ ಚಿತ್ರವನ್ನು ಇವತ್ತು ಕೆಜಿ ಕ್ಲಾಸಿನ ಮಗು ಕೂಡಾ ಬಿಡಿಸುವ ಸಾಧ್ಯತೆ ಇಲ್ಲ. ಹಾಗಂತ ಈ ಮಕ್ಕಳು ಟೆರರಿಸ್ಟನ್ನು ನೋಡಿವೆ ಎಂದಲ್ಲ. ಅವು ವೀಕ್ಷಿಸಿದ ಸುದ್ದಿವಾಹಿನಿಗಳು ಮತ್ತು ಓದಿದ ಪತ್ರಿಕೆಗಳು ಅಂಥದ್ದೊಂದು ದೃಶ್ಯ ರೂಪವನ್ನು ಟೆರರಿಸ್ಟ್‌ನ ಜಾಗದಲ್ಲಿ ಕಟ್ಟಿಕೊಟ್ಟಿವೆ. ಇಷ್ಟಕ್ಕೂ ಮಾಲೇಗಾಂವ್, ಸಮ್‌ಜೋತಾ ಎಕ್ಸ್‌ಪ್ರೆಸ್, ಪಣಜಿ ಬಾಂಬ್ ಸ್ಫೋಟಗಳು ಹಾಗೂ ದಾಂಟೆವಾಡದ ನಕ್ಸಲ್ ನರಹತ್ಯೆಗಳಲ್ಲಿ ಮುಸ್ಲಿಮ್ ಅಲ್ಲದ ಮತ್ತು ಗಡ್ಡ ಬಿಡದ ಮಂದಿಯೇ ಆರೋಪಿಗಳಾಗಿದ್ದಾರೆ. ಆದರೆ ಟೆರರಿಸ್ಟ್‌ನ ಜಾಗದಲ್ಲಿ ಇವರ ಚಿತ್ರ ಮೂಡುವುದಿದೆಯೇ? (ಬ್ಯಾಲೆನ್ಸ್ ಕಾಯ್ದುಕೊಂಡ ಪತ್ರಿಕೆ, ವಾಹಿನಿಗಳೂ ಇವೆ) ನಿಜವಾಗಿ ಭಯೋತ್ಪಾದನೆ ಎಂದಲ್ಲ ಮುಸ್ಲಿಮರ ಮದುವೆಯೂ ಹೀಗೆ ಅನುಚಿತ ಪದ ಪ್ರಯೋಗಕ್ಕೆ ಒಳಗಾಗಿಬಿಟ್ಟಿದೆ. ಬಹುಪತ್ನಿವಲ್ಲಭ ಎಂಬುದು ಮುಸ್ಲಿಮರಿಗೆ ಮಾತ್ರ ಬಳಸುವ ಪದ. ಒಮ್ಮೊಮ್ಮೆ ಉಪಸಂಪಾದಕರ ಕಣ್ತಪ್ಪಿನಿಂದ ಅಪ್ಪಿ-ತಪ್ಪಿ ಮುಸ್ಲಿಮೇತರರಿಗೂ ಈ ಪದ ಬಳಕೆಯಾದದ್ದಿದೆ. ಆದರೂ ಒಂದಕ್ಕಿಂತ ಹೆಚ್ಚು ಮದುವೆಯಾಗುವುದು ಮುಸ್ಲಿಮರದೇ ರೂಢಿ ಎಂದು ಈ ದೇಶದ ಹೆಚ್ಚಿನ ಮಂದಿ ನಂಬಿದ್ದರೆ ಅದರ ಹಿಂದೆ ಮಾಧ್ಯಮಗಳ ದೊಡ್ಡದೊಂದು ಪಾತ್ರ ಇದೆ. ಕೇಂದ್ರದ ವಿದೇಶಾಂಗ ಸಹಾಯಕ ಸಚಿವ ಶಶಿ ತರೂರ್‌ರು ಮೂರನೇ ಮದುವೆಗೆ ಮುಂದಾಗಿರುವ ಸುದ್ದಿಯನ್ನು ಪತ್ರಿಕೆಗಳು ಪ್ರಕಟಿಸಿದುವು. 'ಕಾಶ್ಮೀರಿ ಸುಂದರಿಗೆ ಮನಸೋತ ತರೂರ್' ಎಂಬಂಥ ಶೀರ್ಷಿಕೆಗಳನ್ನು ಹೆಚ್ಚಿನ ಪತ್ರಿಕೆಗಳು ಕರುಣಿಸಿದ್ದುವು. ಇಷ್ಟೊಂದು ಲಾವಣ್ಯಯುತ ಮತ್ತು ಮಧುರ ಶೀರ್ಷಿಕೆಯನ್ನು ಮುಸ್ಲಿಮನೊಬ್ಬನ ಮೂರನೇ ಮದುವೆಗೆ ಯಾವ ಪತ್ರಿಕೆಯಾದರೂ ಒದಗಿಸಲು ಸಾಧ್ಯವಿದೆಯೇ? ಒಂದು ವೇಳೆ ತರೂರ್‌ರಂಥ ಸಾಹಸಕ್ಕೆ ಮುಸ್ಲಿಮನೊಬ್ಬ ಮುಂದಾಗುತ್ತಿದ್ದರೆ, ಈ ಹಿಂದಿನ ಎರಡು ಪತ್ನಿಯರ ಕರುಣಾಜನಕ ಕತೆಯನ್ನು ಅವು ಛಾಪಿಸುತ್ತಿರಲಿಲ್ಲವೇ? ಅವರಿಗೆ ಎಷ್ಟು ಮಕ್ಕಳಿವೆ ಎಂಬ ಅಂಕಿ-ಅಂಶವನ್ನು ಮುಂದಿಟ್ಟು, ಹೊಸ ಮದುವೆಯಿಂದ ಆಗಬಹುದಾದ ಮಕ್ಕಳ ಅಂದಾಜನ್ನು ಲೆಕ್ಕ ಹಾಕಿ, ಒಟ್ಟು ಎಷ್ಟಾಗಬಹುದೆಂದೂ ಮತ್ತು ಜನಸಂಖ್ಯಾ ಹೆಚ್ಚಳದಲ್ಲಿ ಮುಸ್ಲಿಮರ ಪಾತ್ರ ಯಾವ ಪ್ರಮಾಣದ್ದೆಂದೂ ವಿಶ್ಲೇಷಣೆ ನಡೆಯುತ್ತಿರಲಿಲ್ಲವೇ? ಇಸ್ಲಾಮಿನಲ್ಲಿ ಬಹು ಪತ್ನಿತ್ವಕ್ಕೆ ಇರುವ ಅವಕಾಶ ಮತ್ತು ಅದರಿಂದ ಮಹಿಳಾ ಕುಲಕ್ಕೆ ಆಗುತ್ತಿರುವ 'ಭೀಕರ' ಮಟ್ಟದ ಹಾನಿಯ ಬಗ್ಗೆ ಅಂಕಣ ಬರಹ, ಚಾವಡಿ ಚರ್ಚೆಗಳು ನಡೆಯುತ್ತಿರಲಿಲ್ಲವೇ? ಇಷ್ಟಕ್ಕೂ ತರೂರ್‌ರು ತನ್ನ ಈ ಹಿಂದಿನ ಇಬ್ಬರು ಪತ್ನಿಯರಿಗೆ ವಿಚ್ಛೇದನ ಕೊಟ್ಟಿರುವುದನ್ನು ಹೆಚ್ಚಿನ ಪತ್ರಿಕೆಗಳು ಎಷ್ಟು ಸುಲಲಿತವಾಗಿ ಬರೆದಿವೆ ಎಂದರೆ, ಅದೊಂದು ಮಾಮೂಲು ಪ್ರಕ್ರಿಯೆ ಎಂದೇ ಅನಿಸುತ್ತದೆ. ಅದೇ ಮುಸ್ಲಿಮನೊಬ್ಬ ತಲಾಕ್ ಕೊಡಲಿ, ಅದನ್ನು ಓದುವಾಗಲೇ ವ್ಯಕ್ತಿಯ ವಿರುದ್ಧ ಅಪಾರ ಪ್ರಮಾಣದ ಸಿಟ್ಟು, ಅಸಹನೆ ಮೂಡುತ್ತದೆ. ಇಸ್ಲಾಮ್ ಮಹಿಳೆಗೆ ಎಂಥ ಅನ್ಯಾಯ ಮಾಡುತ್ತಿದೆ ಎಂದು ಅನಿಸಿ ಬಿಡುತ್ತದೆ.

ನಿಜವಾಗಿ ಮದುವೆಯಾಗುವುದೇ ಅಪರಾಧ ಅಲ್ಲ. ಅದು ಅಪರಾಧವಾಗಿ ಕಾಣುವುದು ಅದನ್ನು ವಿಶ್ಲೇಷಿಸುವವರ ಕೈ ಮತ್ತು ಬಾಯ್ಚಳಕದಿಂದ. ಈ ದೇಶದಲ್ಲಿ ಶಶಿ ತರೂರ್‌ರಂತೆ ಮದುವೆಯಾದ ಕೋಟ್ಯಂತರ ಮುಸ್ಲಿಮೇತರರಿದ್ದಾರೆ. ಕಟ್ಟಿಕೊಂಡವಳ ಜೊತೆ ಇಟ್ಟುಕೊಂಡವಳಿರುತ್ತಾಳೆ. ಆಕೆಯ ಪಾಡು ಎಂಥದ್ದೆಂದರೆ ಆಕೆಗೊಂದು ಸರಿಯಾದ ಐಡೆಂಟಿಟಿಯಿರುವುದಿಲ್ಲ. ಮಕ್ಕಳಿಗೆ 'ಅಪ್ಪ' ಇರುವುದಿಲ್ಲ. ಆಸ್ತಿಯಲ್ಲಿ ಹಕ್ಕಿರುವುದಿಲ್ಲ. ಪುರುಷ ಈಕೆಯಿಂದ ಎಲ್ಲ ಸುಖವನ್ನೂ ಪಡೆದು ಅಂತಿಮವಾಗಿ ಕಸದ ತೊಟ್ಟಿಗೆ ಎಸೆದು ಬಿಟ್ಟಿರುತ್ತಾನೆ. ಇಷ್ಟಕ್ಕೂ ಅನಧಿಕೃತವಾಗಿ ಒಂದಕ್ಕಿಂತ ಹೆಚ್ಚು ಮಹಿಳೆಯರೊಂದಿಗೆ ಸಂಬಂಧ ಇಟ್ಟುಕೊಳ್ಳುವುದು ಸರಿ, ಆದರೆ ಅಧಿಕೃತವಾಗಿ ಇಬ್ಬರನ್ನು ಹೊಂದುವುದು ತಪ್ಪು ಅನ್ನುವುದಕ್ಕೆ ಏನರ್ಥವಿದೆ? ನಿಜವಾಗಿ ಇಸ್ಲಾಮ್ ಬಹುಪತ್ನಿತ್ವವನ್ನು ಯಾರ ಮೇಲೂ ಕಡ್ಡಾಯಗೊಳಿಸಿಲ್ಲ. ಅದೊಂದು ಸಂಕೀರ್ಣ ಸಂದರ್ಭದಲ್ಲಿ ಇರುವ ಅವಕಾಶ ಮಾತ್ರ. ಅನೈತಿಕ ಸಂಬಂಧವನ್ನು ತಡೆಯುವ ಮತ್ತು ವೇಶ್ಯಾವಾಟಿಕೆಯನ್ನು ಇಲ್ಲವಾಗಿಸುವ ಈ ಪ್ರಯೋಗಕ್ಕೆ ಇವತ್ತು ಕ್ರೂರ ಇಮೇಜು ಬಂದಿದ್ದರೆ, ಅದಕ್ಕೆ ಕೆಲವು ವಿಶೇಷ ತಳಿಯ ಬರಹ ಮತ್ತು ಭಾಷಣಗಾರರೇ ಕಾರಣ.

ನಿಜವಾಗಿ ಇವತ್ತು ಪಾರಂಪರಿಕ ಮೌಲ್ಯಗಳು ಮತ್ತು ಆಧುನಿಕ ದೇಹ ಕೇಂದ್ರಿತ ಆಲೋಚನೆಗಳ ಮಧ್ಯೆ ಸ್ಪರ್ಧೆ ಏರ್ಪಟ್ಟಿದೆ. ಬಳಸಿ ಎಸೆಯುವ 'ಲಿವಿಂಗ್ ಟುಗೆದರ್'ನ ಮುಂದೆ ಮದುವೆ ಮಂಕಾಗುವಷ್ಟು ಕಳೆಗುಂದುತ್ತಿದೆ. ಮದುವೆ ಮತ್ತು ವಿಚ್ಛೇದನಗಳು ಸಾಮಾನ್ಯ ಅನ್ನುವಷ್ಟರ ಹಂತಕ್ಕೆ ತಲುಪಿಬಿಟ್ಟಿವೆ. ಇಂಥ ಸಂದರ್ಭದಲ್ಲಿ ಶಶಿ ತರೂರ್ ಮೂರನೇ ಮದುವೆ ಮೂಲಕ ಚರ್ಚೆಯೊಂದನ್ನು ಹುಟ್ಟು ಹಾಕಿದ್ದಾರೆ. ಇಷ್ಟಕ್ಕೂ ಶಶಿ ತರೂರ್‌ರ ಜಾಗದಲ್ಲಿ ಓರ್ವ ಸಾಮಾನ್ಯ ರೈತನೋ ಕೂಲಿ ಕಾರ್ಮಿಕನೋ ಇದ್ದಿದ್ದರೆ ಏನಾಗುತ್ತಿತ್ತು? ಆತ ತನ್ನ ಇಬ್ಬರು ಬಡಪಾಯಿ ಪತ್ನಿಯರಿಗೆ ವಿಚ್ಛೇದನ ಕೊಟ್ಟು ಮೂರನೆ ಮದುವೆಗೆ ಮುಂದಾಗುತ್ತಿದ್ದರೆ ಆ ವಿಚ್ಛೇದಿತೆಯರ ಸ್ಥಿತಿ ಹೇಗಿರುತ್ತಿತ್ತು? ಬೀದಿ ಪಾಲಲ್ಲವೇ? ಅದಕ್ಕಿಂತ ಒಬ್ಬಳನ್ನು ಇಟ್ಟುಕೊಂಡೇ ಇನ್ನೊಬ್ಬಳನ್ನು ವಿವಾಹವಾಗು ಎಂದರೆ, ಆತ ಅಂಥ ವಿವಾಹಕ್ಕೆ ಮುಂದಾಗುವ ಸಾಧ್ಯತೆಯೇ ಕಡಿಮೆ. ಯಾಕೆಂದರೆ, ಇಬ್ಬರನ್ನೂ ಸಮಾನವಾಗಿ ನೋಡಬೇಕು ಎಂಬ ಇಸ್ಲಾಮಿನ ಕಡ್ಡಾಯ ನಿಯಮ ಆ ಬಡಪಾಯಿಯನ್ನು ಅಂಥ ಸಾಹಸದಿಂದ ತಡೆದು ನಿಲ್ಲಿಸುತ್ತದೆ. ಬಹುಪತ್ನಿತ್ವಕ್ಕೆ ಕೇವಲ ಅವಕಾಶ ಕೊಟ್ಟು ಸಮಾನವಾಗಿ ನೋಡುವುದನ್ನು ಇಸ್ಲಾಮ್ ಕಡ್ಡಾಯಗೊಳಿಸಿರುವುದು ಈ ಕಾರಣಕ್ಕಾಗಿಯೇ. ಆದರೆ ಶಶಿ ತರೂರ್‌ರಂಥವರು ಬೇಕಾದಷ್ಟು ಬಳಸಿ ಇನ್ನೊಂದು ಬೇಕೆಂದು ಅನಿಸಿದಾಗ ವಿಚ್ಛೇದನ ಕೊಡುತ್ತಾರೆ. ಬಳಸಿ ಎಸೆಯುವ ಈ ನಿಯಮ ಮಹಿಳಾ ಪರವೇ? ಒಂದೇ ಮದುವೆಗೆ ಬಲವಂತಪಡಿಸುವ ಮತ್ತು ಸಕಾರಣವಿಲ್ಲದೆ ವಿಚ್ಛೇದನ ಕೊಡುವುದನ್ನು ಅಪರಾಧ ಎಂದು ಸಾರುವ ಇಸ್ಲಾಮ್‌ನ ನಿಲುವು ಹೇಗೆ ಹಿಂಸಕ, ಮಹಿಳಾ ವಿರೋಧಿ ಆಗುತ್ತದೆ? ಇಷ್ಟಕ್ಕೂ ಸಲಿಂಗರತಿ ಮತ್ತು ಲಿವಿಂಗ್ ಟುಗೆದರ್‌ಗೆ ಈ ದೇಶದಲ್ಲಿ ಅನುಮತಿ ಸಿಕ್ಕಿರುವಾಗ ಯಾಕೆ ಇದಕ್ಕೊಂದು ಪರ್ಯಾಯವಾಗಿ ಇಸ್ಲಾಮಿನ ನೈತಿಕ, ಸಾಮಾಜಿಕ ಸಂಹಿತೆಗಳನ್ನು ಚರ್ಚಿಸಿ ನೋಡಬಾರದು? ಕನಿಷ್ಠ ಚರ್ಚೆಯನ್ನಾದರೂ ಮಾಡಬಹುದಲ್ಲವೇ?

ಏನೇ ಆಗಲಿ, ಶಶಿ ತರೂರ್‌ರ ಮೂರನೇ ಮದುವೆ ಇಸ್ಲಾಮಿನ ಬಹುಪತ್ನಿತ್ವವನ್ನು ಚರ್ಚಿಸುವುದಕ್ಕೆ ಒಂದು ನೆಪವಾದರೆ ಅದು ಖಂಡಿತ ಸ್ವಾಗತಾರ್ಹ.

## ವಿ ಚಾ ರ ಮ ಣಿ

ಪೈಗಂಬರರೇ, ನಾವು ನಿಮ್ಮನ್ನು ಸಾಕ್ಷಿದಾರರಾಗಿಯೂ ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರಾಗಿಯೂ- ಅಲ್ಲಾಹನ ಅನುಮತಿಯಿಂದ ಅವನ ಕಡೆಗೆ ಕರೆ ನೀಡುವವರಾಗಿಯೂ ಪ್ರಕಾಶಮಯ ಜ್ಯೋತಿಯಾಗಿಯೂ ಮಾಡಿ ಕಳುಹಿಸಿರುತ್ತೇವೆ. ಅಲ್ಲಾಹನ ಕಡೆಯಿಂದ ಅವರಿಗಾಗಿ ಮಹಾ ಅನುಗ್ರಹವಿದೆ ಎಂಬ ಸುವಾರ್ತೆಯನ್ನು ಸತ್ಯವಿಶ್ವಾಸಿಗಳಿಗೆ ತಿಳಿಸಿ ಬಿಡಿರಿ. ಮತ್ತು ಸತ್ಯ ನಿಷೇಧಿಗಳಿಗೂ ಕಪಟವಿಶ್ವಾಸಿಗಳಿಗೂ ಎಷ್ಟು ಮಾತ್ರಕ್ಕೂ ಮಣಿಯದಿರಿ. ಅವರ ಕಿರುಕುಳಗಳನ್ನು ಕಡೆಗಣಿಸಿರಿ. ಅಲ್ಲಾಹನ ಮೇಲೆ ಭರವಸೆ ಇಡಿರಿ. ಮನುಷ್ಯನು ತನ್ನ ವ್ಯವಹಾರಗಳನ್ನು ಒಪ್ಪಿಸಲು ಅಲ್ಲಾಹನೇ ಸಾಕು. (ಪವಿತ್ರ ಕುರ್‌ಆನ್: 33:45-48)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಬಟ್ಲಾಹೌಸ್ ಎನ್‌ಕೌಂಟರ್

ಪೊಲೀಸರಿಂದ ನಡೆಯುವ ಎನ್‌ಕೌಂಟರ್‌ಗಳು ಎಲ್ಲವೂ ಅಸಲಿ ಅಲ್ಲ. ಅದರಲ್ಲಿ ಕೆಲವು ನಕಲಿಯಾಗಿಯೂ ಇರುತ್ತವೆ ಎನ್ನುವುದು ಸಂಚಿಕೆ 2ರ 'ಬಟ್ಲಾ ಹೌಸ್ ಎನ್‌ಕೌಂಟರ್' ಲೇಖನದಿಂದ ತಿಳಿದು ಬಂದಿತು. ಕಾಂಗ್ರೆಸ್ ಸರಕಾರದಲ್ಲಿ ಇದು ನಡೆದದ್ದೆನ್ನುವುದು ಗಂಭೀರವಾಗಿ ಚಿಂತಿಸುವಂತೆ ಮಾಡಿದೆ.

ಏ.ಕೆ.ಕೆ. ಅವರ 'ಎಕನಾಮಿಕ್ ಹಿಟ್‌ಮೆನ್‌ಗಳು' ಲೇಖನ ಓದಿ ನಿಬ್ಬೆರಗಾದೆ. ಅಮೇರಿಕದ ತಾಳಕ್ಕೆ ಕುಣಿಯುವ ನಮ್ಮ ಸರಕಾರಗಳು ತಮ್ಮ ಸ್ವಂತಿಕೆಯನ್ನೇ ಕಳೆದುಕೊಂಡಿರುವಂತೆ ವರ್ತಿಸುತ್ತಿವೆ. ನಮಗೆ ಅಭಿವೃದ್ಧಿ ಬೇಕು. ದೊಡ್ಡ ದೊಡ್ಡ ಕೈಗಾರಿಕೆಗಳಲ್ಲ. ನಮ್ಮದು ಕೃಷಿ ಪ್ರಧಾನ ದೇಶ, ಕೃಷಿ ಭೂಮಿ ಅಭಿವೃದ್ಧಿಗೊಳ್ಳಲಿ. ಅತಿ ಚಿಕ್ಕ ರಾಷ್ಟ್ರ ಇಸ್ರೇಲ್ ಕೃಷಿಯಲ್ಲಿ ಎಷ್ಟು ಮುಂದುರಿದಿದೆ? ಯಥೇಚ್ಛ ಮಳೆಯಾಗುವ ಭಾರತವೇಕೆ ಕೃಷಿಯಲ್ಲಿ ಹಿಂದುಳಿದಿದೆ? ಮಳೆಯ ನೀರನ್ನು ಅವರು ಬಳಸುವ ಹಾಗೆ ನಾವೇಕೆ ಬಳಸಿಕೊಳ್ಳುತ್ತಿಲ್ಲ? ಆಹಾರ ಧಾನ್ಯದ ಜೊತೆ ನೀಡುವ ತೋಟಗಾರಿಕಾ ಬೆಳೆಗಳಿಗೂ ಪ್ರಾಮುಖ್ಯತೆ, ಯೋಜನೆಗಳನ್ನು ನಮ್ಮ ಸರಕಾರ ಹಾಕಿಕೊಳ್ಳಲಿ. ಆದರೆ ಬೇನಾಮಿ ಹೆಸರಿನ ಕಂಪೆನಿಗಳ ಜೊತೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಸಾಲ ತರುವುದನ್ನು ಸರಕಾರ ನಿಲ್ಲಿಸಲಿ. ಕೆರೆಗಳನ್ನು ಅಭಿವೃದ್ಧಿ ಪಡಿಸಲಿ. ಕಿರು ವಿದ್ಯುತ್ ಘಟಕಗಳ ನಿರ್ಮಾಣಕ್ಕೆ ಪ್ರಾಮುಖ್ಯತೆ ನೀಡಲಿ. ವಿಶೇಷವಾಗಿ ಅರಣ್ಯ ಬೆಳೆಸುವತ್ತ ಗಮನ ಹರಿಸಲಿ.

ಹೊಟ್ಟೆ ತುಂಬಿದವರು ಅಧಿಕಾರದಲ್ಲಿ ಕುಳಿತರೆ ಏನೆಲ್ಲಾ ಆಲೋಚಿಸುತ್ತಾರೆ ಎನ್ನುವ ಸಂಪಾದಕೀಯ ಅದ್ಭುತವಾಗಿದೆ. ಗೋರಕ್ಷಣೆಯ ಮಸೂದೆ ಜಾರಿಯಲ್ಲಿಯೇ ಇದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಕೆಲವರನ್ನು ಸಂತುಷ್ಟಗೊಳಿಸಲು ಮಸೂದೆ ಮಂಡಿಸಿದ್ದಾರೆ. ಜಾನುವಾರುಗಳು ಹೆಚ್ಚಾದರೆ ಅವುಗಳಿಗೆ ಮೇವು ಎಲ್ಲಿಂದ ತರುವುದು? ಮುಸ್ಲಿಮರಿಗಿಂತಲೂ ದಲಿತರೇ ದನದ ಮಾಂಸ ತಿನ್ನುತ್ತಾರೆ. ತೊಗಲಿನ ಬೆಲ್ಟ್, ವೆನಿಟಿ ಬ್ಯಾಗ್, ಚಪ್ಪಲಿಗಳನ್ನು ಹೇಗೆ ಯಾವುದರಿಂದ ತಯಾರಿಸುವುದು ಮುಖ್ಯಮಂತ್ರಿಗಳೇ? ಇದಕ್ಕೆ ದಯಮಾಡಿ ಉತ್ತರಿಸಿ, ಮಸೂದೆ ಮಂಡಿಸಿ.

ಅಬ್ದುಲ್ ವಹ್ಹಾಬ್ ಮುಲ್ಲಾ ಗಂಗಾವತಿ

### ತಿದ್ದುಪಡಿ

**ಇದೇ ಸಂಚಿಕೆಯ ಪುಟ 6ರಲ್ಲಿ ಆಂದೋಲನದ ಹರಿಕಾರರು ಎಂಬ ಲೇಖನ ಮಾಲೆಯಲ್ಲಿ ಶಿವಮೊಗ್ಗದ ಅಬ್ದುಲ್ ವಹಾಬ್‌ರವರ ಭಾವ ಚಿತ್ರದ ಜಾಗದಲ್ಲಿ ಕಣ್ತಪ್ಪಿನಿಂದಾಗಿ ಅಹ್ಮದ್ ಹುಸೈನ್ ಕೊಪ್ಪಳರವರ ಭಾವಚಿತ್ರ ಪ್ರಕಟವಾಗಿದೆ. ಪ್ರಮಾದಕ್ಕೆ ವಿಷಾದಿಸುತ್ತೇವೆ. –ಸಂ.**

### ಪರ್ದಾ ಹಟಾವೋ

ಕನ್ನಡ ಪ್ರಭ 'ಪರ್ದಾ ಹಟಾವೊ' ಲೇಖನದ ಮೂಲಕ ಸ್ವಯಂ ಪರ್ದಾವನ್ನು ಸರಿಸಿಕೊಂಡು ನಾನು ನಿಜವಾಗಿಯೂ ಏನಾಗಿದ್ದೇನೆ ಎಂದು ತೋರಿಸಿ ಕೊಟ್ಟಿದೆ. ಇಬ್ಬರು ಯುವಕರ ಪ್ರಾಣ ಹರಣಕ್ಕೆ ಕಾರಣವಾದ ಪರ್ದಾ ಹಟಾವೋ ಲೇಖನ ಸುಳ್ಳಿನ ಕಂತೆ ಮಾತ್ರವಲ್ಲ, ಕೋಮು ದ್ವೇಷದಕೆ ಪ್ರಚೋದನಕಾರಿ. ಯಾಕೆಂದರೆ ತಸ್ಲೀಮಾ ಹೇಳಿಕೆ ನೀಡಿದಂತೆ, ತಾನು ಬರೆಯದ ಅನೇಕ ವಿಷಯಗಳನ್ನು ಸುಳ್ಳು, ಕಪೋಲ ಕಲ್ಪಿತವಾಗಿ ಕನ್ನಡಪ್ರಭ ಪ್ರಕಟಿಸಿದೆ. ಈ ಮೂಲಕ ತಸ್ಲೀಮಾ ಎಂಬ ಮಹಿಳೆಗೂ ದ್ರೋಹ ವೆಸಗಿದ ಕನ್ನಡಪ್ರಭ ನಾಗರಿಕ ಸಮಾಜದಲ್ಲಿ ಸತ್ಯ ಸುದ್ದಿ ವಾಹಕನ ಸ್ಥಾನವನ್ನು ತುಂಬುವ ಅರ್ಹತೆ ಪಡೆದಿದೆಯೇ? ಸಂ 1ರಲ್ಲಿ ಈ ಬಗ್ಗೆ ಬೆಳಕು ಚೆಲ್ಲಿದ ಅರಫಾ ಮಂಚಿಯವರಿಗೆ ಕೃತಜ್ಞತೆಗಳು.

ಅಬೂಅನೀಸ್ ಕಲ್ಲಾಪು

## ಇಬ್ರಾಹೀಮ್ ಸಈದ್‌ರ ಕುರಿತು ಪುಸ್ತಕ

ಮರ್ಹೂಮ್ ಇಬಾಹೀಮ್ ಸಈದ್ ಸಾಹೇಬರು ಇಸ್ಲಾಮಿಗಾಗಿ ಬದುಕಿದವರು. ಇಸ್ಲಾಮಿನ ಸಂಸ್ಥಾಪನೆಯ ಹಾದಿಯಲ್ಲಿ ಅವಿರತ ಶ್ರಮಪಟ್ಟವರು. ಇಸ್ಲಾಮಿನ ಸಂದೇಶ ಪ್ರಚಾರದಲ್ಲಿ ತನ್ನ ಬದುಕನ್ನೇ ಮುಡಿವಾಗಿಟ್ಟವರು. ತಮ್ಮ ಬದುಕಿನಲ್ಲಿ ಅನೇಕಾರು ಗಣ್ಯರು, ಧಾರ್ಮಿಕ–ಸಾಮಾಜಿಕ ನಾಯಕರು, ಮಠ–ಮಂದಿರ ಸ್ವಾಮೀಜಿಗಳು ರಾಜಕೀಯ ಧುರೀಣರೊಂದಿಗೆ ಅವರ ಸಂಬಂಧ, ಒಡನಾಟಗಳಿದ್ದುವು.

ಮರ್ಹೂಮ್ ಇಬ್ರಾಹೀಮ್ ಸಈದ್‌ರವರ ಬದುಕಿನ ವಿವಿಧ ಆಯಾಮಗಳು ಜನಸಾಮಾನ್ಯರಿಗೆ ಅದರಲ್ಲೂ ಇಸ್ಲಾಮೀ ಆಂದೋಲನದ ಕಾರ್ಯಕರ್ತರಿಗೆ ಸ್ಫೂರ್ತಿದಾಯಕವಾಗಲೆಂಬ ನೆಲೆಯಲ್ಲಿ ಅವರ ಬದುಕಿನ ಸಂಕ್ಷಿಪ್ತ ಚಿತ್ರಣಗಳನ್ನು ಪುಸ್ತಕ ರೂಪದಲ್ಲಿ ತರಲು ಉದ್ದೇಶಿಸಲಾಗಿದೆ. ಆದ್ದರಿಂದ ಯಾವುದಾದರೂ ನೆಲೆಯಲ್ಲಿ ಅವರೊಂದಿಗೆ ಸಂಬಂಧವಿದ್ದವರು ಈ ಕೆಳಗಿನ ಮೂರು ವಿಷಯಗಳಿಗೆ ಸಂಬಂಧಿಸಿ ಸಂಕ್ಷಿಪ್ತವಾಗಿ ಬರೆದು ಕಳಿಸಬೇಕೆಂದು ವಿನಂತಿಸುತ್ತೇವೆ.

1. ಮರ್ಹೂಮ್ ಇಬ್ರಾಹೀಮ್ ಸಈದ್‌ರನ್ನು ನೀವು ಯಾವಾಗಿನಿಂದ ಬಲ್ಲಿರಿ? ಅವರೊಂದಿಗೆ ನಿಮ್ಮ ಸಂಬಂಧದ ಸ್ವರೂಪವೇನು?
2. ಅವರ ಬದುಕಿಗೆ ಸಂಬಂಧಿಸಿ ನಿಮ್ಮ ನೆನಪಿನಲ್ಲಿರುವ ಯಾವುದಾದರೂ ವಿಶೇಷ ಘಟನೆಯನ್ನು ವಿವರಿಸುವಿರಾ?
3. ಇಸ್ಲಾಮೀ ಸಂದೇಶ ಪ್ರಚಾರವೆಂಬುದು ಅವರ ಉಸಿರಾಗಿತ್ತು. ಈ ಹಾದಿಯಲ್ಲಿ ಅವರ ಪ್ರಯತ್ನದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನಿಮ್ಮ ಬರಹವನ್ನು **ಸಂಪಾದಕರು, ಸನ್ಮಾರ್ಗ ವಾರಪತ್ರಿಕೆ, ಹಿದಾಯತ್ ಸೆಂಟರ್ ಅಂಚೆ ಪೆಟ್ಟಿಗೆ ನಂ: 16ಬೀಬಿ ಅಲಾಬಿ ರಸ್ತೆ, ಮಂಗಳೂರು– 575001**. ಇವರಿಗೆ ಕಳುಹಿಸಬೇಕು.

# ಇಷ್ಟಕ್ಕೂ ನುಸಿ ಕಚ್ಚಿಸಿಕೊಂಡು ಕಾಡಲ್ಲಿರುವುದಕ್ಕೆ ಅವರಿಗೇನು ಹುಚ್ಚೇ?

ಏ.ಕೆ. ಕುಕ್ಕಿಲ

ಮಾನವ ಹಕ್ಕು ಹೋರಾಟಗಾರರು ಎಲ್ಲಿ ಅಡಗಿ ಕೂತಿದ್ದಾರೆ? ನಕ್ಸಲೀಯರ ಹೋರಾಟಕ್ಕೆ ಸಾಮಾಜಿಕ, ಆರ್ಥಿಕ ಕಾರಣಗಳನ್ನು ಕೊಟ್ಟು ಸಮರ್ಥಿಸುತ್ತಾರಲ್ಲಾ, ಅವರೇಕೆ ನಕ್ಸಲೀಯರ ನರಮೇಧವನ್ನು ಖಂಡಿಸುತ್ತಿಲ್ಲ? ಸೇನೆ ಅಂದರೇನು ರೋಬೋಟ್‌ಗಳಿಂದ ಕೂಡಿದ್ದು ಅಲ್ಲವಲ್ಲ. ಅವರೂ ನಕ್ಸಲರಂತೆ ಮನುಷ್ಯರೇ. ನಕ್ಸಲೀಯರನ್ನು ಎನ್‌ಕೌಂಟರಲ್ಲಿ ಕೊಂದು ಹಾಕಿದರೆ ಅದನ್ನು ನಕಲಿ ಎನ್ನುತ್ತಾ ತನಿಖೆಗೆ ಒತ್ತಾಯಿಸುವವರು ಯೋಧರ



ಕೊಬಾಡ್ ಗಾಂಧಿ



ಅನುರಾಧಾ

ಸಾವಿಗೆ ಕನಿಷ್ಠ ವಿಷಾದವನ್ನೂ ವ್ಯಕ್ತಪಡಿಸುತ್ತಿಲ್ಲವೇಕೆ?

ಕಳೆದ ವಾರ ಚತ್ತೀಸ್‌ಗಢದಲ್ಲಿ ನಕ್ಸಲೀಯರು 75 ಸೇನಾ ಯೋಧರನ್ನು ಕೊಂದ ಬಳಿಕ ಇಂಥ ಒಕ್ಕಣೆಯುಳ್ಳ ಪತ್ರಗಳು, ಲೇಖನಗಳು ಧಾರಾಳ ಪ್ರಕಟವಾಗಿವೆ. ಮಾನವ ಹಕ್ಕು ಹೋರಾಟಗಾರರನ್ನು ದೇಶ ವಿರೋಧಿಗಳು ಎಂದು ಹಣಿಯುವುದಕ್ಕೆ ಈ ನರಮೇಧವನ್ನು ಸಿಕ್ಕಾಪಟ್ಟೆ ಬಳಸಿಕೊಳ್ಳಲಾಗುತ್ತಿದೆ. ನಿಜವಾಗಿ ನಕ್ಸಲೀಯರ ಬಗ್ಗೆ ಅನುಕಂಪ ಹೊಂದಿರುವವರನ್ನೂ ಒಂದು ಹಂತದವರೆಗೆ ಸಂಕಟಕ್ಕೆ ಒಳಗಾಗಿಸಿದ ಕ್ರೌರ್ಯ ಇದು. ಪೊಲೀಸರನ್ನು ಕೊಂದು ನಕ್ಸಲರು ಸಾಧಿಸುವುದಾದರೂ ಏನನ್ನು? ಇಷ್ಟಕ್ಕೂ ಸೇನೆ ಮತ್ತು ಪೊಲೀಸ್ ಇಲಾಖೆಯಲ್ಲಿರುವುದು ಟಾಟಾ, ಬಿರ್ಲಾರ ಮಕ್ಕಳೇ? ಇವತ್ತಿನ ಯಾವ ರಾಜಕಾರಣಿಯ ಮಗನೂ ಸೇನೆಗೆ ಸೇರುವುದಿಲ್ಲ. ಎಲ್ಲೋ ಕೂಲಿ-ನಾಲಿ ಮಾಡಿ ಬದುಕುವವರ ಮಕ್ಕಳೇ ಇಂಥ ಇಲಾಖೆಯಲ್ಲಿರುವಾಗ ಅವರನ್ನು ಕೊಂದು ನಕ್ಸಲೀಯರು ಸಾಧಿಸುವುದಾದರೂ ಏನನ್ನು?

**ಇದು ನಿಮಗೂ ಗೊತ್ತು**

ಇವತ್ತು ಈ ದೇಶದಲ್ಲಿ ಅತ್ಯಂತ ಪ್ರಬಲವಾಗಿರುವುದು ಕೊಂಡಪಲ್ಲಿ ಸೀತಾರಾಮಯ್ಯರ ನಕ್ಸಲ್ ಸಿದ್ಧಾಂತ. 1967ರಲ್ಲಿ ಪಶ್ಚಿಮ ಬಂಗಾಲದ ನಕ್ಸಲ್ ಬಾರಿಯಲ್ಲಿ ಚಾರು ಮಜುಮ್ದಾರ್, ಕಾನೂ ಸನ್ಯಾಲ್ ಮತ್ತು ಅಝೀಝುಲ್ ಹಕ್ ಸ್ಥಾಪಿಸಿದ ನಕ್ಸಲ್ ಚಳವಳಿ ಆ ಬಳಿಕ ಹತ್ತು-ಹಲವು ಬಾರಿ ತುಂಡಾಗಿದೆ. ಚಾರು ಮಜುಮ್ದಾರ್ ಮತ್ತು ಕಾನೂ ಸನ್ಯಾಲ್ ಈಗಾಗಲೇ ಸಾವಿಗೀಡಾಗಿದ್ದಾರೆ. ಉಳಿದಿರುವ ಹಕ್ ಈಗ ಮಾತಾಡುತ್ತಿಲ್ಲ. ಈ ನಡುವೆ ಕೊಂಡಪಲ್ಲಿ ಸೀತಾರಾಮಯ್ಯ ನಕ್ಸಲ್ ಬಾರಿ ಸಿದ್ಧಾಂತಕ್ಕೆ ನವೀನ ವ್ಯಾಖ್ಯಾನ, ರೂಪುರೇಶೆಯನ್ನು ಒದಗಿಸಿದರು. ಇಷ್ಟಕ್ಕೂ ಹಕ್ಕು ವಂಚಿತರು, ದುರ್ಬಲರು, ಬುಡಕಟ್ಟು ಜನರ ಪರವಾಗಿ ಮತ್ತು ಶ್ರೀಮಂತ ವರ್ಗಗಳ (ವ್ಯವಸ್ಥೆಯೂ ಸೇರಿ) ದೌರ್ಜನ್ಯದ ವಿರುದ್ಧವಾಗಿ ಅವರು ಕಟ್ಟಿಕೊಟ್ಟ ಚಳುವಳಿ, ಇವತ್ತು ಯಾರ ವಿರುದ್ಧ ಬಂದೂಕು ಹಿಡಿಯುತ್ತಿದೆ? ವ್ಯವಸ್ಥೆ ಬಲವಾಗಿ ತಳವೂರಿರುವುದೇ ನಗರಗಳಲ್ಲಿ. ಬಂಡವಾಳಶಾಹಿಗಳು ಮತ್ತು ಅವರ ಬೆಂಬಲಿಗ ವ್ಯವಸ್ಥೆ ದುರ್ಬಲರು ಮತ್ತು ಸಣ್ಣ ಹಿಡುವಳಿದಾರರನ್ನು ಅಭಿವೃದ್ಧಿಯ ನೆಪದಲ್ಲಿ ನಿರಾಶ್ರಿತರಾಗಿಸುತ್ತಿರುವುದೂ ಬಹುತೇಕ ಪಟ್ಟಣಗಳ ಆಸುಪಾಸಿನಲ್ಲೇ. ಆದರೆ ಕಾಡಲ್ಲಿ ಕೂತಿರುವ ನಕ್ಸಲೀಯರು ಇವರ ವಿರುದ್ಧ ಹೋರಾಡುವುದಕ್ಕೆ ಸಾಧ್ಯವೇ? ಕಡಿಮೆ ಸಂಖ್ಯೆಯಲ್ಲಿರುವ ಕಾಡಿನ ಆದಿವಾಸಿಗಳನ್ನೂ, ಮಲೆಕುಡಿಯರನ್ನೂ ಜೊತೆ ಸೇರಿಸಿ ಅವರು ಪರ್ಯಾಯ ಸರಕಾರದ ಕನಸು ಕಾಣುವುದು ಎಷ್ಟು ಸರಿ? ಇಷ್ಟಕ್ಕೂ ನಕ್ಸಲೀಯರು ಹೋರಾಡುತ್ತಿರುವುದು ಮನುಷ್ಯರ ಹಕ್ಕುಗಳ ಕುರಿತೇ ಅಲ್ಲವೇ? ಹಾಗಿದ್ದರೆ ಮತ್ತೇಕೆ ಮನುಷ್ಯರು ತೀರಾ ವಿರಳವಾಗಿರುವ ಮತ್ತು ಪ್ರಾಣಿಗಳೇ ಅಧಿಕವಾಗಿರುವ ಕಾಡನ್ನು ಹೋರಾಟದ ತಾಣವಾಗಿ ಆಯ್ಕೆ ಮಾಡಿಕೊಂಡದ್ದು? ವ್ಯವಸ್ಥೆಯ ದುರ್ಬಲ ನೀತಿಗಳಿಂದಾಗಿ ರೈತ ಆತ್ಮಹತ್ಯೆಗೆ ಶರಣಾಗುತ್ತಿರುವಾಗ ನಕ್ಸಲರು ಕಾಡಿನಲ್ಲಿ ಕೂತು ಬಂದೂಕು ಸಿಡಿಸಿದರೆ ಏನು ಪ್ರಯೋಜನವಿದೆ? ವ್ಯವಸ್ಥೆ ದಿನೇ ದಿನೇ ಬಹುರಾಷ್ಟ್ರೀಯ ಕಂಪೆನಿಗಳ ಪರ ವಾಲುತ್ತಿದೆ. ಬಡವರು ನಿಧಾನವಾಗಿ ಹಕ್ಕು ಕಳಕೊಳ್ಳುತ್ತಿದ್ದಾರೆ. ರೈತ ಭೂಮಿಯನ್ನು ಸೆಝ್‌ಗಳು ಸ್ವಾಹಾ ಮಾಡುತ್ತಿವೆ. ನಮ್ಮನ್ನಾಳುವವರು ಪರಮ ಭ್ರಷ್ಟರಾಗುತ್ತಿದ್ದಾರೆ... ಎಲ್ಲ ಸರಿ. ಆದರೆ ಇವುಗಳ ವಿರುದ್ಧ ಕಾಡಿನಲ್ಲಿ ಚಳುವಳಿ ಹುಟ್ಟು ಹಾಕುವುದು ಪರಿಹಾರವಾದೀತೇ? ಪೊಲೀಸರನ್ನು ಕೊಂದ ಮಾತ್ರಕ್ಕೇ ವ್ಯವಸ್ಥೆ ಹೆಜ್ಜೆ ಹಿಂದಿಡುತ್ತದೆಂದು ನಂಬುವುದು ದಡ್ಡತನವಲ್ಲವೇ?

**ಇಷ್ಟಕ್ಕೂ**

ನಕ್ಸಲರೆಂದರೆ ಚಂದ್ರನ್, ವೀರಪ್ಪನ್, ಚಾರ್ಲ್ಸ್ ಶೋಭ್‌ರಾಜ್ ಖಂಡಿತ ಅಲ್ಲ.

**ಕೊಬಾಡ್ ಗಾಂಧಿ**

ಯಾವ ರೀತಿಯಲ್ಲಿ ನೋಡಿದರೂ ಕಾಡು ಸೇರಿ, ನುಸಿ ಕಚ್ಚಿಸಿಕೊಂಡು, ಸದಾ ಅಪಾಯವನ್ನೆದುರಿಸುತ್ತಾ ಬದುಕಬೇಕಾದ ಅಗತ್ಯ ಖಂಡಿತ ಇವರಿಗಿರಲಿಲ್ಲ. ಮುಂಬೈಯ ಸಮುದ್ರ ಕಿನಾರೆಯಲ್ಲಿರುವ ವರ್ಲಿಯ ಭವ್ಯ ಬಂಗಲೆಯಲ್ಲಿ ಈತ ಚಿನ್ನದ ಚಮಚವನ್ನೇ ಬಾಯೊಳಗಿಟ್ಟುಕೊಂಡು ಹುಟ್ಟಿದ್ದ. ಅಪ್ಪ ಆದಿ, ಗ್ಲಾಸ್ಕೋದ ಮಲ್ಟಿ ನ್ಯಾಶನಲ್ ಕಂಪೆನಿಯಲ್ಲಿ ಹಿರಿಯ ಆರ್ಥಿಕ ತಜ್ಞರಾಗಿದ್ದರು. ತಾಯಿ ನರ್ಗಿಸ್ ಕೂಡಾ ಉನ್ನತ ವಿದ್ಯಾಭ್ಯಾಸ ಹೊಂದಿದವಳು. ಅತ್ಯಂತ ಗೌರವಾನ್ವಿತ ಮತ್ತು ಎಡಪಂಥೀಯ ವಿಚಾರಧಾರೆಯ ಸೋಂಕೂ ತಟ್ಟದ ಫಾರ್ಸಿ-ಖೋಜಾ ಕುಟುಂಬದ ಸದಸ್ಯನಾಗಿದ್ದ ಕೊಬಾಡ್ ಗಾಂಧಿ ಕಲಿತದ್ದು ಪ್ರಸಿದ್ಧ ಡೂನ್ ಸ್ಕೂಲಲ್ಲಿ. ಇಂದಿರಾ ಗಾಂಧಿಯ ಪುತ್ರ ಸಂಜಯ್ ಗಾಂಧಿ ಮತ್ತು ಕೊಬಾಡ್ ಡೂನ್ ಸ್ಕೂಲಲ್ಲಿ ಸಹಪಾಠಿಗಳಾಗಿದ್ದರು. ಆ ಬಳಿಕ ಕೊಬಾಡ್ ಸೈಂಟ್ ಕ್ಸೇವಿಯರ್ ಕಾಲೇಜಲ್ಲಿ ಪದವಿ ಮುಗಿಸಿದ. ಬಳಿಕ ಲಂಡನ್ನಿನಲ್ಲಿ ಚಾರ್ಟರ್ಡ್ ಎಕೌಂಟ್ ಮುಗಿಸಿದ್ದ. ವಿಶೇಷ ಏನೆಂದರೆ, ಶ್ರೀಮಂತ ಅಪ್ಪ, ಭವ್ಯ ಬಂಗಲೆ ಮತ್ತು ಉನ್ನತ ವಿದ್ಯಾಭ್ಯಾಸ ಹೊಂದಿರುವ ಕೊಬಾಡ್, ಮನಸ್ಸು ಮಾಡುತ್ತಿದ್ದರೆ ಕೈತುಂಬಾ ಸಂಬಳ ಪಡೆಯುವ ಯಾವುದಾದರೂ ಉದ್ಯೋಗಕ್ಕೆ ಸೇರಿಕೊಳ್ಳಬಹುದಿತ್ತು. ಇಷ್ಟಕ್ಕೂ ಚಾರ್ಟರ್ಡ್ ಅಕೌಂಟೆಂಟ್ ಅಂದರೆ ಧಾರಾಳ ದುಡ್ಡು ಮಾಡಲು ಅವಕಾಶವಿರುವ ವಿದ್ಯೆ. ಅದಿರಲಿ, ತಂಗಿ ಮಹರೂಖಾ, ಫ್ಯಾಮಿಲಿ ಹೊಟೇಲ್ ನಡೆಸುತ್ತಿರುವಾಗ ಮತ್ತು ತಮ್ಮ ಫಾರೂಖ್ ಐಸ್‌ಕ್ರೀಮ್ ಕಂಪೆನಿಯನ್ನು ಮುನ್ನಡೆಸಿಕೊಂಡು ಹೋಗುತ್ತಿರುವಾಗ, ಕೊಬಾಡ್‌ಗೆ ಬಡವರು, ದುರ್ಬಲರು ಅಂತ ತಿರುಗಾಡುವುದರ ಅಗತ್ಯವಾದರೂ ಏನಿತ್ತು?

ಆದರೆ ಆತ ಇಂಗ್ಲೆಂಡಿನಲ್ಲಿಯೇ ಎಡಪಂಥೀಯ ವಿಚಾರಧಾರೆಗೆ ತನ್ನನ್ನು ತೊಡಗಿಸಿಕೊಂಡ. ಆ ಕಾರಣದಿಂದಲೇ 1982ರಲ್ಲಿ ಆತನನ್ನು ಭಾರತಕ್ಕೆ ಕಳುಹಿಸಲಾಯಿತು. ಮುಂಬೈಗೆ ಬಂದದ್ದೇ ತಡ, ಕೊಡಗಿನವಳಾದ ಪ್ರೊಫೆಸರ್ ಅನುರಾಧಾಳೊಂದಿಗೆ ನಾಗ್ಪುರಕ್ಕೆ ತೆರಳಿ, ದುರ್ಬಲರ ಹಕ್ಕುಗಳಿಗಾಗಿ ಹೋರಾಡಲು ಮುಂದಾದ. ಅಪ್ಪನ ಆಸ್ತಿ, ಬಂಗಲೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ತನ್ನ 'ಡಿಗ್ರಿ'ಯನ್ನು ಮೂಲೆಗಿಟ್ಟು ನಕ್ಸಲರ ಪಾಲಿಟ್ ಬ್ಯೂರೋ ಸಮಿತಿಯ ಸದಸ್ಯನಾಗುವಷ್ಟು ಪ್ರಬಲನಾದ. ಅವರ ಪತ್ನಿ ಅನುರಾಧಾ ಈ ಚಳುವಳಿಯಲ್ಲಿ ಎಷ್ಟು ಪ್ರಬಲವಾಗಿ ತೊಡಗಿಸಿಕೊಂಡರೆಂದರೆ, ನಕ್ಸಲ್ ಪಾಲಿಟ್ ಬ್ಯೂರೋದ ಇತಿಹಾಸದಲ್ಲೇ ಏಕೈಕ ಮಹಿಳಾ ಸದಸ್ಯೆಯಾಗಿ ಆಕೆ ಆಯ್ಕೆಯಾದರು. 2008ರಲ್ಲಿ ಆಕೆ ಮಲೇರಿಯಾದಿಂದ ಸಾವಿಗೀಡಾದ ಬಳಿಕ ಕೊಬಾಡ್ ಗಾಂಧಿ ವಸ್ತುತಃ ಅತಂತ್ರರಾಗಿದ್ದರು. ಸೆಪ್ಟೆಂಬರ್ 20, 2009ರಂದು ದಕ್ಷಿಣ ದೆಹಲಿಯಲ್ಲಿ ಆತ ಪೊಲೀಸರಿಂದ ಬಂಧನಕ್ಕೊಳಗಾದಾಗ ಕ್ಯಾನ್ಸರನ್ನು ಮೈಯಿಡೀ ತುಂಬಿಕೊಂಡಿದ್ದರು. ನಿಜವಾಗಿ ಈ ದೇಶದ ಬಹುತೇಕ ಮಂದಿಗೆ ಕೊಬಾಡ್ ಗಾಂಧಿಯ ಪರಿಚಯವಾದದ್ದು ಬಂಧನಕ್ಕೊಳಗಾದಾಗಲೇ.

**ಇವನ್ನು ಒಪ್ಪಿಕೊಳ್ಳೋಣ**

ನಕ್ಸಲಿಸಮ್, ಈ ದೇಶದ ಸಮಸ್ಯೆಗಳಿಗೆ ಪರಿಹಾರ ಅಲ್ಲದೇ ಇರಬಹುದು. ಉದ್ದೇಶಿತ ಗುರಿಯನ್ನು ತಲುಪುವುದಕ್ಕೆ ಅದು ಆಯ್ಕೆ ಮಾಡಿಕೊಂಡ ಹಾದಿ ತಪ್ಪೇ ಆಗಿರಬಹುದು. ವ್ಯವಸ್ಥೆಯ ವಿರುದ್ಧ ಅದು ಎತ್ತಿಕೊಂಡಿರುವ ಬಂದೂಕು, ಅಂತಿಮವಾಗಿ ಅದು ಯಾರನ್ನು ವಿಮೋಚಿಸಲು ಬಯಸುತ್ತಿದೆಯೋ ಅವರನ್ನೇ ಸುಡುತ್ತಿರಬಹುದು. ಹಾಗಂತ ವಾಸ್ತವವನ್ನು ತಿರಸ್ಕರಿಸಲು ಸಾಧ್ಯವೇ? ಸಾಕೇತ್ ರಾಜನ್, ಕೊಬಾಡ್ ಗಾಂಧಿಯಂಥ ಉನ್ನತ ವಿದ್ಯಾಭ್ಯಾಸ ಹೊಂದಿದ ಹತ್ತು-ಹಲವು ಮಂದಿ ಚಳುವಳಿಗೆ ಸೇರುತ್ತಿರುವುದೇನು ಸುಳ್ಳೇ? ಇಷ್ಟಕ್ಕೂ ಪ್ಯಾಂಟು, ಬೂಟು, ಸೂಟು ಹಾಕಿ ಲಕ್ಷಣವಾಗಿ ದುಡಿಯಬಹುದಾದಷ್ಟು ಡಿಗ್ರಿಗಳನ್ನು ಹೊಂದಿದವರು ನಕ್ಸಲ್ ಆಗುವುದಕ್ಕೆ ಅದೇನೂ ಸರಕಾರಿ ಉದ್ಯೋಗ ಅಲ್ಲವಲ್ಲ. ಅದಿರಲಿ, ಬಡವರನ್ನು ಮೇಲೆತ್ತಲು, ಅವರ ಸಮಸ್ಯೆಗಳಿಗೆ ಸ್ಪಂದಿಸಲು ವಿಫಲವಾದ ಸರಕಾರಗಳುಳ್ಳ ರಾಜ್ಯಗಳಲ್ಲೇ ನಕ್ಸಲಿಸಮ್ ಜಾಸ್ತಿಯಿರುವುದೇಕೆ? ಅದರೆಡೆಗೆ ಆಕರ್ಷಿತರಾಗುವ ಯುವಕರನ್ನು ದಾರಿ ತಪ್ಪಿದವರು, ದೇಶ ವಿರೋಧಿಗಳು ಎಂದು ಹಂಗಿಸುವಾಗ ಅವರನ್ನು ಆ ಅನಿವಾರ್ಯತೆಗೆ ನೂಕಿದ ಭ್ರಷ್ಟ ವ್ಯವಸ್ಥೆಯನ್ನು ಕೂಡ ಅಷ್ಟೇ ಕಠಿಣ ಪದಗಳಲ್ಲಿ ಖಂಡಿಸಬೇಡವೇ? ಅಷ್ಟಕ್ಕೂ ಸಂದರ್ಭ ಬಂದಾಗಲೆಲ್ಲಾ ಬಡವರು, ದುರ್ಬಲರಿಂದ ಓಟು ಒತ್ತಿಸಿಕೊಂಡು ಹೋಗುವ ರಾಜಕೀಯದ ಮಂದಿ, ಆ ಬಳಿಕ ಪಕ್ಕಾ ಮನುಷ್ಯ ವಿರೋಧಿಗಳಾಗುತ್ತಿರುವುದು ಸುಳ್ಳಲ್ಲವಲ್ಲ. ರಸ್ತೆಯಿಲ್ಲದ, ವಿದ್ಯುತ್ ಇಲ್ಲದ, ಕನಿಷ್ಠ ವಾಸಿಸುವುದಕ್ಕೊಂದು ಗಟ್ಟಿ ಸೂರೂ ಇಲ್ಲದ ಮಂದಿ ಕೇವಲ ವ್ಯವಸ್ಥೆ ಕೊಡುವ ಭರವಸೆಯನ್ನು ನಂಬಿ ಎಷ್ಟು ಸಮಯಾಂತ ಬದುಕಿಯಾರು? ನಿಜವಾಗಿ ಭ್ರಷ್ಟಾಚಾರ, ಕೆಟ್ಟ ರಾಜಕೀಯ ಮತ್ತು ದುರ್ಬಲ ಆಡಳಿತಗಳೇ ನಕ್ಸಲಿಸಮನ್ನು ಪೋಷಿಸುತ್ತಿವೆ. ಹಸಿವಿನ ಬಗ್ಗೆ ಗಂಟೆಗಟ್ಟಲೆ ಭಾಷಣ ಮಾಡುವುದರಿಂದ ಹಸಿವು ಇಂಗುವುದಿಲ್ಲ. ಅದಕ್ಕೆ ಪ್ರಾಯೋಗಿಕ ಚಟುವಟಿಕೆಗಳು ಆಗಲೇಬೇಕು. ವ್ಯವಸ್ಥೆ ರೈತರ, ದುರ್ಬಲರ ಪರವಾಗಿ ಮಾತಾಡಿದ ಮಾತ್ರಕ್ಕೇ ಅವರೆಲ್ಲರ ಸಂಕಟ ಪರಿಹಾರವಾಗಲು ಸಾಧ್ಯವಿಲ್ಲ. ಹಸಿರು ಶಾಲು ಹೊದ್ದು ರೈತ ಕ್ಷೇಮದ ಪ್ರತಿಜ್ಞೆ ಕೈಗೊಂಡ ಮುಖ್ಯಮಂತ್ರಿಗಳೇ ರೈತ ಭೂಮಿಯನ್ನು ಬಲವಂತದಿಂದ ಸ್ವಾಧೀನಪಡಿಸಲು ಮುಂದಾಗುವಾಗ ಸಂತ್ರಸ್ತರು ನಕ್ಸಲರಲ್ಲಲ್ಲದೇ ಇನ್ನಾರಲ್ಲಿ ತಾನೇ ನಂಬಿಕೆಯಿಡಬೇಕು? ಇವತ್ತು ಛತ್ತೀಸ್‌ಗಢದಲ್ಲಿ ನಕ್ಸಲರಿಗೆ ಸಾವಿರಾರು ಅನುಯಾಯಿಗಳು ಸಿಕ್ಕಿದ್ದರೆ, ಅದರ ಹಿಂದೆ ಭ್ರಷ್ಟ ರಾಜಕೀಯದ ದೊಡ್ಡ ಪಾಲಿದೆ. ಅಲ್ಲಿನ ಗುಡ್ಡಗಾಡು ಪ್ರದೇಶದಲ್ಲಿ ಕಬ್ಬಿಣದ ಅದಿರು ಸಹಿತ ವಿವಿಧ ಬಗೆಯ ಪ್ರಾಕೃತಿಕ ಸಂಪನ್ಮೂಲಗಳು ವ್ಯಾಪಕವಾಗಿರುವುದನ್ನು ಪರಿಗಣಿಸಿ, ವ್ಯವಸ್ಥೆ ಆದಿವಾಸಿಗಳನ್ನು ಒಕ್ಕಲೆಬ್ಬಿಸಲು ಪ್ರಾರಂಭಿಸಿತು. ಜನ ತಿರುಗಿ ಬಿದ್ದರು. ಅಭಿವೃದ್ಧಿಯ ನೆಪದಲ್ಲಿ ಪ್ರಾಕೃತಿಕ ಸಂಪತ್ತನ್ನು ದೋಚಲು ಹೊರಟ ವ್ಯವಸ್ಥೆಯ ವಿರುದ್ಧ ಹೋರಾಡಲು ಅವರು ನಕ್ಸಲರೊಂದಿಗೆ ಸೇರಿಕೊಂಡರು ಅಷ್ಟೇ...

ನಕ್ಸಲಿಸಮ್ ಕೆಟ್ಟದ್ದೇ ಆಗಿರಬಹುದು. ಆದರೆ ಅದು ಹುಟ್ಟಿಕೊಳ್ಳುವುದಕ್ಕೆ ಚಾರು ಮಜುಮ್ದಾರ್, ಅಝೀಝುಲ್ ಹಕ್, ಕಾನೂ ಸನ್ಯಾಲ್ ಮಾತ್ರ ಕಾರಣ ಅಲ್ಲ. ಅವರ ಮೂಲಕ ಈ ವ್ಯವಸ್ಥೆಯೇ ಅದನ್ನು ಹುಟ್ಟು ಹಾಕಿದೆ. ಆದ್ದರಿಂದಲೇ ಈ ಚಳುವಳಿಯನ್ನು ಸೋಲಿಸುವ ಅವಕಾಶವೂ ವ್ಯವಸ್ಥೆಗಿದೆ. ಅದು ಹೇಗೆಂದರೆ, ಎಲ್ಲರನ್ನೂ ಮನುಷ್ಯರೆಂದು ಪರಿಗಣಿಸುವುದು. ಅಭಿವೃದ್ಧಿಯ ಪ್ರಯೋಜನವನ್ನು ತಳಮಟ್ಟದ ಜನರಿಗೂ ತಲುಪಿಸುವುದು. ಬಡವ-ದುರ್ಬಲರ ಪರವಾಗಿ ಆಲೋಚಿಸುವುದು. ಇನ್ನೊಬ್ಬ ಕೊಬಾಡ್ ಗಾಂಧಿ, ಸಾಕೇತ್ ರಾಜನ್ ಕಾಡು ಸೇರದಂತೆ ಮಾಡಲು, ಯೋಧರ ಸಾವು ಸಂಭವಿಸದೇ ಇರಲು ಇಷ್ಟಾದರೂ ಮಾಡಲೇಬೇಕು. ಯಾಕೆಂದರೆ, ಅವರೂ ಮನುಷ್ಯರೇ.

akkukkila@gmail.com

## ರೈತರ ಸಮಸ್ಯೆಗಳಿಗೆ ಇಸ್ಲಾಮಿ ಬ್ಯಾಂಕಿಂಗ್ ಪರಿಹಾರ: ಸ್ವಾಮಿನಾಥನ್



ನವದೆಹಲಿ: ವಿದರ್ಭದ ರೈತ ಸಮಸ್ಯೆಗಳಿಗೆ ಇಸ್ಲಾಮಿ ಬ್ಯಾಂಕಿಂಗ್ ಒಂದು ಪರಿಹಾರವಾಗಬಹುದು ಎಂದು ಭಾರತದ ಹಸಿರು ಕ್ರಾಂತಿಯ ರೂವಾರಿ ಪ್ರಖ್ಯಾತ ಕೃಷಿ ತಜ್ಞ ಎಂ.ಎಸ್. ಸ್ವಾಮಿನಾಥನ್ ಅಭಿಪ್ರಾಯಪಟ್ಟಿದ್ದಾರೆ.

ವಿದರ್ಭದಲ್ಲಿ ಬಡ್ಡಿ ವ್ಯಾಪಾರಿಗಳು ಸಾಲಕ್ಕೆ ವಿಪರೀತ ಪ್ರಮಾಣದಲ್ಲಿ ಬಡ್ಡಿ ವಿಧಿಸುತ್ತಿರುವುದೇ ರೈತರು ಸಾಲದ ಕೂಪದಲ್ಲಿ ಮುಳುಗಲು ಮತ್ತು ಆತ್ಮಹತ್ಯೆಗೆ ಶರಣಾಗಲು ಕಾರಣ ಎಂದವರು ಹೇಳಿದ್ದಾರೆ.

ಇಸ್ಲಾಮಿ ಬ್ಯಾಂಕಿಂಗ್ ಯಾಕೆ ಪರಿಹಾರ ಅಂದರೆ, ಅದು ಬಡ್ಡಿ ನಿಷೇಧಿಸುವ ವ್ಯವಸ್ಥೆಯಾಗಿದೆ ಎಂದಿದ್ದಾರೆ. ಅವರು ಕರುಣ ರತ್ನ ಪ್ರಶಸ್ತಿಯನ್ನು ಸ್ವೀಕರಿಸಿ ಮಾತಾಡುತ್ತಿದ್ದರು.



ವಿದೇಶರಂಗ

ಬಿ.ಎ. ಸಲೀಮ್

# ಚೀನಾ-ಭಾರತ ಸಂಬಂಧ ಉತ್ತಮಗೊಳ್ಳಲಿ

**ಭಾ**ರತ ಮತ್ತು ಚೀನಾ ತಮ್ಮ ನಡುವೆ ಹಾಟ್ ಲೈನ್ ಫೋನ್ ಸಂಪರ್ಕ ಕಲ್ಪಿಸುವ ಒಪ್ಪಂದವೊಂದಕ್ಕೆ ಸಹಿ ಹಾಕಿದೆ. ಚೀನಾ ಪ್ರವಾಸದಲ್ಲಿ ಎಸ್.ಎಂ. ಕೃಷ್ಣ ಹಾಗೂ ಚೀನಾದ ವಿದೇಶಾಂಗ ಸಚಿವ ಯಾಂಗ್ ಜೀಚಿ ಈ ಸಹಿ ಹಾಕಿರುವುದು ಮುಂದಿನ ದಿನಗಳಲ್ಲಿ ಭಾರತ ಮತ್ತು ಚೀನಾದ ನಡುವಿನ ಸಂಬಂಧ ಉತ್ತಮಗೊಳ್ಳಲು ಇದು ಸಹಕಾರಿಯಾಗ ಬಹುದು. ಭಾರತ ಮತ್ತು ಚೀನಾ ಸಂಬಂಧ ಎಷ್ಟು ಉತ್ತಮವಾಗಿದೆ ಎಂಬುದಕ್ಕೆ ಇದು ನಿದರ್ಶನವೆಂದು ಎಸ್.ಎಂ. ಕೃಷ್ಣ ಹೇಳಿದ್ದಾರೆ. ಎರಡೂ ರಾಷ್ಟ್ರಗಳ ರಾಜತಾಂತ್ರಿಕ ಸಂಬಂಧದ 60ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ ಈ ಬೆಳವಣಿಗೆ ಸಂದರ್ಭೋಚಿತವೆಂದು ಚೀನಾದ ಯಾಂಗ್ ಜೀಚಿ ಹೇಳಿದ್ದಾರೆ.

ಏಷ್ಯಾದ ಎರಡು ಬೃಹತ್ ಶಕ್ತಿಗಳಾದ ಭಾರತ ಮತ್ತು ಚೀನಾದ ಮಧ್ಯೆ ಸಂಬಂಧ ಗಳನ್ನು ಎರಡೂ ರಾಷ್ಟ್ರಗಳ ಅಭಿವೃದ್ಧಿಯ ದೃಷ್ಟಿಯಿಂದ ಬಲಪಡಿಸಬೇಕಾಗಿದೆ. ಈಗಾಗಲೇ ಪತನದಂಚಿನಲ್ಲಿ ರಷ್ಯಾ ಇರುವಾಗ, ಸಾಮ್ರಾಜ್ಯ ಶಾಹಿ ಶಕ್ತಿಗಳು ತಮ್ಮ ಆಧಿಪತ್ಯ ವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವಾಗ, ಇಂತಹ ದೊಂದು ಬೆಳವಣಿಗೆ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ತಲೆ ನೋವುಂಟು ಮಾಡಲಿದೆ. ಇಲ್ಲಿರುವ 250 ಕೋಟಿ ಜನರ ಪ್ರಮುಖ ಸಮಸ್ಯೆಗಳಾದ ನಿರುದ್ಯೋಗ, ಬಡತನ, ಅನಕ್ಷರತೆ, ಅನಾರೋಗ್ಯ ಮುಂತಾದವು ಗಳನ್ನು ಕೊನೆಗಾಣಿ ಸಲು ವೈಜ್ಞಾನಿಕ ಹಾಗೂ ಸಾಂಕೇತಿಕ ರಂಗಗಳಲ್ಲಿ ಜಂಟಿಯಾಗಿ ಮುಂದುವರಿಯುವ ಅವಶ್ಯಕತೆಯಿದೆ. ಇದರಿಂದ ಸಾಮ್ರಾಜ್ಯಶಾಹಿಗಳ ದಾಸ್ಯತನ ದಿಂದ ಮುಕ್ತಿ ಹೊಂದಿ ತಲೆ ಎತ್ತಿ ನಿಲ್ಲಬಹುದಾಗಿದೆ. 1950ರ ವೇಳೆಯಲ್ಲಿ ಜವಹರಲಾಲ್ ನೆಹರೂ ಹಾಗೂ ಚೂಯನ್ ಲಾರ 'ಹಿಂದಿ ಚೀನಾ ಭಾಯಿ ಭಾಯಿ' ಕನಸು ಚಿಗುರೊಡೆಯಲು ಇದು ಸಕಾಲ. ಅಂದು ಇದ್ದ ಆ ಸ್ನೇಹ ಬಾಂಧವ್ಯ ಒಂದು ದಶಕಕ್ಕೆ ಮಾತ್ರ ಸೀಮಿತವಾಗಿತ್ತು. ನಂತರ ಗಡಿಯ ವಿಷಯದಲ್ಲಿ ತರ್ಕಗಳೆದ್ದು ಸಂಬಂಧಗಳನ್ನು ಕೆಡಿಸಿಕೊಂಡಿತ್ತು. ಯುದ್ಧವೂ ನಡೆದಿತ್ತು. ಪರಸ್ಪರ ಆರೋಪ ಪ್ರತ್ಯಾರೋಪಗಳನ್ನೂ ಮಾಡಲಾಯಿತು. ಇನ್ನು ಹಳೆಯ ವಿಷಯಗಳನ್ನು ಕೆದಕಿ ಸಮಯ ಕಳೆಯುವುದಕ್ಕಿಂತ ಉತ್ತಮ ರೀತಿಯಿಂದ ರಾಷ್ಟ್ರಗಳ ಅಭಿವೃದ್ಧಿಯನ್ನು ಹಿತ ದೃಷ್ಟಿಯಲ್ಲಿರಿಸಿಕೊಂಡು ಮುಂದುವ ರಿದರೆ ಎರಡೂ ರಾಷ್ಟ್ರಗಳಿಗೆ ಪ್ರಯೋಜನ ಕಾರಿಯಾಗಬಹುದು.

ಇವೆಲ್ಲವೂ ಮನವರಿಕೆಯಾದಂತೆ, 2005ರಲ್ಲಿ ಚೀನಾದ ಪ್ರಧಾನಿಯವರ ಭಾರತ ಪ್ರವಾಸ ಮತ್ತು 2008ರಲ್ಲಿ ಮನಮೋಹನ್ ಸಿಂಗ್‌ರ ಚೀನಾ ಪ್ರವಾಸವೂ ನಡೆಯಿತು. ಇದರ ಫಲವಾಗಿ ವಾಣಿಜ್ಯವ್ಯಾಪಾರ ವಹಿವಾಟುಗಳಲ್ಲಿ ವರ್ಧನೆಯಾಯಿತು. ಚೈನೀಸ್ ಉತ್ಪನ್ನಗಳು ಭಾರತದ ಮಾರುಕಟ್ಟೆಯಲ್ಲಿ ತನ್ನದೇ ಆದ ಸ್ವಾಮ್ಯವನ್ನು ಈಗ ಹೊಂದಿರುತ್ತವೆ.

ಹಾಗೆಯೇ ವಿದ್ಯಾಭ್ಯಾಸಕ್ಕೆಂದು ಚೀನಾಕ್ಕೆ ಹೋಗುವ ಭಾರತೀಯರ ಸಂಖ್ಯೆಯೂ ಗಣ ನೀಯವಾಗಿ ಹೆಚ್ಚಿದೆ.

ಅದೇ ರೀತಿ ಕೆಲವು ಸಮಸ್ಯೆಗಳೂ ಇಲ್ಲಿವೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತದ ಖಾಯಮ್ ಸದಸ್ಯತ್ವವನ್ನು ಚೀನಾ ವಿರೋಧಿಸುತ್ತಿದೆ. ಪಾಕಿಸ್ತಾನದ ಅಧೀನದಲ್ಲಿ ರುವ ಕಾಶ್ಮೀರದ ಪ್ರದೇಶಗಳಲ್ಲಿ ಭಾರತದ ಭಾವನೆಯನ್ನು ನಿರ್ಲಕ್ಷಿಸಿ ಚೀನಾ ವಿವಿಧ ಅಭಿವೃದ್ಧಿ ಯೋಜನೆಯಲ್ಲಿ ಭಾಗೀದಾರಿ ಯಾಗುತ್ತಿದೆ ಎಂಬುದು ಭಾರತದ ಮತ್ತೊಂದು ದೂರು. ಜಮ್ಮುಕಾಶ್ಮೀರದಲ್ಲಿರುವ ಭಾರತೀಯ ಪೌರರಿಗೆ ಚೀನಾ ವೀಸಾ ನೀಡುವ ಕುರಿತು ಕೆಲವು ಸಮಸ್ಯೆಗಳಿವೆ. ಇವೆಲ್ಲಕ್ಕಿಂತ ಮಿಗಿಲಾಗಿ 15,000 ಚದರ ಕಿ.ಮೀ. ಭಾರತದ ಭೂಮಿಯನ್ನು ಚೀನಾ ಅಕ್ರಮವಾಗಿ ತನ್ನ ತೆಕ್ಕೆ ಯಲ್ಲಿರಿಸಿಕೊಂಡಿದೆ. ಅದರ ಬಗ್ಗೆ ಮಾತುಕತೆ ನಡೆದರೂ ಫಲಪ್ರದವಾಗಿಲ್ಲ. ಇತ್ತೀಚೆಗೆ ಮನಮೋಹನ್ ಸಿಂಗ್‌ರ ಅರುಣಾಚಲ ಪ್ರದೇಶದ ಭೇಟಿ ಚೀನಾಕ್ಕೆ ಸಹ್ಯವಾಗಿರಲಿಲ್ಲ. ಭಾರತದಲ್ಲಿರುವ ಟಿಬೇಟಿಯನ್ ಧರ್ಮಗುರು ದಲಾಯಿಲಾಮರ ಚಲನವಲನಗಳಲ್ಲಿ ಹಾಗೂ ಅಮೇರಿಕಾ ಭೇಟಿಯ ಹಿಂದೆ ಭಾರತದ ಕೈವಾಡವಿದೆ ಎಂಬುದಾಗಿ ಚೀನಾ ಭಾವಿಸಿದೆ. ಇತ್ತ ಮಾವೋವಾದಿಗಳಲ್ಲಿರುವ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಕುರಿತು ಭಾರತಕ್ಕೂ ಚೀನಾದ ಮೇಲೆ ಸಂಶಯವಿದೆ. ನಿಜವಾಗಿ ಭಾರತ ಮತ್ತು ಚೀನಾದ ಜಗಳದಿಂದ ಪಾಕಿಸ್ತಾನ ಲಾಭ ಪಡೆಯುತ್ತಿದೆ. ಚೀನಾದಿಂದ ಆಯುಧ ವನ್ನು ಖರೀದಿಸುವ ಪಾಕಿಸ್ತಾನ, ಅಂತಾ ರಾಷ್ಟ್ರೀಯ ವೇದಿಕೆಗಳಲ್ಲಿಯೂ ಚೀನಾದ ಸಹಕಾರ ಪಡೆಯುತ್ತಿದೆ. ಆದ್ದರಿಂದ ಪಾಕಿಸ್ತಾನ ದೊಂದಿಗಿನ ಬಾಂಧವ್ಯವನ್ನು ಉತ್ತಮಪಡಿಸಿ ದರೆ, ಚೀನಾದೊಂದಿಗಿನ ಸಂಬಂಧ ವೃದ್ಧಿ ಪಡಿಸಲು ಸಹಾಯಕವಾಗಬಹುದು.

ಎಲ್ಲಾ ರಾಷ್ಟ್ರಗಳಿಗೂ ತಮ್ಮ ರಾಷ್ಟ್ರಗಳ ಹಿತಾಸಕ್ತಿ ಮುಖ್ಯವಾಗಿದೆ. ಭಾರತ ಚೀನಾ, ಪಾಕಿಸ್ತಾನ ಮತ್ತು ಅಮೇರಿಕಾಕೂಡಾ ಇದಕ್ಕೆ ಹೊರತಲ್ಲ. ಸಮಸ್ಯೆಗಳನ್ನು ಪರಿಹರಿಸಿ ಕೊಂಡು ಮುಂದುವರಿದರೆ ಪರಸ್ಪರ ಸಂಬಂಧಗಳು ಗಟ್ಟಿಗೊಳ್ಳಬಹುದು. ಭಾರತವು ಚೀನಾದೊಂದಿಗಿರುವ ಅಭಿಪ್ರಾಯ ಭಿನ್ನತೆ ಗಳನ್ನು ಸಾಧ್ಯವಾದಷ್ಟು ಚಿಕ್ಕದಾಗಿಸಿ ತಿಳಿಗೊಳಿ ಸಲು ಪ್ರಯತ್ನಿ ಸುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಮೇರಿಕದ ಒತ್ತಡಗಳಿಗೆ ಮಣಿ ಯದೆ, ಸ್ವತಂತ್ರವಾದ ಚಿಂತನೆಗಳಿಂದ ಭಾರತ, ಪಾಕಿಸ್ತಾನ ಹಾಗೂ ಚೀನಾ ಮುಂದುವರಿಯ ಬೇಕಾದ ಅಗತ್ಯವಿದೆ. ಇದು ಎಲ್ಲ ರೀತಿ ಯಿಂದಲೂ ಪ್ರಯೋಜನಕಾರಿಯಾಗಿದೆ. ಅದು ಏಷ್ಯಾದ ಬಲಿಷ್ಠ ಶಕ್ತಿಯಾಗಿ ರೂಪುಗೊಳ್ಳಲು ಸಹಕಾರಿಯಾಗಬಹುದು. ಹಲವಾರು ಸಮಸ್ಯೆ ಗಳಿಂದ ಜರ್ಝರಿತವಾದ ಈ ರಾಷ್ಟ್ರಗಳು ತಮ್ಮ ಹಾಟ್‌ಲೈನ್ ಫೋನ್ ಸಂಪರ್ಕದಲ್ಲಿ ಯಶಸ್ಸು ಕಾಣಲಿ. ಎರಡೂ ದೇಶಗಳ ಪ್ರಧಾನಿ ಗಳು ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನಿಡಲಿ.

## ಅಮೇರಿಕ: ಮಾನವ ಹಕ್ಕು ಉಲ್ಲಂಘನೆ ಕುರಿತು ಭಾಷಣ

ವಾಷಿಂಗ್ಟನ್: 'ಮಾನವ ಹಕ್ಕು ಉಲ್ಲಂಘನೆ ಮತ್ತು ಕೋಮು ಸಂಘರ್ಷಗಳು' ಎಂಬ ವಿಷಯದಲ್ಲಿ ಅಮೇರಿಕದ ಹನ್ನೊಂದು ನಗರಗಳಲ್ಲಿ 'ಇಂಡಿಯನ್ ಮುಸ್ಲಿಮ್ ಕೌನ್ಸಿಲ್' ಭಾಷಣ ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಭಾರತದ ಪ್ರಮುಖ ಮಾನವ ಹಕ್ಕು ಸಂಘಟನೆಯ ಕಾರ್ಯಕರ್ತರಾದ ಮುಕುಲ್ ಸಿನ್ಹಾ ಮತ್ತು ಶಫೀಕುರ್‌ರಹ್ಮಾನ್ ಮುಹಾಜಿರ್ ಮುಖ್ಯ ಭಾಷಣಕರ್ತರಾಗಿರುವರು. ಮುಕುಲ್ ಸಿನ್ಹಾರವರು ಗೋಧ್ರಾ ಘಟನೆಯ ಕುರಿತು ಅನೇಕ ಮಹತ್ವದ ವಿವರಗಳನ್ನು ಬಹಿರಂಗಗೊಳಿಸಿದವರಾಗಿದ್ದಾರೆ. ಶಫೀಕುರ್‌ರಹ್ಮಾನ್ ಮುಹಾಜಿರ್‌ರವರು ಖ್ಯಾತ ವಕೀಲರಾಗಿದ್ದಾರೆ.

# ಜಮಾಅತ್‌ನ ಸೇವೆ ಅನನ್ಯ

ಜಮಾಅತೆ ಇಸ್ಲಾಮೀ ಹಿಂದ್‌ಗೆ 60 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಹಿರಿಯ ನಾಯಕರಾದ ಮೌಲಾನಾ ಅಬ್ದುಲ್ ಅಝೀಝ್‌ರವರೊಂದಿಗೆ ನಡೆಸಲಾದ ಸಂದರ್ಶನವನ್ನು ಇಲ್ಲಿ ಕೊಡಲಾಗಿದೆ. - ಸಂ

● ಇಸ್ಲಾಮೀ ಆಂದೋಲನದ ಆರಂಭ ಕಾಲದ ಸಾಹಿತ್ಯಗಳು ಹಳತಾಗಿದ್ದು, ಅದರ ಜಾಗದಲ್ಲಿ ಆಧುನಿಕ ಕಾಲದ ಬೇಡಿಕೆಗಳನ್ನು ಪೂರೈಸುವಂತಹ ನೂತನ ಸಾಹಿತ್ಯಗಳನ್ನು ಹೊರತರುವ ಅಗತ್ಯವಿದೆಯೆಂಬ ಅಭಿಪ್ರಾಯಕ್ಕೆ ನಿಮ್ಮ ಪ್ರತಿಕ್ರಿಯೆ?

❍ ಈ ಅಭಿಪ್ರಾಯವೇ ಈಗ ಹಳತಾಗಿ ಬಿಟ್ಟಿದೆ. ನಾನು ಕಳೆದ ಐವತ್ತು ವರ್ಷಗಳಿಂದ ಈ ಮಾತನ್ನು ಆಲಿಸುತ್ತಾ ಬಂದಿದ್ದೇನೆ ಮತ್ತು ಈ ಅವಧಿಯಲ್ಲಿ ಅನೇಕಾರು ನೂತನ ಸಾಹಿತ್ಯ ಕೃತಿಗಳು ಮತ್ತು ನವಪೀಳಿ ಗೆಯ ಲೇಖಕರು ಬೆಳಕಿಗೆ ಬಂದಿದ್ದಾರೆ. ಕೆಲವರು ಕೇವಲ ಮೌಲಾನಾ ಮೌದೂದಿಯವರ ಸಾಹಿತ್ಯ ಕೃತಿಗಳನ್ನು ಮಾತ್ರವೇ ಆಂದೋಲನದ ಸಾಹಿತ್ಯವೆಂದು ಭಾವಿಸುತ್ತಾರೆ. ಅವರು ಮೌ| ಅಮೀನ್ ಅಹ್ಸನ್ ಇಸ್ಲಾಹಿ, ಮೌ| ಸದ್ರುದ್ದೀನ್ ಇಸ್ಲಾಹಿ, ಮೌ| ಸಯ್ಯದ್ ಅಹ್ಮದ್ ಊರೂಜ್ ಕಾದ್ರಿ, ಮೌ| ಅಬೂಸಲೀಮ್ ಮುಹಮ್ಮದ್ ಅಬ್ದುಲ್ ಹೈ, ಮೌ| ಹಾಮಿದ್ ಅಲಿ, ಮೌ| ಮುಹಮ್ಮದ್ ಫಾರೂಕ್ ಖಾನ್, ಮೌ| ಸಯ್ಯದ್ ಜಲಾಲುದ್ದೀನ್ ಉಮರಿ ಮುಂತಾದವರ ನೂರಾರು ಸಾಹಿತ್ಯ ಕೃತಿಗಳನ್ನು ಆಂದೋಲನದ ಸಾಹಿತ್ಯವನ್ನಾಗಿ ಪರಿಗಣಿಸುವುದಿಲ್ಲ. ಮೌಲಾನ ಮೌದೂದಿಯವರ ಸಾಹಿತ್ಯ ಕೃತಿಗಳಿಗೆ ಅದರದೇ ಆದ ವಿಶೇಷತೆ ಇದೆ. ಅವರ ಸಾಹಿತ್ಯ ಕೃತಿಗಳ ಹೊರತು ಜಮಾಅತ್‌ನ ಅಸ್ತಿತ್ವವೇ ಇಲ್ಲವೆಂದರೆ ಅತಿಶಯೋಕ್ತಿಯಿಲ್ಲ. ಆಧುನಿಕ ಗ್ರಂಥಕರ್ತರಲ್ಲಿ ಡಾ| ನಜಾತುಲ್ಲಾ ಸಿದ್ದೀಕಿ, ಡಾ| ಫಝ್ಲುರ್ರಹ್ಮಾನ್ ಫರೀದಿ ಮತ್ತು ಡಾ| ಅಬ್ದುಲ್ ಹಕ್ ಅನ್ಸಾರಿ ಪ್ರಮುಖರು. ಈ ಶೃಂಖಲೆ ಇನ್ನೂ ಮುಂದುವರಿಯುವುದು. ಅಂತಿಮ ಲೇಖಕ ಅಂತ ಯಾರೂ ಇದುವರೆಗೆ ಹುಟ್ಟಿ ಬಂದಿಲ್ಲ. ಆಂದೋಲನದಲ್ಲಿ ಶಿಕ್ಷಣ ಮತ್ತು ಸಾಹಿತ್ಯದ ಬಗ್ಗೆ ಒಲವು ಇದ್ದಷ್ಟೂ ಹೊಸ ಹೊಸ ಬರಹಗಾರರು ಹುಟ್ಟಿ ಬರುತ್ತಲೇ ಇರುವರು. ಒಟ್ಟಿನಲ್ಲಿ ಆಂದೋಲನವು ಈ ರಂಗದಲ್ಲಿ ಬಂಜೆಯಾಗದಂತೆ ನೋಡಿಕೊಳ್ಳಬೇಕಾಗಿದೆ.

● ದೇಶದ ಸ್ವಾತಂತ್ರ್ಯದ ಬಳಿಕದಿಂದ ಜಮಾಅತ್‌ನ ಐವರು ನೇತಾರರನ್ನು ಕಂಡದ್ದು ಮಾತ್ರವಲ್ಲ, ಅವರೊಂದಿಗೆ ಸೇರಿ ಸೇವೆ ಸಲ್ಲಿಸಿದ್ದು ನಿಮ್ಮ ಹೆಗ್ಗಳಿಕೆ. ಅವರ ವ್ಯಕ್ತಿತ್ವ, ಒಲವುಗಳು ಮತ್ತು ಸಾಧನೆಗಳ ಬಗ್ಗೆ ತಿಳಿಸುತ್ತೀರಾ?

❍ ಅದು ಮಾತ್ರವಲ್ಲ, ನಾನು 1943ರಲ್ಲಿ; ಆಗ ನನಗೆ 13-14ರ ಹರೆಯ, ಮೌಲಾನಾ ಮೌದೂದಿಯವರನ್ನು ಕಂಡದ್ದು ಮಾತ್ರವಲ್ಲ, ಅವರ ನೇತೃತ್ವ ದಲ್ಲಿ ನಿರಂತರ ಐದು ದಿನ ಐದು ಹೊತ್ತಿನ ನಮಾಝ್ ನಿರ್ವಹಿಸಿ ದ್ದೇನೆಂಬುದೂ ಕೂಡ ನನ್ನ ಸೌಭಾಗ್ಯವೆನ್ನಿ. 1978ರಲ್ಲಿ ನಾನು ಲಾಹೋರಿನಲ್ಲಿ ಅವರನ್ನು ಕೊನೆಯದಾಗಿ ಭೇಟಿಯಾಗಿದ್ದೆ. ಮೌ| ಅಬುಲ್ಲೈಸ್‌ರವರು ತಮ್ಮ ಎರಡನೆಯ ಅವಧಿಯಲ್ಲಿ ನನ್ನನ್ನು ಕೇಂದ್ರೀಯ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು. ಮೌ| ಮುಹಮ್ಮದ್ ಯೂಸುಫ್‌ರ ನಾಯಕತ್ವದಲ್ಲಿ ಜಮಾಅತೆ ಇಸ್ಲಾಮೀ ಹಿಂದ್‌ನ ಅಖಿಲ ಭಾರತ ಸಮಾವೇಶವು 1981ರಲ್ಲಿ ಹೈದರಾಬಾದಿನ ವಾದಿಹುದಾದಲ್ಲಿ ನಡೆದಿತ್ತಷ್ಟೇ. ಅದರ ಸಂಚಾಲಕತ್ವವನ್ನು ನನಗೆ ವಹಿಸಿಕೊಡಲಾಗಿತ್ತು. ಮೌ| ಮುಹಮ್ಮದ್ ಸಿರಾಜುಲ್ ಹಸನ್‌ರವರ ಕಾಲದಲ್ಲಿ ನನ್ನನ್ನು ಉಪಾಧ್ಯಕ್ಷನನ್ನಾಗಿ ನೇಮಿಸಲಾಯಿತು. ನಿರಂತರ ಮೂರು ಮೀಕಾತ್‌ಗಳಲ್ಲಿ ನಾನು ಆ ಹೊಣೆಯನ್ನು ವಹಿಸಿದ್ದೆ. ಡಾ| ಅಬ್ದುಲ್ ಹಕ್ ಅನ್ಸಾರಿಯವರ ಕಾಲದಲ್ಲಿ ನನಗೆ ಯಾವುದೇ ಹೊಣೆ ವಹಿಸಿ ಕೊಡಲಾಗಿಲ್ಲವಾದರೂ ದೇಶದ ನಾನಾ ಕಡೆಗಳಲ್ಲಿ ಸಾರ್ವಜನಿಕ ಭಾಷಣ, ಸಭೆ, ನಡೆಸಿಕೊಡಲು ನನಗೆ ಮುಕ್ತ ಸ್ವಾತಂತ್ರ್ಯ ಮತ್ತು ಸೌಲಭ್ಯಗಳನ್ನು ಒದಗಿಸಲಾಗಿತ್ತು. ಈಗ ಮೌ| ಜಲಾಲುದ್ದೀನ್ ಉಮರಿಯವರ ಅವಧಿಯಲ್ಲಿಯೂ ನನಗೆ ಆ ಸೌಲಭ್ಯವಿದೆಯಾದರೂ ವೃದ್ಧಾಪ್ಯ ಮತ್ತು ದೈಹಿಕ ನಿಶ್ಯಕ್ತಿಯ ಕಾರಣ ಚಟುವಟಿಕೆ ಕಡಿಮೆಯಾಗಿದೆ. ನಾನು 1972ರಿಂದ 2007ರ ವರೆಗೆ ಕೇಂದ್ರ ಸಲಹಾ ಮಂಡಳಿಯ ಸದಸ್ಯನಾಗಿದ್ದೆ. ಆರಂಭದಲ್ಲಿ 1960ರಿಂದ 67ರ ವರೆಗೆ ಆಂಧ್ರ ಪ್ರದೇಶದ ರಾಜ್ಯಾಧ್ಯಕ್ಷನಾಗಿದ್ದೆ. ಬಳಿಕ ಎರಡು ಮೀಕಾತ್‌ಗೆ ತಮಿಳುನಾಡಿಗೆ, ಆ ಬಳಿಕ 1977ರಿಂದ 1989ರ ವರೆಗೆ ಆಂಧ್ರ ಮತ್ತು ಒರಿಸ್ಸಾಗಳ ರಾಜ್ಯಾಧ್ಯಕ್ಷನಾಗಿ ನೇಮಕಗೊಂಡೆ. ಮೌಲಾನಾ ಅಬುಲ್ಲೈಸ್‌ರವರ ಸುದೀರ್ಘ (32 ವರ್ಷಗಳ) ಅವಧಿಯಲ್ಲಿ ಸ್ಥಾನೀಯ ಅನುವಾದ ಕೇಂದ್ರಗಳು ಮತ್ತು ವಿದೇಶಗಳಲ್ಲಿ ಜಮಾಅತ್‌ನ ಪರಿಚಯ, ಮೌಲಾನ ಸಿರಾಜುಲ್ ಹಸನ್‌ರ ಅವಧಿಯಲ್ಲಿ ಸಾಮುದಾಯಿಕ ಮತ್ತು ಅಂತರ್ಧರ್ಮೀಯ ಸಂವಾದಗಳಿಗೆ ಪ್ರಾಮುಖ್ಯತೆಯಿತ್ತು. ಡಾ| ಅನ್ಸಾರಿ ಮತ್ತು ಮೌ| ಜಲಾಲುದ್ದೀನ್ ಉಮರಿಯವರ ಸಾಧನೆಗಳಲ್ಲಿ ಜಮಾಅತ್‌ನ ಆಂತರಿಕ ಸಮಸ್ಯೆಗಳ ಪರಿಹಾರದೊಂದಿಗೆ ಈ ಹಿಂದಿನ ಅಧ್ಯಕ್ಷರುಗಳ ಒಲವುಗಳನ್ನೇ ಮುಂದುವರಿಸಿದ್ದು ಸೇರಿವೆ.

# 73 ಪಾರ್ಟಿಗಳು ಮತ್ತು ಸ್ವರ್ಗ



ಅಬೂ ಅನೀಸ್ ಕಲ್ಲಾಪು

**ಒಂ**ದು ಉನ್ನತವಾದ ಮುಸ್ಲಿಮ್ ಸಮಾಜವನ್ನು ಕಟ್ಟಿ ಬೆಳೆಸಬೇಕೆಂಬ ಹಂಬಲ ಯಾರಿಗೆ ತಾನೆ ಇಲ್ಲ? ನಿಸ್ಸಂದೇಹವಾಗಿಯೂ ಚಾಲ್ತಿಯಲ್ಲಿರುವ ಪ್ರತಿಯೊಂದು ಮುಸ್ಲಿಮ್ ಸಂಘಟನೆಗೂ ಈ ಬಗ್ಗೆ ಕಾಳಜಿ ಇರಲೇಬೇಕು. ಆದರೆ ಈ ಮಹತ್ವಾಕಾಂಕ್ಷೆಯ ಗುರಿ ಸಾಧನೆ ಹೇಗೆ ಸಾಧ್ಯ ಎಂಬ ಜಟಿಲ ಪ್ರಶ್ನೆಗೆ ಈ ವರೆಗೂ ಸರಿಯಾದ ಉತ್ತರ ಲಭಿಸಿಲ್ಲ. ಈ ನಿಟ್ಟಿನಲ್ಲಿ ವಿಭಿನ್ನ ಸಂಘ ಸಂಸ್ಥೆಗಳು ಪ್ರತ್ಯೇಕ-ಪ್ರತ್ಯೇಕವಾಗಿ ತಮ್ಮದೇ ಕಾರ್ಯಯೋಜನೆಗಳಂತೆ ಕಾರ್ಯೋನ್ಮುಖವಾಗಿವೆ. ಅಂತೂ ಸಮುದಾಯದ ಹೆಚ್ಚೆಚ್ಚು ಜನರು ತಮ್ಮ ಬಣದ ಹಿಂಬಾಲಕರಾಗಬೇಕೆಂಬ ಪೈಪೋಟಿಯು ಇದೀಗ ನಿಗೂಢವಾಗಿ ಉಳಿದಿಲ್ಲ. ತನ್ಮಧ್ಯೆ ಸಮುದಾಯದ ಒಟ್ಟು ಹಿತಾಸಕ್ತಿಯನ್ನು ಪರಿಗಣಿಸಿಕೊಂಡು ಒಂದು ಸಮಗ್ರವಾದ ಕಾರ್ಯಯೋಜನೆಯನ್ನು ಹಮ್ಮಿಕೊಳ್ಳುವ ಪ್ರಾಮಾಣಿಕ ವಿವೇಕ ಭಾರತೀಯ ಮುಸ್ಲಿಮರಿಗೆ ಇನ್ನೂ ಮೂಡಿ ಬರಲಿಲ್ಲವೆಂಬುದು ಸಖೇದಾಶ್ಚರ್ಯ.

ಈ ದೇಶದ ಹಿಂದೂ ಬಾಂಧವರು 'ಹಿಂದೂ ನಾವೆಲ್ಲ ಒಂದು' ಎಂಬ ಅವರದೇ ಆದ ಒಂದು ಘೋಷಣೆ ಕೂಗಬೇಕಾದ ಅನಿವಾರ್ಯತೆಯನ್ನು ಕಂಡುಕೊಂಡರೆ, ಕ್ರೈಸ್ತ ಸಹೋದರರು ತಮ್ಮ ಡಯೋಸಿಸ್‌ಗಳ ಮೂಲಕ ಒಂದು ಪ್ರಬಲ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸಮುಚ್ಚಯವನ್ನು ಕಟ್ಟಿ ಶತಕಗಳೇ ಕಳೆದು ಹೋಯಿತು. ಆದರೆ ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿಯಿರಿ, ನಿಮ್ಮಲ್ಲಿ ಒಡಕುಂಟಾಗದಿರಲಿ ಎಂಬ ಕುರ್‌ಆನ್‌ನ ಸಂದೇಶದ ಸಾಕ್ಷಾತ್ಕಾರಕ್ಕಿಂತಲೂ ಮಿಗಿಲಾಗಿ ಎಪ್ಪತ್ಮೂರು ಪಾರ್ಟಿಗಳಾಗಿ ಒಡೆದು ಒಂದು ಪಾರ್ಟಿ ಮಾತ್ರ ಸ್ವರ್ಗ ಪ್ರವೇಶಿಸುವ ಇಸ್ಲಾಮಿನ ಆಧ್ಯಾತ್ಮಿಕ ಕೊಡುಗೆಯನ್ನು ಖಾಸಗೀಕರಣಗೊಳಿಸಿರುವುದು ಒಂದು ವಿಪರ್ಯಾಸ. ವಾಸ್ತವದಲ್ಲಿ ಅದು ಯಾವುದೇ ಪಾರ್ಟಿ ತನಗಾಗಿ ಸ್ವಾರ್ಥಪಡಿಸಲಿಕ್ಕಾಗಿರುವ ಪ್ರವಾದಿ ವಚನವೇನಲ್ಲ. ಅನ್ಯಥಾ ಕುರ್‌ಆನ್ ಮತ್ತು ಪ್ರವಾದಿಚರ್ಯೆಯನ್ನು ಸ್ವಯಂ ಬದುಕಿನಲ್ಲಿ ಮೈಗೂಡಿಸಿಕೊಂಡಿರುವ ಯಾವೊಬ್ಬ ಮುಸ್ಲಿಮನೂ ಸ್ವರ್ಗ ಪ್ರವೇಶಿಸುವನು ಎಂಬುದೇ ಈ ಪ್ರವಾದಿ ವಚನದ ತಾತ್ಪರ್ಯವಾಗಿದೆ. ದುರದೃಷ್ಟವಶಾತ್ ಪ್ರಚಲಿತವಾಗಿ ಧಾರ್ಮಿಕ ಮೌಲ್ಯಗಳನ್ನು ಪಾರ್ಟಿಗೆ ಲಾಭದಾಯಕವಾಗಿ ಬಳಸಿಕೊಂಡು ಸಾಮುದಾಯಿಕ ಶಿಥಿಲತೆಯನ್ನು ಅನಗತ್ಯವಾಗಿ ಉಳಿಸಿ ಬೆಳೆಸುವ ಅಚಾತುರ್ಯಕ್ಕೆ ಸಮುದಾಯವು ಬಲಿಯಾಗಿರುವುದು ಒಂದು ದುರಂತ. ಸಮುದಾಯದ ಕೆಲವೊಂದು ಆಸಕ್ತ ಶಕ್ತಿಗಳು ಹುಟ್ಟು ಹಾಕಿದ ಈ ಜಟಿಲತೆಯ ಮಧ್ಯೆ ಕಣ್ತೆರೆದು ವಾಸ್ತವಿಕತೆಗಳತ್ತ ಗಮನ ಹರಿಸಬೇಕಾದ ಅನಿವಾರ್ಯತೆ ಇದೆ. ಸಂಘಟನಾತ್ಮಕ ವೈರಾಗ್ಯವನ್ನು ಬದಿಗೊತ್ತಿ ಉದಾರವಾದ ಈ ಕಾರ್ಯದತ್ತ ಗಮನ ಹರಿಸಬೇಕಾಗಿದೆ.

ಬ್ರಿಟೀಷ್ ವಸಾಹತುಶಾಹಿಗಳಿಂದ ಭಾರತ ಸ್ವಾತಂತ್ರ್ಯ ಪಡೆದ ನಂತರದ ಆರು ದಶಕಗಳಲ್ಲಿ ಸಮುದಾಯದ ಒಟ್ಟು ಹಿತಾಸಕ್ತಿಯನ್ನು ಧ್ಯೇಯೋದ್ದೇಶವಾಗಿರಿಸಿಕೊಂಡು ಯಾವುದೇ ಯೋಜನೆ ಹಾಕಿಕೊಳ್ಳಲು ದೇಶೀಯ ಮುಸ್ಲಿಮರಿಗೆ ಯಾಕೆ ಸಾಧ್ಯವಾಗಲಿಲ್ಲ? ದೇಶದಲ್ಲಿ ಸರ್ವರಿಗೂ ಲಭ್ಯವಾದಂತೆ ಮುಸ್ಲಿಮರಿಗೂ ಸರ್ವ ಸ್ವಾತಂತ್ರ್ಯವೂ ಲಭ್ಯವಾಗಿತ್ತು. ಮಸೀದಿ-ಮದ್ರಸಗಳ ನಿರ್ಮಾಣ, ಧಾರ್ಮಿಕ ವಿಧಿ ವಿಧಾನಗಳ ಅನುಷ್ಠಾನ, ಆಧ್ಯಾತ್ಮಿಕ ತತ್ವಾದರ್ಶಗಳನ್ನು ಸಾಹಿತ್ಯ ಮತ್ತು ಮಾಧ್ಯಮಗಳ ಮೂಲಕ ಪ್ರಚುರಪಡಿಸುವ ಸ್ವಾತಂತ್ರ್ಯ. ಸಭೆ-ಸೆಮಿನಾರ್‌ಗಳನ್ನು ನಡೆಸುವ, ಸಂಘ ಸಂಸ್ಥೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯವೂ ಲಭಿಸಿದೆ. ಈ ಹಕ್ಕು, ಅವಕಾಶಗಳನ್ನು ಸಮುದಾಯದ ಸರ್ವಾಂಗೀಣ ಹಿತಾಸಕ್ತಿಯನ್ನು ದೃಷ್ಟಿಯಲ್ಲಿರಿಸಿಕೊಂಡು ರಚನಾತ್ಮಕವಾಗಿ ಬಳಸಲು ಈ ಸಮುದಾಯದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಇದು ನಿಜವೆಂದಾದರೆ... ಯಾಕೆ ಸಾಧ್ಯವಾಗಲಿಲ್ಲ ಎಂಬುದಕ್ಕೆ ಉತ್ತರ ಕಂಡು ಹುಡುಕಬೇಕಾದ ಅಗತ್ಯವಿದೆ.

ಅಂದಂತೆ ಕಳೆದು ಹೋದ 60 ವರ್ಷಗಳಲ್ಲಿ ಅನೇಕ ಶಾಲೆ, ಕಾಲೇಜು, ಅರೇಬಿಕ್ ಕಾಲೇಜುಗಳ ನಿರ್ಮಾಣವಾಗಿದೆ. ಯಾವುದೇ ಹೆಚ್ಚಿನ ಅಡೆ ತಡೆಯಿಲ್ಲದೆ ಯಥೇಚ್ಛ ಮಸೀದಿಗಳು ನಿರ್ಮಾಣಗೊಂಡಿದೆ. ಅನೇಕಾರು ಮುಸ್ಲಿಮ್ ಸಂಘಟನೆಗಳು ಸಾಹಿತ್ಯ ಕೃತಿಗಳನ್ನು, ಪತ್ರಿಕೆಗಳನ್ನು ಹೊರಡಿಸುತ್ತಲಿವೆ. ಸಭೆ ಸೆಮಿನಾರ್‌ಗಳನ್ನು ಸಂಘಟಿಸಿವೆ.

ನಿಜಾರ್ಥದಲ್ಲಿ ಒಂದೂವರೆ ಸಹಸ್ರಮಾನದ ಪಾರಂಪರ್ಯವಿರುವ ಇಸ್ಲಾಮಿ ವಿಧಿ-ವಿಧಾನಗಳು ಮಾನವ ಮನ-ಮಸ್ತಿಷ್ಕಗಳಲ್ಲಿ ಚಾಲನೆಯಲ್ಲಿರುವಾಗ, ಅದರಲ್ಲಿ ಸಹಜವಾಗಿ ಕೆಲವೊಂದು ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ಅದರಂತೆ ಕೆಲವು ಸಂಘಟನೆಗಳು ಉದ್ಭವಿಸುವುದು ಕೂಡಾ ಅಷ್ಟೇ ಸಹಜ. ಆದರೆ ಈ ಮೂಲಭೂತ ವಿಷಯಗಳನ್ನು ಕೇಂದ್ರೀಕರಿಸಿಕೊಂಡು ಒಂದು ಇನ್ನೊಂದನ್ನು ಧರ್ಮಭ್ರಷ್ಟಗೊಳಿಸುವ ಅಕ್ಷಯಂದತೆಯ ಭ್ರಾಂತ ರೂಪತಾಳಿರುವುದು ಲಜ್ಜಾಸ್ಪದವಲ್ಲವೇ? ಮುಸ್ಲಿಮರನ್ನೇ ಮುಸ್ಲಿಮರು ಧರ್ಮ ಭ್ರಷ್ಟಗೊಳಿಸುವ ಈ ಕ್ಲಿಷ್ಟತೆಯ ಬಗ್ಗೆ ಪ್ರವಾದಿ ವಚನ ಏನು ಹೇಳುತ್ತದೆ?

ಅನಸ್(ರ) ಅವರಿಂದ ವರದಿಯಾಗಿದೆ. ಪ್ರವಾದಿಯವರು(ಸ) ಹೇಳಿದರು, ನಮ್ಮಂತೆಯೇ ನಮಾಝ್ ಮಾಡುವವನು, ನಮ್ಮ ಕಿಬ್ಲಾದ ಕಡೆಗೆ ಮುಖಮಾಡುವವನು **(13ನೇ ಪುಟಕ್ಕೆ)**



# ಈಮಾನ್

ಮುಹಮ್ಮದ್ ಅಬ್ದುಲ್ಲಾ ಜಾವೀದ್

ಅಬಿಸೀನಿಯಾದ ಓರ್ವ ವ್ಯಕ್ತಿ ಬಂದು ಪ್ರವಾದಿವರ್ಯರಲ್ಲಿ(ಸ) ಹೀಗೆ ಅರಿಕೆ ಮಾಡಿಕೊಂಡರು, "ಅಲ್ಲಾಹನ ಸಂದೇಶವಾಹಕರೇ(ಸ)! ತಮಗೆ ನಮಗಿಂತ ಪ್ರವಾದಿತ್ವ ಮತ್ತು ಬಣ್ಣದಲ್ಲಿ ಶ್ರೇಷ್ಠತೆಯನ್ನು ನೀಡಲಾಗಿದೆ. ಅಂದರೆ ತಾವು ಅಲ್ಲಾಹನ ಸಂದೇಶವಾಹಕರಾಗಿರುತ್ತೀರಿ ಮತ್ತು ತಮ್ಮ ಮೈಬಣ್ಣ ನಮಗಿಂತ ಉತ್ತಮವಾದುದಾಗಿದೆ. ಒಂದು ವೇಳೆ ತಮಗೆ ವಿಶ್ವಾಸವಿರುವ ವಿಷಯಗಳೆಲ್ಲದರಲ್ಲಿ ನಾನೂ ವಿಶ್ವಾಸವಿರಿಸಿದರೆ ಮತ್ತು ತಾವು ಎಸಗುವಂತಹದೇ ಕರ್ಮಗಳನ್ನು ನಾನೂ ಎಸಗಿದರೆ, ತಮ್ಮೊಡನೆ ಸ್ವರ್ಗದಲ್ಲಿ ನಾನೂ ಪ್ರವೇಶ ಪಡೆಯುವೆನೇ?"

ಪ್ರವಾದಿವರ್ಯರು(ಸ) ಹೀಗೆ ಉತ್ತರಿಸಿದರು, "ಯಾರಾದರೂ ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಎಂದು ಸಾಕ್ಷ್ಯ ವಹಿಸಿದರೆ ಅಂತಹವರಿಗೆ ಅಲ್ಲಾಹನ ವತಿಯಿಂದ ಸ್ವರ್ಗದ ವಾಗ್ದಾನವಿದೆ."

ಆ ವ್ಯಕ್ತಿ ಪುನಃ ಕೇಳಿದರು, "ಸ್ವರ್ಗದಲ್ಲಿ ತಾವು ವೀಕ್ಷಿಸುವುದೆಲ್ಲವನ್ನೂ ನನ್ನ ಕಣ್ಣುಗಳೂ ಕಾಣುವವೇ?"

ಪ್ರವಾದಿವರ್ಯರು(ಸ) ಹೌದೆಂದರು. ಇದನ್ನು ಕೇಳಿ ಆ ಹಬಶೀ ಗಳಗಳನೇ ಅತ್ತು ಬಿಟ್ಟರು ಮತ್ತು ಅವರ ಪ್ರಾಣಪಕ್ಷಿ ಹಾರಿಹೋಯಿತು.

ಈ ಘಟನೆಯು ಈಮಾನ್‌ನ (ವಿಶ್ವಾಸದ) ವಾಸ್ತವಿಕತೆಯನ್ನು ಸ್ಪಷ್ಟಪಡಿಸುತ್ತದೆ. ಈಮಾನ್ ಎಂಬುದು ಒಂದು ಸಮಗ್ರ ಮತ್ತು ಪ್ರಭಾವಶಾಲಿ ಶಕ್ತಿಯಾಗಿದೆ. ಈ ಆಕರ್ಷಕ ಮತ್ತು ಪ್ರಭಾವಪೂರ್ಣ ಶಕ್ತಿಯು ಯಾರ ಮನದಲ್ಲಾದರೂ ಮನೆ ಮಾಡಿ ಬಿಟ್ಟಿತೆಂದರೆ, ಆತನ ಜೀವನದಲ್ಲಿ ಸತ್ಕ್ರಾಂತಿಯುಂಟಾಯಿತು ಎಂದರ್ಥ. ಅದರಲ್ಲಿ ವಿಶಾಲತೆಯಿದೆ. ಅಂದರೆ ಈಮಾನಿಗೆ ಎಪ್ಪತ್ತು ಹಂತಗಳಿವೆ. ಅದು ವಿರಳಿತವುಂಟಾಗುವಂತಹ ಒಂದು ಸಂವೇದನೆಯೂ ಆಗಿದೆ. ಅದು ಅಲ್ಲಾಹನ ಅನುಗ್ರಹವಾಗಿದೆ. ಅಂದರೆ ಅಲ್ಲಾಹನ ಇಚ್ಛೆಯ ಹೊರತು ಯಾರಿಗೂ ಈಮಾನ್‌ನ ಸಮೃದ್ಧಿ ದೊರೆಯಲಾರದು. ಈ ವಿಶ್ವಾಸದ ಕಾರಣವಾಗಿ ಜನರ ಜೀವನದಲ್ಲಿ ಯಾವ ರೀತಿ ಅನುಪಮ ಕ್ರಾಂತಿಯುಂಟಾಯಿತು ಎಂಬುದಕ್ಕೆ ಪ್ರವಾದಿವರ್ಯರ(ಸ) ಜೀವನ ಚರಿತ್ರೆಯ ಹಲವಾರು ಘಟನೆಗಳು ಸಾಕ್ಷ್ಯ ವಹಿಸುತ್ತವೆ. ಕಲ್ಲನ್ನು ಪೂಜಿಸುತ್ತಿದ್ದವರು ಏಕದೇವನ ಮೇಲೆ ವಿಶ್ವಾಸ ತಾಳಿದರು. ಪರಸ್ಪರರ ಹಕ್ಕುಗಳನ್ನು ಕಸಿಯುತ್ತಿದ್ದವರು ಒಡಹುಟ್ಟಿದ ಸಹೋದರರಂತಾದರು ಮತ್ತು ಪರಸ್ಪರರನ್ನು ತಮ್ಮ ಜೀವಕ್ಕಿಂತಲೂ ಹೆಚ್ಚು ಇಷ್ಟಪಡತೊಡಗಿದರು, ಸ್ತ್ರೀಯರನ್ನು ಗೌರವಿಸದವರು ಹೆಣ್ಣು ಮಗುವಿನ ಜನನವನ್ನು ತಮ್ಮ ಪಾಲಿಗೆ ಅದೃಷ್ಟವೆಂದು ಬಗೆದರು, ತಮ್ಮ ರಾತ್ರಿಗಳನ್ನು ಅಪ್ರಯೋಜಕ ವಿಷಯ ಮತ್ತು ಅನೈತಿಕತೆಯಲ್ಲಿ ಕಳೆಯುತ್ತಿದ್ದವರು ರಾತ್ರಿಗಳ ಬಹುಪಾಲನ್ನು ಅಲ್ಲಾಹನ ಸ್ಮರಣೆ ಮತ್ತು ಆರಾಧನೆಯಲ್ಲಿ ಕಳೆದರು. ಸುಬ್ಹಾನಲ್ಲಾಹ್! ಎಂತಹ ಬದಲಾವಣೆ ಆ ಕಾಲದ ಜನರಲ್ಲಿ ಉಂಟಾದುದು!! ಪವಿತ್ರ ಕುರ್‌ಆನ್ ಅವರ ಬಗ್ಗೆ ಹೀಗೆ ಸಾಕ್ಷ್ಯ ವಹಿಸಿತು, "ಅಲ್ಲಾಹ್ ಅವರಿಂದ ಸಂತುಷ್ಟನಾದನು ಮತ್ತು ಅವರೂ ಅಲ್ಲಾಹನಿಂದ ಸಂತುಷ್ಟರಾದರು." (ಅಲ್ ಬಯ್ಯಿನ: 8)

ಈಮಾನ್ ಎಂಬುದು ವಿಶ್ವಾಸ ಮತ್ತು ಕರ್ಮದ ಸಮಗ್ರ ಹೆಸರಾಗಿದೆ. ಯಾರ ಹೃದಯದಲ್ಲಿ ಈಮಾನ್ ಇರುವುದೋ ಅವರ ಜೀವನವು ಕ್ರಿಯಾಶೀಲತೆಯಿಂದ ಕೂಡಿರುವುದು. ತರುವಾಯ ಈಮಾನ್ ಹೆಚ್ಚಿದಂತೆಯೇ ಅವರ ಕರ್ಮಾಧಾರಿತ ಜೀವನವೂ ಇನ್ನಷ್ಟು ಕ್ರಿಯಾಶೀಲವಾಗುವುದು. ನೀರು ಎಷ್ಟು ಆಳವಾಗಿರುವುದೋ ಅದರಲ್ಲಿ ಹರಿವು ಅಷ್ಟೇ ತೀವ್ರವಾಗಿರುತ್ತದೆ. ದೊಡ್ಡ ದೊಡ್ಡ ತೆರೆಗಳು ಆಳ ಸಮುದ್ರದಿಂದ ಏಳುವುದೇ ಹೊರತು ನದಿ, ನಾಲೆಗಳಿಂದಲ್ಲ. ಯಾವ ರೀತಿ ಸಮುದ್ರದಿಂದೇಳುವ ತೆರೆಗಳು ತೀರದ ಕೊಳೆ, ಕಲ್ಮಶಗಳನ್ನು ನೀಗಿಸುವುದೋ ಅದೇ ರೀತಿ ಅಗಾಧ ಈಮಾನ್ ಇರುವವರ ಕರ್ಮಗಳು ಕೆಡುಕುಗಳನ್ನು ಅಳಿಸುತ್ತವೆ.

"ಸತ್ಯ ಬಂತು ಮತ್ತು ಮಿಥ್ಯ ಅಳಿಯಿತು. ಮಿಥ್ಯವು ಅಳಿಯಲೇಬೇಕಲ್ಲವೇ?" (ಕುರ್‌ಆನ್: 17:81)

ಅಲ್ಲಾಹನ ಮಾರ್ಗದರ್ಶನದಂತೆ ಉತ್ತಮ ಸಮಾಜ ನಿರ್ಮಾಣ ಮಾಡಬಯಸುವವರು, ತಮ್ಮ ಹೃದಯಗಳಲ್ಲಿ ಈಮಾನನ್ನು ದೃಢ ಮತ್ತು ಆಳಗೊಳಿಸಬೇಕಾದ ಅಗತ್ಯ ಬಹಳವಿದೆ.

ದುರ್ಬಲ ವಿಶ್ವಾಸಿಗಳಿಂದ ಕ್ರಾಂತಿಕಾರಿ ಕೆಲಸ ನಡೆಯಲಾರದು ಮತ್ತು ಅಂತಹವರಿಂದ ಅದರ ನಿರೀಕ್ಷೆಯನ್ನೂ ಇರಿಸಲಾಗದು. ಅಲ್ಲಾಹನು ವಿಶ್ವಾಸದ ರಕ್ಷಣೆ ಮತ್ತು ಅದರಲ್ಲಿ ಹೆಚ್ಚಳವುಂಟು ಮಾಡಲು ನಿರಂತರ ಪ್ರಯತ್ನಿಸಬೇಕೆಂದು ಆಗಾಗ ತಾಕೀತು ಮಾಡಿದ್ದಾನೆ. ಅಲ್ಲಾಹ್ ದೃಢವಾದ ವಿಶ್ವಾಸ ಹೊಂದಿರುವ ಜೀವನವನ್ನು ಪ್ರೀತಿಸುತ್ತಾನೆ. ಅಲ್ಲಾಹನಿಗೆ ಇಷ್ಟವಿರುವವರೊಡನೆ, 'ವಿಶ್ವಾಸ ತಾಳಿರಿ ಮತ್ತು ಸತ್ಕರ್ಮಗಳನ್ನೆಸಗುವ ಮೂಲಕ ವಿಶ್ವಾಸವನ್ನು ಬಲಪಡಿಸಿರಿ' ಎಂದು ತಾಕೀತು ಮಾಡಲಾಗುತ್ತದೆ.

ಹೃದಯದಲ್ಲಿ ವಿಶ್ವಾಸ, ಅದನ್ನು ಪ್ರಕಟಿಸುವ ಕರ್ಮ ಜೀವನ, ಈಮಾನನ್ನು ಹೆಚ್ಚಿಸುವ ಮತ್ತು ದೃಢಗೊಳಿಸುವ ಪ್ರಯತ್ನ... ಇದುವೇ ಜೀವನದ ವಾಸ್ತವ ಸಾರಾಂಶವಾಗಿದೆ. ಅದನ್ನು ಇಬಾದತ್ ಎಂದೂ ಹೇಳಲಾಗುತ್ತದೆ. ಅಲ್ಲದೆ, ಮಾನವನ ಜೀವನದ ಉದ್ದೇಶವು ಅಲ್ಲಾಹನ ಆರಾಧನೆಯಾಗಿದೆ ಎಂಬುದು ಸ್ಪಷ್ಟ.

# ಶಿವಮೊಗ್ಗದ ಅಬ್ದುಲ್ ವಹಾಬ್ ಸಾಹೇಬರು



**ಆಂದೋಲನದ ಹರಿಕಾರರು**

**ನಿರೂಪಣೆ: ಅರಫಾ ಮಂಚಿ**

ಜಮಾಅತೆ ಇಸ್ಲಾಮೀ ಹಿಂದ್‌ನ ಹಿರಿಯ ಪಯಣಿಗರಲ್ಲಿ ಶಿವಮೊಗ್ಗದ ಮುಲ್ಲಾ ಅಬ್ದುಲ್ ವಹಾಬರೋರ್ವರಾಗಿದ್ದಾರೆ. ಬಾಯಿ ತುಂಬ ನಗು ನಗುತ್ತಾ ಮಾತಾಡುವ ವಹಾಬ್ ಸಾಹೇಬರಿಗೆ ಸುಮಾರು 68 ವರ್ಷ ಪ್ರಾಯ. 1942 ಡಿಸೆಂಬರ್ 1 ರಂದು, ಅವರು ಹುಟ್ಟಿದ್ದು ಶಿರಾಳ ಕೊಪ್ಪದಲ್ಲಿ. ಜಮಾಅತ್‌ನ ಚಟುವಟಿಕೆಯಲ್ಲಿ ಅಲ್ಲಿಯೇ ತೊಡಗಿಸಿಕೊಂಡರು. ಪ್ರೀತಿಯಿಂದ ಪೋಸ್ಟ್‌ಮಾಸ್ಟರ್ ಎಂದು ಕರೆಯಲಾಗುವ ಅವರು ಆ ಹುದ್ದೆಯಿಂದ ನಿವೃತ್ತರಾಗಿ ಈಗ ಶಿವಮೊಗ್ಗದ ವಾದಿಹುದಾದ (ಬೈಪಾಸ್ ರಸ್ತೆ) ಮನೆಯಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಸರಕಾರಿ ಉದ್ಯೋಗದಲ್ಲಿದ್ದು ನಿವೃತ್ತರಾದರೂ ಈಗಲೂ ಜಮಾಅತ್ ಚಟುವಟಿಕೆಯಲ್ಲಿ ಅವಿಶ್ರಾಂತರಾಗಿ ಸಕ್ರಿಯರಾಗಿದ್ದಾರೆ.

ಶಿರಾಳ ಕೊಪ್ಪದ ಮುಲ್ಲಾ ಮೊಹಿಯ್ಯುದ್ದೀನ್ ಮತ್ತು ಹುಸೇನ್‌ಬಿ ದಂಪತಿಗಳಿಗೆ ಮೂರನೇ ಪುತ್ರನಾಗಿ ವಹಾಬ್ ಜನಿಸಿದರು. ಐವರು ಸಹೋದರರು ಮತ್ತು ನಾಲ್ವರು ಸಹೋದರಿಯರ ತುಂಬು ಕುಟುಂಬ ಅವರದಾಗಿತ್ತು. ಈಗ ಬದುಕುಳಿದಿರುವುದು ಮೂವರು ಸಹೋದರರು ಮತ್ತು ಓರ್ವ ತಂಗಿ ಮಾತ್ರ.

ಪೋಸ್ಟ್ ಮಾಸ್ಟರೆಂದರೆ ವಿದ್ಯಾವಂತ ಎಂದು ಜನ ಒಪ್ಪಿಕೊಳ್ಳುವ ಕಾಲವದು ಅದರಂತೆ ಅಬ್ದುಲ್ ವಹಾಬರ ವ್ಯಕ್ತಿತ್ವವು ಆಕರ್ಷಕವಾದುದು. ಆದುದರಿಂದ ಅವರನ್ನು ಓರ್ವ ವರ್ಚಸ್ವಿ ವ್ಯಕ್ತಿಯೆಂದು ಮೊದಲ ನೋಟದಲ್ಲೇ ನಮಗೆ ಗುರುತಿಸಬಹುದು. ಹೌದು. ವ್ಯಕ್ತಿ, ಶಕ್ತಿ, ವರ್ಚಸ್ಸು ಅದೆಲ್ಲವೂ ಇಸ್ಲಾಮಿಗೆ ಬಳಕೆಯಾಗುವಂತಾದರೆ ಧನ್ಯವೇ ಅಲ್ಲವೇ. ಆಂದೋಲನದ ದಾರಿಯಲ್ಲಿ ಅದು ಖರ್ಚಾಗುವುದಾದರೆ ಅದಕ್ಕಿಂತ ದೊಡ್ಡ ಸೌಭಾಗ್ಯ ಬೇರೇನಿದೆ?

ಸರಕಾರಿ ಉದ್ಯೋಗಿ ಜೀವನ ಸವೆಸುವುದು ಅಷ್ಟು ತ್ರಾಸದಾಯಕವೆಂದೇನೂ ಒಪ್ಪಬೇಕಾಗಿಲ್ಲ. ಅದರೆ ಜೀವಿಸುವುದಕ್ಕೆ ಯಾವ ಉದ್ಯೋಗವಾದರೂ ಒಂದು ಉಪಜೀವನ ಮಾರ್ಗ ಮಾತ್ರವಾಗಿದೆ ಎಂಬುದನ್ನು ಅವರು ಬೇಗ ಅರಿತುಕೊಂಡರು. ಪೂರ್ಣ ಜೀವನ ಅರ್ಥಾತ್ ಶಾಶ್ವತ ಜೀವನಕ್ಕಾಗಿ ಪರಿಶ್ರಮಿಸದಿದ್ದರೆ ಯಾವ ಯಶಸ್ಸೂ ದಕ್ಕದೆಂದು ಅವರಿಗೆ ಅರ್ಥವಾದುದು ಜಮಾಅತ್‌ನ ಸಂಪರ್ಕಕ್ಕೆ ಬಂದಾಗಲೇ.

ಶಿರಾಳಕೊಪ್ಪದಲ್ಲಿ ನಜೀಬುಲ್ ಹಕ್ ಎಂಬೋರ್ವ ವೈದ್ಯರಿದ್ದರು. ಅವರು ಶಿವಮೊಗ್ಗದಲ್ಲಿ ವೃತ್ತಿ ನಡೆಸುತ್ತಿದ್ದರು. ಅವರಿಗೆ ಬಹುಶಃ ಅಲ್ಲಿ ಜಮಾಅತ್ ಮತ್ತು ಜಮಾಅತ್‌ನ ಚಟುವಟಿಕೆಗಳು ಪರಿಚಯವಾಗಿದೆ. ಅವರು ಶಿರಾಳ ಕೊಪ್ಪದಲ್ಲಿ ಬಂದು ಆಂದೋಲನವನ್ನು ಪರಿಚಯಿಸಲು ಯತ್ನಿಸುತ್ತಿದ್ದರು. ಆಗ ಸಂಪರ್ಕಕ್ಕೆ ಬಂದವರಲ್ಲಿ ಚಮನ್ ಮಿಯಾಂ, ಪೋಸ್ಟ್ ಮಾಸ್ಟರ್ ಮುಂತಾದವರಿದ್ದರು. ಹೀಗೆ ಪೋಸ್ಟ್ ಮಾಸ್ಟರ್‌ರಿಗೆ ಜಮಾಅತ್‌ನ ಪರಿಚಯವಾಯಿತು. ಅಲ್ಲಿಂದ ಆಂದೋಲನದ ಧ್ಯೇಯೋದ್ದೇಶಗಳು, ನೈಜ ಇಸ್ಲಾಮೀ ಸ್ಥಿತಿಯ ಕುರಿತು ತಿಳುವಳಿಕೆ ಮೂಡಿತು. ಆದುದರಿಂದ ಶಿರಾಳ ಕೊಪ್ಪದಲ್ಲಿ ಜಮಾಅತ್‌ನ ಚಟುವಟಿಕೆ ಪ್ರಾರಂಭಿಸುವ ಪ್ರಯತ್ನ ಆರಂಭವಾಯಿತು. ಅವರಿಗೆ ಜೊತೆಯಾಗಿ ಚಮನ್ ಮಿಯಾ ಮತ್ತು ಇತರ ಸಂಗಾತಿಗಳೂ ಇದ್ದಾರೆ. ಅಷ್ಟರಲ್ಲೇ ಪೋಸ್ಟ್‌ಮಾಸ್ಟರ್ ಅಧ್ಯಕ್ಷತೆಯಿಂದ ಶಿರಾಳ ಕೊಪ್ಪದಲ್ಲಿ ಒಂದು ನರ್ಸರಿ ಸ್ಕೂಲ್ ಆರಂಭವಾಗಿತ್ತು. ಬಾಝಾರ್ ಮಸೀದಿಯ ಕಟ್ಟಡದಲ್ಲಿ 'ತಾಜ್ ಪೂಲ್ ನರ್ಸರಿ' ಎಂಬ ಹೆಸರಲ್ಲಿ ಅದು ಕಾರ್ಯನಿರ್ವಹಿಸುತ್ತಿತ್ತು.

ಹೀಗಿರುವಾಗ ಜಮಾಅತ್ ಚಟುವಟಿಕೆ ಪ್ರಾರಂಭಿಸುವುದಕ್ಕೆ ಏನು ಕಷ್ಟವಿದೆ?

ಪೋಸ್ಟ್ ಮಾಸ್ಟರ್, ಚಮನ್‌ಮಿಯಾ, ನಜೀಬುಲ್ ಹಕ್ಕ್ ಮುಂತಾದವರೆಲ್ಲ ಸೇರಿ ವಾರದ ಸಭೆ ನಡೆಸುವುದೆಂದು ತೀರ್ಮಾನಿಸಿದರು. ಜಮಾಅತ್‌ನ ವಾರದ ಸಭೆಗಳಿಂದ ವಿಸ್ತಾರವಾದ ಚಟುವಟಿಕೆಗೆ ತೆರೆದುಕೊಂಡಿರುವ ಸಂಘಟನೆ ಯಷ್ಟೇ. ಪವಿತ್ರ ಕುರ್‌ಆನ್ ಅಧ್ಯಯನ ತರಗತಿಯಿಂದ ಅದರ ಚಟುವಟಿಕೆಗಳು ವಿಸ್ತಾರಗೊಳ್ಳುತ್ತವೆ. ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯನ್ನು ಅನುಸರಿಸುತ್ತಾ ಅದರ ಕಾರ್ಯಕ್ರಮಗಳು ವಿಸ್ತಾರಗೊಳ್ಳುತ್ತವೆ. ಈಗ ಪೋಸ್ಟ್‌ಮಾಸ್ಟರ್ ಮತ್ತು ಸಂಗಡಿಗರಿಗೆ ವಾರದ ಸಭೆ ಅರ್ಥಾತ್ ಕುರ್‌ಆನ್ ತರಗತಿ ಪ್ರಾರಂಭಿಸಬೇಕಾಗಿದೆ. ಅದನ್ನು ತಮ್ಮ ಶಾಲಾಸಭೆಯ ಹೆಸರಿನಲ್ಲಿ ಪ್ರಾರಂಭಿಸುವುದೆಂದು ಸಮಾನ ಮನಸ್ಕ ಮಿತ್ರರೊಡನೆ ಸೇರಿ ನಿರ್ಧರಿಸಿದರು.

ಕುರ್‌ಆನ್ ಕ್ಲಾಸ್ ಮಾಡಿದರೆ ಅದನ್ನು ಯಾರು ವಿರೋಧಿಸುತ್ತಾರೆ? ಯಾಕೆ ವಿರೋಧಿಸುತ್ತಾರೆ?

ಆದುದರಿಂದ ದರ್ಸ್ ಜನರನ್ನು ಆಕರ್ಷಿಸತೊಡಗಿತು. ಡಾ। ನಜೀಬುಲ್ ಹಕ್, ಚಮನ್ ಮಿಯಾ ಸಾಹೇಬರು ಕುರ್‌ಆನ್ ತರಗತಿ ನಡೆಸತೊಡಗಿದರು. ಹೀಗಿರುವಾಗ ಒಂದು ಸಾರ್ವಜನಿಕ ಕಾರ್ಯಕ್ರಮ ಏರ್ಪಡಿಸಬೇಕೆಂದು ಇಚ್ಛೆಯಾಯಿತು. ಮಸೀದಿಯ ವಠಾರದಲ್ಲಿ ಹಾಸನದಿಂದ ಅಬ್ದುಲ್ ಕದೀರ್ ಇಸ್ಲಾಹಿಯವರನ್ನು ಕರೆಸಿ ಸಾರ್ವಜನಿಕ ಕಾರ್ಯಕ್ರಮದ ಏರ್ಪಾಡು ನಡೆಯತೊಡಗಿತು. ಇಸ್ಲಾಹಿಯವರು ಬರುತ್ತಾರೆಂದಾಗ ಪೋಸ್ಟ್‌ಮಾಸ್ಟರ್ ಮತ್ತು ಸಂಗಡಿಗರು ಶಿರಾಳ ಕೊಪ್ಪದಲ್ಲಿ ಜಮಾಅತೆ ಇಸ್ಲಾಮಿಯ ಬೀಜ ಹಾಕುತ್ತಾರೆಂದು ಸಮುದಾಯ ಬಾಂಧವರು ಕೆರಳಿದರು. ಆದುದರಿಂದ ಏನೇ ಆದರೂ ಮಸೀದಿಯ ವಠಾರದಲ್ಲಿ ಜಮಾಅತ್‌ನ ಸಾರ್ವಜನಿಕ ಸಭೆ ನಡೆಯಲು ಬಿಡಬಾರದೆಂಬ ಹಠ ಅವರಲ್ಲಿ ಹುಟ್ಟಿಕೊಂಡಿತು. ಕಾರ್ಯಕ್ರಮ ಮಾಡುತ್ತಿರುವ ಜನರೂ ಕೂಡಾ ಒಂದರ್ಥದಲ್ಲಿ ಪ್ರಭಾವಿಗಳೇ. ಬಟ್ಟೆ ಅಂಗಡಿ ಇಟ್ಟಿರುವ ಚಮನ್ ಮಿಯಾಂ, ಪೋಸ್ಟ್‌ಮಾಸ್ಟರ್ ಅಬ್ದುಲ್ ವಹಾಬ್ ಮುಂತಾದವರು. ಮಾತ್ರವಲ್ಲ ನರ್ಸರಿ ಶಾಲೆ ತೆರೆದು ಜನೋಪಕಾರದಲ್ಲಿ ತೊಡಗಿಸಿಕೊಂಡವರು. ದೇಶಬಾಂಧವರಲ್ಲಿಯೂ ಪ್ರೀತಿ ಪಾತ್ರರು.

(ಮುಂದುವರಿಯುವುದು)

# ಆತ ಹಿಂತಿರುಗಿ ನೋಡಿದ, ಯಾರೂ ನಿಲ್ಲಲಿಲ್ಲ

ಒಬ್ಬ ತನ್ನ ಪತ್ನಿ ಮಕ್ಕಳೊಂದಿಗೆ ಪ್ರಯಾಣಿಸುತ್ತಿದ್ದ. ದಾರಿ ಮಧ್ಯೆ ಒಬ್ಬ ಇವರ ವಾಹನಕ್ಕೆ ಅಡ್ಡವಾಗಿ ನಿಂತ. ಆತ ಅವನೊಂದಿಗೆ ಕೇಳಿದ,

"ನೀನು ಯಾರು?"

ಆತ ಉತ್ತರಿಸಿದ, "ನಾನು ಹಣ."

ಆತ ತನ್ನ ಪತ್ನಿ ಮಕ್ಕಳೊಂದಿಗೆ ಕೇಳಿದ, "ಈತನನ್ನು ನಮ್ಮೊಂದಿಗೆ ವಾಹನದಲ್ಲಿ ಸೇರಿಸಲೇ?"

ಪತ್ನಿ ಮಕ್ಕಳು ಒಕ್ಕೊರಳಿನಿಂದ ಹೇಳಿದರು, "ಖಂಡಿತವಾಗಿಯೂ ಸೇರಿಸಿಕೊಳ್ಳಿ. ಏಕೆಂದರೆ ಹಣ ನಮಗೆ ತುಂಬಾ ಅಗತ್ಯವಾದದ್ದು. ನಮಗೆ ಏನಾದರೂ ಮಾಡಲು, ಖರೀದಿಸಲು, ತಿರುಗಾಡಲು ಹಣದ ಅವಶ್ಯಕತೆ ತುಂಬಾ ಇರುತ್ತದೆ."

ಹಾಗಾಗಿ ಆತ ಹಣವನ್ನು ತನ್ನೊಂದಿಗೆ ವಾಹನದಲ್ಲಿ ಸೇರಿಸಿ ಪ್ರಯಾಣ ಮುಂದುವರಿಸಿದ. ಸ್ವಲ್ಪ ದೂರ ಹೋದ ನಂತರ ಮತ್ತೊಬ್ಬ ದಾರಿ ಮಧ್ಯೆ ನಿಂತಿದ್ದ. ಆತ ಕೇಳಿದ,

"ನೀನು ಯಾರು?" ಅವನು ಉತ್ತರಿಸಿದ, "ನಾನು ಅಂತಸ್ತು ಮತ್ತು ಅಧಿಕಾರ."

ಆತ ತನ್ನ ಪತ್ನಿ ಮಕ್ಕಳೊಂದಿಗೆ ಕೇಳಿದಾಗ ಪತ್ನಿ ಮಕ್ಕಳೆಲ್ಲರೂ ಒಕ್ಕೊರಳಿನಿಂದ ಹೇಳಿದರು, "ಖಂಡಿತವಾಗಿಯೂ, ಅಂತಸ್ತು ಮತ್ತು ಅಧಿಕಾರದಿಂದ ನಮಗೆ ಏನು ಬೇಕಾದರೂ ಮಾಡಬಹುದು. ನಮಗೆ ಇದರ ಅಗತ್ಯ ತುಂಬಾ ಇರುತ್ತದೆ." ಹಾಗೆ ಆತ ಅಂತಸ್ತು ಮತ್ತು ಅಧಿಕಾರವನ್ನು ತನ್ನೊಂದಿಗೆ ವಾಹನದಲ್ಲಿ ಸೇರಿಸಿದ.

ಹೀಗೆಯೇ ಪ್ರಯಾಣ ಮುಂದುವರಿಯುತ್ತಾ ಹೋಗುತ್ತಿದ್ದಂತೆಯೇ ಅನೇಕರು ಆ ವಾಹನವನ್ನೇರಿದರು. ಹೀಗೆ ಮುಂದುವರಿಯುತ್ತಿದ್ದಂತೆಯೇ ಒಂದು ಸ್ಥಳದಲ್ಲಿ ಅವರು ಒಬ್ಬನನ್ನು ಭೇಟಿಯಾದರು. ಆತ ನೀನು ಯಾರೆಂದು ಕೇಳಿದಾಗ ಉತ್ತರ ಸಿಕ್ಕಿತು,

"ನಾನು ಇಸ್ಲಾಮ್ ಧರ್ಮ." ಆತ ತನ್ನ ಪತ್ನಿ ಮಕ್ಕಳೊಂದಿಗೆ, "ಈತನನ್ನು ವಾಹನದಲ್ಲಿ ಹತ್ತಿಸಲೇ?" ಎಂದು ಕೇಳಿದಾಗ, ಪತ್ನಿ ಮಕ್ಕಳು ಒಕ್ಕೊರಳಿನಿಂದ ಉತ್ತರಿಸಿದರು,

"ಬೇಡ, ಈಗ ಬೇಡ. ಈತನ ಅಗತ್ಯ ಈಗ ಇಲ್ಲ. ಈತ ಬಂದರೆ ನಮ್ಮನ್ನು ಈ ಲೋಕದ ಐಶಾರಾಮತೆಯಿಂದ ತಡೆಯುವನು. ನಮಾಝ್, ಉಪವಾಸ ವ್ರತ, ಝಕಾತ್, ಪರ್ದಾ ಮುಂತಾದುವುಗಳಿಂದ ನಮ್ಮನ್ನು ನಿಯಂತ್ರಿಸುವನು."

ಆತ ಧರ್ಮದೊಂದಿಗೆ ಹೇಳಿದ, "ನಾವು ಐಶಾರಾಮದಿಂದ ಜೀವಿಸಿ ಹಿಂದಿರುಗಿ ಬರುವಾಗ ಖಂಡಿತವಾಗಿಯೂ ನಿನ್ನನ್ನು ನಮ್ಮ ವಾಹನದಲ್ಲಿ ಸೇರಿಸುವೆವು." ಪ್ರಯಾಣ ಮುಂದುವರಿಯಿತು. ಸ್ವಲ್ಪ ಮುಂದೆ ಹೋದಾಗ ತಪಾಸಣಾ ಕೇಂದ್ರದ ಬೋರ್ಡು ಕಂಡಿತು.

"ನಿಲ್ಲಿಸಿ." ಆತ ವಾಹನವನ್ನು ನಿಲ್ಲಿಸಿದ. ದೂರದಿಂದ ಒಬ್ಬ ಕೈ ಸನ್ನೆ ಮಾಡಿ ಆತನನ್ನು ವಾಹನದಿಂದ ಇಳಿಯಲು ಹೇಳಿದ. ಆತ ಇಳಿದು ಆ ವ್ಯಕ್ತಿಯ ಹತ್ತಿರ ಹೋದಾಗ ಆತ ಹೇಳಿದ,

"ನಿನ್ನ ಪ್ರಯಾಣ ಇಲ್ಲಿಗೆ ಮುಗಿಯಿತು. ನೀನಿನ್ನು ನನ್ನೊಂದಿಗೆ ಬಾ."

ಆತ ಬೆವರಿದ. ಬಾಯಿಯಿಂದ ಒಂದು ಶಬ್ದವೂ ಹೊರಬರಲು ಅಸಾಧ್ಯವಾಯಿತು. ಆ ವ್ಯಕ್ತಿ ಆತನೊಂದಿಗೆ ಹೇಳಿದ, "ನಾನು ನಿನ್ನ ವಾಹನದಲ್ಲಿ ಇಸ್ಲಾಮ್ ಧರ್ಮವನ್ನು ಹುಡುಕುತ್ತಿದ್ದೇನೆ. ಆತ ಕಾಣುವುದಿಲ್ಲವಲ್ಲಾ."

ಆತ ಹೇಳಿದ, "ನಾವು ಆತನನ್ನು ಹಿಂದೆಯೇ ಬಿಟ್ಟು ಬಂದಿದ್ದೇವೆ. ನೀನು ನನಗೆ ಅನುಮತಿ ನೀಡಿದರೆ ನಾನು ಹಿಂದೆ ಹೋಗಿ ಆತನನ್ನು ಕರೆತರುತ್ತೇನೆ."

ಆ ವ್ಯಕ್ತಿ ಉತ್ತರಿಸಿದ, "ನಿನಗೆ ಹಿಂತಿರುಗಿ ಹೋಗಲು ಸಾಧ್ಯವಿಲ್ಲ. ನಿನ್ನ ಪ್ರಯಾಣ ಇಲ್ಲಿಗೇ ಮುಗಿದಿದೆ. ಹಿಂದಿರುಗುವುದು ಅಸಾಧ್ಯವಾದ ಮಾತು."

ಆತ ಹೇಳಿದ,

"ನನ್ನ ವಾಹನದಲ್ಲಿ ಹಣ ಇದೆ, ಅಂತಸ್ತು ಮತ್ತು ಅಧಿಕಾರವಿದೆ, ಪತ್ನಿ ಮಕ್ಕಳಿದ್ದಾರೆ." ಆ ವ್ಯಕ್ತಿ ಉತ್ತರಿಸಿದ, "ಇದು ಯಾವುದೂ ನಿನ್ನ ಉಪಕಾರಕ್ಕೆ ಬರಲಾರದು. ಅಲ್ಲಾಹನೆದುರು ಯಾರೂ ನಿನಗೆ ಸಹಾಯ ಮಾಡಲಾರರು. ನೀನು ಇವರೆಲ್ಲರನ್ನೂ ಇಲ್ಲಿಯೇ ಬಿಟ್ಟು ಬಿಡಬೇಕಾಗುವುದು. ಒಂದು ವೇಳೆ ನಿನಗೆ ಯಾರಾದರೂ ಸಹಾಯ ಮಾಡುವುದಿರುತ್ತಿದ್ದರೆ ಅದು ನೀನು ಹಿಂದೆ ಬಿಟ್ಟು ಬಂದ ಇಸ್ಲಾಮ್ ಧರ್ಮ ಮಾತ್ರ."

ಆತ ನಡುಗುತ್ತಾ ಆ ವ್ಯಕ್ತಿಯೊಂದಿಗೆ ಕೇಳಿದ, "ನೀನು ಯಾರು?" ಆ ವ್ಯಕ್ತಿಯಿಂದ ಉತ್ತರ ಬಂತು, "ನಾನು ಮರಣ." ಆತ ಹಿಂತಿರುಗಿ ತನ್ನ ವಾಹನವನ್ನು ನೋಡಿದ. ಆತನ ಪತ್ನಿ ವಾಹನ ಚಲಾಯಿಸಲು ರೆಡಿಯಾಗುತ್ತಿದ್ದಳು ಹಾಗೂ ಅವರೆಲ್ಲರೂ ಆತನನ್ನು ಬಿಟ್ಟು ಪ್ರಯಾಣ ಮುಂದುವರಿಸಿದರು. ಯಾರೊಬ್ಬರೂ ಆತನೊಂದಿಗೆ ನಿಲ್ಲಲಿಲ್ಲ ಹಾಗೂ ಯಾರೂ ಆತನಿಗೆ ಸಹಾಯ ಮಾಡಲಿಲ್ಲ.

ಅಲ್ಲಾಹನು ಹೇಳುತ್ತಾನೆ, "ಓ ಪೈಗಂಬರರೇ ಹೇಳಿರಿ, ನಿಮ್ಮ ಪಿತರೂ ನಿಮ್ಮ ಮಕ್ಕಳೂ, ನಿಮ್ಮ ಸೋದರರೂ, ನಿಮ್ಮ ಪತ್ನಿಯರೂ, ನಿಮ್ಮ ನೆಂಟರಿಷ್ಟರೂ, ನೀವು ಸಂಪಾದಿಸಿದ ಸಂಪತ್ತೂ, ಮಂದಗೊಳ್ಳಬಹುದೆಂದು ನೀವು ಭಯಪಡುತ್ತಿರುವ ನಿಮ್ಮ ವ್ಯಾಪಾರ ವಹಿವಾಟುಗಳೂ ನೀವು ಇಷ್ಟಪಡುತ್ತಿರುವ ನಿಮ್ಮ ನಿವಾಸಗಳೂ ನಿಮಗೆ ಅಲ್ಲಾಹ್, ಅವನ ಸಂದೇಶವಾಹಕ ಮತ್ತು ಅವನ ಮಾರ್ಗದಲ್ಲಿ ಹೋರಾಟ ನಡೆಸುವುದಕ್ಕಿಂತಲೂ ಪ್ರಿಯವಾಗಿದ್ದರೆ, ಅಲ್ಲಾಹ್ ತನ್ನ ತೀರ್ಮಾನವನ್ನು ನಿಮ್ಮ ಮುಂದೆ ತರುವವರೆಗೂ ಕಾದು ನಿಲ್ಲಿರಿ. ಅಲ್ಲಾಹ್ ಫಾಸಿಕರಿಗೆ (ಕರ್ಮಭ್ರಷ್ಟರಿಗೆ) ಮಾರ್ಗದರ್ಶನ ಮಾಡಿಸುವುದಿಲ್ಲ."

**(ಪವಿತ್ರ ಕುರ್‌ಆನ್: 9:24)**

**✍ ಅಬೂ ಝೀಶಾನ್, ರಿಯಾದ್**

# ಪ್ರವಾದಿ ಈಸಾ(ಅ) ಶಿಲುಬೆಗೇರಿಸಲ್ಪಟ್ಟಿದ್ದರೇ?

**ನಿಂಗಪ್ಪ ತಿಡಿಗೋಳ ಸಿಂಧನೂರು**

**● ವಿಶ್ವದಲ್ಲಿ ಇಂದು ಅಸ್ತಿತ್ವದಲ್ಲಿರುವ ಹಾಗೂ ಅನುಸರಿಸಲ್ಪಡುತ್ತಿರುವ ಧರ್ಮಗಳಲ್ಲಿ, ಅತಿ ಹೆಚ್ಚಿನವರು ಕ್ರೈಸ್ತ ಧರ್ಮದ ಅನುಯಾಯಿಗಳಿದ್ದಾರೆ. ವಿಶ್ವದಲ್ಲಿನ ಕ್ರೈಸ್ತ ಧರ್ಮೀಯರೆಲ್ಲರೂ, ಯೇಸುವು ಶಿಲುಬೆಗೇರಿಸಲ್ಪಟ್ಟು ಮರಣಿಸಿ ಮೂರನೇ ದಿನ ಪುನರುತ್ಥಾನಗೊಂಡಿರುವನು ಎಂದು ಪ್ರಬಲವಾಗಿ ನಂಬಿದ್ದಾರೆ. ಕ್ರೈಸ್ತರ ಈ ನಂಬಿಕೆಗೆ ಆಧಾರ ಸಾಕ್ಷಿ ಎಂಬಂತೆ, ಪವಿತ್ರ ಕುರ್‌ಆನ್‌ನ 19ನೇ ಅಧ್ಯಾಯದ 33ನೇ ವಚನವೂ ಇರುವಾಗ, ಪವಿತ್ರ ಕುರ್‌ಆನ್‌ನ ಅನುಯಾಯಿಗಳು (ಇಸ್ಲಾಮಿಯರು) ಮಾತ್ರ, ಈಸಾ(ಅ) ಶಿಲುಬೇರಿಸಲ್ಪಡಲಿಲ್ಲ ಮೇಲಕ್ಕೆತ್ತಲ್ಪಟ್ಟರು ಎಂದು ನಂಬುವುದು–ವಿಶ್ವಾಸಿಸುವುದು, 'ಕ್ರೈಸ್ತ' ಹಾಗೂ 'ಇಸ್ಲಾಂ' ಧರ್ಮಗಳೆರಡರ ನಡುವಿನ ಪ್ರಮುಖ ವಿರೋಧಾಭಾಸವಾಗುವುದಿಲ್ಲವೆ? ಈ ಹಿನ್ನೆಲೆಯಲ್ಲಿ 'ಈಸಾ(ಅ)ರ ಕುರಿತಾದ ಕುರ್‌ಆನ್‌ನ ವಿವರಣೆಯ ನೈಜತೆಯು ನನ್ನಂತಹ ಅಲ್ಪವಿಶ್ವಾಸಿ ಜಿಜ್ಞಾಸುಗಳಿಗೆ ಗೊಂದಲವೆನಿಸುತ್ತಿದೆ. ದಯವಿಟ್ಟು ಸ್ಪಷ್ಟನೆ ನೀಡಿರಿ?**

❍ ಈಸಾ(ಅ) ಅಥವಾ ಕ್ರೈಸ್ತರು ಕರೆಯುವಂತೆ ಏಸು ಶಿಲುಬೆಗೇರಿಸಲ್ಪಟ್ಟು ಮೃತ ಪಟ್ಟಿದ್ದಾರೆಂದು ಕ್ರೈಸ್ತರು ನಂಬುತ್ತಾರೆ. ಆದರೆ ಅವರು ಶಿಲುಬೆಗೇರಿಸಲ್ಪಡಲೇ ಇಲ್ಲವೆಂದು ಮುಸ್ಲಿಮರು ನಂಬುತ್ತಾರೆ. ಅದಕ್ಕೆ ಪವಿತ್ರ ಕುರ್‌ಆನಿನ ಅನ್ನಿಸಾ ಅಧ್ಯಾಯದ 157ನೇ ಸೂಕ್ತ ಆಧಾರವಾಗಿದೆ. ಅದು ಹೀಗಿದೆ?

"ನಾವು ಅಲ್ಲಾಹನ ಸಂದೇಶವಾಹಕರಾದ ಮರ್ಯಮರ ಪುತ್ರ ಈಸಾ ಮಸೀಹರನ್ನು ವಧಿಸಿದೆವೆಂದು ಅವರು (ಯಹೂದ್ಯರು) ಹೇಳಿದರು. ವಸ್ತುತಃ ಅವರನ್ನು (ಈಸಾರನ್ನು) ಅವರು ವಧಿಸಲೂ ಇಲ್ಲ. ಶಿಲುಬೆಗೇರಿಸಲೂ ಇಲ್ಲ." (4:157)

ಕ್ರೈಸ್ತರು ಏಸು ಮರಣ ಹೊಂದಿ ಮೂರನೇ ದಿವಸ ಪುನರುತ್ಥಾನಗೊಂಡರೆಂದು ನಂಬುತ್ತಾರೆ. ಆದರೆ ಅವರನ್ನು ವಧಿಸಲೂ ಇಲ್ಲ, ಶಿಲುಬೆಗೇರಿಸಲ್ಪಡಲೂ ಇಲ್ಲ. ಆದರೆ ಅವರನ್ನು ಅಲ್ಲಾಹನು ತನ್ನ ಕಡೆಗೆ ಎತ್ತಿಕೊಂಡನೆಂದು ಪವಿತ್ರ ಕುರ್‌ಆನ್ (4:158) ಹೇಳುವುದನ್ನು ಮುಸ್ಲಿಮರು ಬಲವಾಗಿ ನಂಬುತ್ತಾರೆ.

ಪವಿತ್ರ ಕುರ್‌ಆನ್ 1,500 ವರ್ಷಗಳ ಹಿಂದೆ ಅವತೀರ್ಣವಾದ ಮೂಲ ರೂಪದಲ್ಲೇ ಇಂದಿಗೂ ಬಾಕಿ ಉಳಿದಿದೆ. ಅದರಲ್ಲಿ ಯಾವುದೇ ಚುಕ್ಕಿಯ ವ್ಯತ್ಯಾಸವನ್ನೂ ಕಂಡು ಹಿಡಿಯಲು ಯಾರಿಗೂ ಸಾಧ್ಯವಿಲ್ಲ. ಆದರೆ ಬೈಬಲ್ ಅದರ ಮೂಲರೂಪದಲ್ಲಿ ಲೋಕದಲ್ಲಿ ಅಸ್ತಿತ್ವವಿಲ್ಲವೆಂಬುದನ್ನು ಕ್ರೈಸ್ತರೇ ಒಪ್ಪುತ್ತಾರೆ.

ಆದ್ದರಿಂದ ಮುಸ್ಲಿಮರ ನಂಬಿಕೆಯೇ ಸರಿಯಾದ ನಂಬಿಕೆಯಾಗಿದೆ. ಈಸಾ(ಅ) ಲೋಕಾಂತ್ಯ ಕಾಲದಲ್ಲಿ ಆಕಾಶದಿಂದ ಇಳಿದು ಬರುವರು ಎಂದು ಪ್ರವಾದಿ ಮುಹಮ್ಮದ್(ಸ)

**ಕೇಳಿದಿರಾ? ಕೇಳಿ**
**ಮುಜೀಬ್**

ತಮ್ಮ ಅನೇಕ ವಚನಗಳಲ್ಲಿ ಹೇಳಿದ್ದಾರೆ. ವಿವರಣೆಗೆ ಶಾಂತಿ ಪ್ರಕಾಶನದಿಂದ ಪ್ರಕಟಿತ 'ಪ್ರವಾದಿತ್ವ ಪರಿಸಮಾಪ್ತಿ' ಎಂಬ ಪುಸ್ತಕ ನೋಡಿರಿ.

ಆ ಕಾಲದಲ್ಲಿ ಕ್ರೈಸ್ತರಿಗೂ ಯಹೂದಿಯರಿಗೂ ವಸ್ತುಸ್ಥಿತಿಯ ಅರಿವಾಗುವುದು. ಕ್ರೈಸ್ತರೆಲ್ಲರೂ ಈಸಾ(ಅ) ಮರಣ ಹೊಂದುವ ಮುಂಚೆ ಅವರ ಮೇಲೆ ವಿಶ್ವಾಸ ತಾಳುವರೆಂದು ಕುರ್‌ಆನ್ ಸ್ಪಷ್ಟಪಡಿಸುತ್ತಿದೆ. (14:159) ಅವರ ಜನನವೂ ಯಾವ ರೀತಿ ತಂದೆಯಿಲ್ಲದೆ ಪವಾಡ ಸದೃಶವಾಗಿ ಆಗಿತ್ತೋ ಅವರ ಪುನರಾಗಮನವೂ ಒಂದು ಪವಾಡವೇ ಆಗಿದೆ. ಅವರು ಅಲ್ಲಾಹನ ಆಶ್ರಯದಲ್ಲಿದ್ದಾರೆಂದು ಮುಸ್ಲಿಮರು ನಂಬುತ್ತಾರೆ.

# ಸರ್ಪದ ಹುಣ್ಣು ಮತ್ತು ಸರ್ಪದ ಚಿತ್ರ!?

**ಸಿರಾಜುದ್ದೀನ್ ಆಲಮ್, ಚಿತ್ರದುರ್ಗ**

**● ಸರ್ಪದ ಹುಣ್ಣು– ಈ ಪದ ಕೇಳಿರಬಹುದು. ಇದು ಚರ್ಮರೋಗ. ಇದಕ್ಕೆ ರಾಜಪೋಡಾ ಎನ್ನುತ್ತಾರೆ. ಬೆನ್ನಿನ ಭಾಗದಲ್ಲಿ ಹೊಟ್ಟೆ ಭಾಗದಲ್ಲಿ ಕಾಣಿಸಿಕೊಂಡು ಸುತ್ತಲೂ ಬೆಲ್ಟ್‌ನಂತೆ ಬೆಳೆಯುತ್ತದೆ. ಇದಕ್ಕೆ ಅಲೋಪತಿಯಲ್ಲಿ ಚಿಕಿತ್ಸೆಯಿಲ್ಲವೆನ್ನುತ್ತಾರೆ. ಇದರ ಚಿಕಿತ್ಸೆ ಚಿನಿವಾರರು (Goldsmith) ಮಾಡುತ್ತಾರೆ. ಅವರು ಪೂಜಾ ಸಾಮಗ್ರಿಗಳನ್ನು (ಅರಿಶಿನ ಕುಂಕುಮ ಇತ್ಯಾದಿ) ತಂದು ಅದರ Solution ಮಾಡಿ ಹುಣ್ಣಿನ ಮೇಲೆ ಸರ್ಪದ ಅಥವಾ ಸಿಂಹದ ಚಿತ್ರ ಬಿಡಿಸುತ್ತಾರೆ. ನಿರಂತರ 5 ದಿನ ಚಿಕಿತ್ಸೆ ಮಾಡಿದರೆ ರೋಗ ವಾಸಿಯಾಗುತ್ತದೆ ಎನ್ನುತ್ತಾರೆ. ಮುಸ್ಲಿಮರೂ ಇದನ್ನು ಮಾಡುತ್ತಾರೆ. ಇದು ಶಿರ್ಕ್ ಆಗುತ್ತದೆಯೇ? ದಯವಿಟ್ಟು ಉತ್ತರಿಸಿರಿ.**

❍ ಯಾವ ರೋಗಕ್ಕೂ ಚಿಕಿತ್ಸೆ ಇಲ್ಲದೆ ಇಲ್ಲ. ಪ್ರವಾದಿ(ಸ) ಹೇಳಿದರು, "ಅಲ್ಲಾಹನು ರೋಗ ಮತ್ತು ಔಷಧಿ ಎರಡನ್ನೂ ತಿಳಿಸಿದ್ದಾನೆ. ಎಲ್ಲ ರೋಗಗಳಿಗೂ ಔಷಧಿ ನಿಶ್ಚಯಿಸಿದ್ದಾನೆ. ಆದ್ದರಿಂದ ನೀವು (ಹಲಾಲ್ ವಸ್ತುಗಳಿಂದ) ಚಿಕಿತ್ಸೆ ನಡೆಸಿರಿ. ಹರಾಮ್ ವಸ್ತುಗಳಿಂದ ಚಿಕಿತ್ಸೆ ಮಾಡದಿರಿ." (ಅಬೂದಾವೂದ್) ಇನ್ನೊಂದು ಹದೀಸ್‌ನಲ್ಲಿ ಪ್ರವಾದಿ(ಸ) ಹೇಳಿದರು, "ಅಲ್ಲಾಹನು ಇಳಿಸಿರುವ ಯಾವುದೇ ರೋಗಕ್ಕೂ ವಾಸಿಯನ್ನು ಇಳಿಸಿದ್ದಾನೆ." (ಬುಖಾರಿ)

ಆದ್ದರಿಂದ ಯಾವುದೇ ರೋಗವಾದರೂ ಅದಕ್ಕೆ ಸೂಕ್ತ ಚಿಕಿತ್ಸೆ ಮಾಡಬೇಕು. ಅರಿಶಿನ, ಕುಂಕುಮದಿಂದ ಚರ್ಮ ರೋಗ ವಾಸಿಯಾಗುವುದಾದರೆ ಅದರಿಂದಲೂ ಮಾಡಿಸಬಹುದು. ಏಕೆಂದರೆ ಅರಿಶಿನ ಕುಂಕುಮವೇನೂ ನಿಷಿದ್ಧ ಪದಾರ್ಥವಲ್ಲ. ಆದರೆ ಅದರಲ್ಲಿ ಮೂಢನಂಬಿಕೆ ಸೇರಿಸಿಕೊಂಡು, ಇದರಿಂದ ಈ ರೀತಿಯ ಚಿಕಿತ್ಸೆ ನಡೆಸಿದರೆ ಮಾತ್ರ ರೋಗ ವಾಸಿಯಾಗುವುದೆಂದು ನಂಬುವುದು ತಪ್ಪು. ಅಂದರೆ ಸರ್ಪದ ಚಿತ್ರ ಬಿಡಿಸುವುದು, ಸಿಂಹದ ತಲೆಯ ಚಿತ್ರ ಬಿಡಿಸುವುದು ಇತ್ಯಾದಿ. ಹಾಗೆ ಭಾವಿಸಿಕೊಂಡು ಚಿಕಿತ್ಸೆ ನಡೆಸಿದರೆ ಅದು ಶಿರ್ಕ್ ಆಗುವುದೆಂಬುದರಲ್ಲಿ ಸಂದೇಹವಿಲ್ಲ.

ಸರ್ಪ, ಸಿಂಹಗಳ ಚಿತ್ರಕ್ಕೂ ರೋಗವಾಸಿಯಾಗುವುದಕ್ಕೂ ಯಾವುದೇ ಸಂಬಂಧವಿಲ್ಲ. ರೋಗಕ್ಕೆ ಚಿಕಿತ್ಸೆಯ ಯಾವ ವಿಧಾನವನ್ನೂ ಬಳಸಬಹುದು. ಅಲೋಪತಿ, ಹೋಮಿಯೋಪತಿ, ಆಯುರ್ವೇದ, ಯುನಾನಿ–ಹೀಗೆ ವಿವಿಧ ವಿಧಾನಗಳಿವೆ. ರೋಗವನ್ನು ಗುಣಮುಖ ಮಾಡುವುದು ಅಲ್ಲಾಹನಾಗಿದ್ದಾನೆ. ಆದ್ದರಿಂದ ರೋಗಕ್ಕೆ ಚಿಕಿತ್ಸೆ ನಡೆಸಿ **(8ನೇ ಪುಟಕ್ಕೆ)**

# ಕಸ್ರ್ ಮಾಡಬಹುದೇ?

**◆ ಎಂ.ಎಂ. ಮಕಾನದಾರ, ಗದಗ**

**● ನಾನು ವೃತ್ತಿಯಿಂದ ಶಿಕ್ಷಕನಿದ್ದು ದಿನನಿತ್ಯ ನನಗೆ 65 ಕಿ.ಮೀ. ದೂರದ ಸ್ಥಳಕ್ಕೆ ಹೋಗಿ ಬರಬೇಕಾಗುತ್ತದೆ. ನಾನು ನಮಾಝ್‌ಗಳನ್ನು ಕಸ್ರ್ ಮತ್ತು ಜಮ್‌ಅ್ (2 ನಮಾಝ್‌ಗಳನ್ನು ಕೂಡಿ) ಮಾಡಬಹುದೇ?**

❍ ಪ್ರಯಾಣದಲ್ಲಿ ಕಸ್ರ್ ಮಾಡುವುದಾದರೆ ಅದರ ದೂರವೆಷ್ಟು ಎಂಬುದನ್ನು ಕುರ್‌ಆನ್‌ನಲ್ಲಿ ಅಥವಾ ಹದೀಸ್‌ನಲ್ಲಿ ನಿಖರವಾಗಿ ಹೇಳಲಾಗಿಲ್ಲ. ಪ್ರವಾದಿ(ಸ) ಪ್ರಯಾಣದಲ್ಲಿ ಕಸ್ರ್ ಮಾಡಿದ್ದಾರೆಂದಷ್ಟೇ ಸಾಬೀತಾಗಿದೆ. ಯಾವ ಪ್ರಯಾಣದ ವೇಳೆಯೂ ಪ್ರವಾದಿಯವರು(ಸ) ಇಂತಿಷ್ಟು ದೂರದ ವರೆಗೆ ಕಸ್ರ್ ಮಾಡುವಂತಿಲ್ಲವೆಂದು ಹೇಳಿಲ್ಲ. ಅಂದರೆ ಕಸ್ರ್ ಮಾಡಲು ಕನಿಷ್ಠ ದೂರವೆಷ್ಟೆಂದು ಕೂಡಾ ಹೇಳಿಲ್ಲ. ಸಹಾಬಿಗಳ ಮಧ್ಯೆಯೂ ಕಸ್ರ್‌ನ ಕುರಿತು ಏಕಾಭಿಪ್ರಾಯವಿಲ್ಲ. ಪ್ರವಾದಿವರ್ಯರ(ಸ) ವಿವಿಧ ಪ್ರಯಾಣಗಳನ್ನು ಮುಂದಿರಿಸಿ ಸಹಾಬಿಗಳು ಕಸ್ರ್‌ನ ದೂರವನ್ನು ಅಂದಾಜಿಸಿದ್ದಾರೆ.

ಅನಸ್(ರ) 15 ಮೈಲುಗಳ ಪ್ರಯಾಣದಲ್ಲಿ ಕಸ್ರ್ ಮಾಡುತ್ತಿದ್ದರೆಂದು ವರದಿಯಿದೆ. ಅಲೀಯವರು(ರ) ನಖ್ಲಿಸ್ತಾನ್‌ಗೆ ಹೋಗಿ ಜನರಿಗೆ ಝೊಹರ್‌ನ ಎರಡು ರಕಅತ್ ನಮಾಝ್ ಮಾಡಿಸಿದ್ದು ಅಂದೇ ಮದೀನಕ್ಕೆ ಮರಳಿದರೆಂದು ವರದಿಯಾಗಿದೆ. ಜಾಬಿರ್(ರ) ಹೇಳುತ್ತಾರೆ, "ನಾನು ಮಕ್ಕಾದಿಂದ ಅರಫಾತ್‌ಗೆ ಹೋಗಿ ಕಸ್ರ್ ಮಾಡುತ್ತೇನೆ." (ಮುಅಲಿಮುಸ್ಸುನನ್)

ಇಬ್ನು ಅಬ್ಬಾಸ್ ಮತ್ತು ಇಬ್ನು ಉಮರ್(ರ) 48 ಮೈಲುಗಳ ಪ್ರಯಾಣದಲ್ಲಿ ಕಸ್ರ್ ಮಾಡುತ್ತಿದ್ದರು ಮತ್ತು ಉಪವಾಸ ಆಚರಿಸುತ್ತಿರಲಿಲ್ಲ. (ಬುಖಾರಿ)

ಈ ಬಗ್ಗೆ ಕರ್ಮಶಾಸ್ತ್ರ ವಿದ್ವಾಂಸರಲ್ಲಿ ವಿಭಿನ್ನ ಅಭಿಪ್ರಾಯಗಳಿವೆ.

ಶಾಫಿಈ, ಮಾಲಿಕೀ ಮತ್ತು ಹಂಬಲಿಗಳ ಪ್ರಕಾರ 48 ಮೈಲು ಅಥವಾ ಒಂದು ರಾತ್ರಿ ಹಗಲು ಮಾಡುವ ಪ್ರಯಾಣದಲ್ಲಿ ಕಸ್ರ್ ಮಾಡಬಹುದು.

ಹನಫಿಗಳ ಪ್ರಕಾರ, ನಡೆದುಕೊಂಡು ಅಥವಾ ಒಂಟೆಯಲ್ಲಿ ಪ್ರಯಾಣಕ್ಕೆ ಮೂರು ದಿವಸ ತಗಲುವಷ್ಟು ದೂರಕ್ಕೆ ಕಸ್ರ್ ಮಾಡಬೇಕು. ಅದು 54 ಮೈಲುಗಳಾಗುತ್ತದೆ.

ಇನ್ನು ಝಾಹಿರಿಯ್ಯ ವಿಭಾಗದವರು ಯಾವುದೇ ಪ್ರಯಾಣದಲ್ಲಿ ಅದು ಎಷ್ಟೇ ಚಿಕ್ಕದಾಗಿರಲಿ ಕಸ್ರ್ ಮಾಡಬಹುದೆನ್ನುತ್ತಾರೆ. (ಇಬ್ನು ಕಯ್ಯಿಮ್‌ರವರು ಝಾದುಲ್‌ಮಆದ್‌ನಲ್ಲಿ ಇದನ್ನೇ ಪ್ರತಿಪಾದಿಸಿದ್ದಾರೆ)

ಒಟ್ಟಿನಲ್ಲಿ ಮೇಲಿನ ಎಲ್ಲ ಪ್ರಸ್ತಾವನೆಗಳನ್ನು ಮುಂದಿಟ್ಟು, ಪರಿಸ್ಥಿತಿಯನ್ನು ಪರಿಗಣಿಸಿ ನೀವು ನಮಾಝನ್ನು ಕಸ್ರ್ ಮಾಡಬಹುದಾಗಿದೆ. ಕಸ್ರ್ ಕೇವಲ ಮೂರು ನಮಾಝ್‌ಗಳನ್ನು ಮಾಡಬೇಕು. ಝೊಹರ್, ಅಸರ್ ಹಾಗೂ ಇಶಾ.

ಇನ್ನು ಜಮ್‌ಅ್ ಮಾಡುವ ಕುರಿತು ಹೇಳುವುದಾದರೆ ಝೊಹರ್ ಮತ್ತು ಅಸ್ರನ್ನು ಝೊಹರ್‌ನ ಸಮಯದಲ್ಲಿ ಕಸ್ರ್ ಮಾಡಿ (ಅಂದರೆ ಎರಡು ಝೊಹರ್, ಎರಡು ಅಸರ್) ಅಥವಾ ಅಸ್ರ್‌ನ ಸಮಯದಲ್ಲಿ ನಿರ್ವಹಿಸಬಹುದಾಗಿದೆ. ಅದೇ ರೀತಿ ಮಗ್ರಿಬ್ ಮತ್ತು ಇಶಾವನ್ನು ಮಗ್ರಿಬ್‌ನ ಸಮಯದಲ್ಲಿ ಅಥವಾ ಇಶಾದ ಸಮಯದಲ್ಲಿ ನಿರ್ವಹಿಸಬಹುದು. ಆದರೆ ಅದರಲ್ಲಿ ಮಗ್ರಿಬ್ ನಮಾಝ್‌ಗೆ ಕಡಿತವಿಲ್ಲ. ಮೂರು ರಕಅತನ್ನೇ ನಿರ್ವಹಿಸಬೇಕು.

# ಇದ್ದತ್‌ನ ಅವಧಿ

**ಆಯಿಶಾ ಕಾಸರಗೋಡು**

**● ತಲಾಕ್ ಆದ ನಂತರ ಮಹಿಳೆ ಎಷ್ಟು ತಿಂಗಳು ಇದ್ದಃ ಆಚರಿಸಬೇಕು? ಉತ್ತರಿಸಿ.**

❍ ತಲಾಕ್ ಆದ ನಂತರ ಮಹಿಳೆ ಮೂರು ಆರ್ತವ ಕಾಲದ ವರೆಗೆ ಇದ್ದತ್ ಆಚರಿಸಬೇಕು. ಪವಿತ್ರ ಕುರ್‌ಆನ್ ಹೇಳುತ್ತದೆ, "ತಲಾಕ್ ಕೊಡಲ್ಪಟ್ಟ ಸ್ತ್ರೀಯರು ಮೂರುಬಾರಿ ಮುಟ್ಟಾಗುವ ತನಕ ತಮ್ಮನ್ನು ತಡೆದಿರಿಸಿಕೊಳ್ಳಬೇಕು." (2: 228)

ಇದು ಸಾಮಾನ್ಯ ಸ್ತ್ರೀಯರಿಗೆ ಅಂದರೆ ತಿಂಗಳಲ್ಲಿ ಸರಿಯಾಗಿ ಮುಟ್ಟಾಗುವ ಸ್ತ್ರೀಯರಿಗೆ ಅನ್ವಯಿಸುವ ನಿಯಮವಾಗಿದೆ.

ಆದರೆ ಇನ್ನೂ ಋತಿಮತಿಯಾಗದ ಅಪ್ರಾಪ್ತ ಹುಡುಗಿಯರು ಅಥವಾ ಪ್ರಾಯಾಧಿಕ್ಯದಿಂದ ಋತುಸ್ರಾವ ನಿಂತು ಬಿಟ್ಟವರಿಗೆ ತಲಾಕ್ ನೀಡಲ್ಪಟ್ಟರೆ ಅವರ ಇದ್ದತ್ ಮೂರು ತಿಂಗಳುಗಳಾಗಿವೆ.

"ನಿಮ್ಮ ಸ್ತ್ರೀಯರ ಪೈಕಿ ಋತುಸ್ರಾವದ ಬಗ್ಗೆ ನಿರಾಶರಾದವರ ಕುರಿತು ನಿಮಗೇನಾದರೂ ಸಂಶಯ ಬಂದರೆ, ಅವರ ಇದ್ದತ್‌ನ ಅವಧಿಯು ಮೂರು ತಿಂಗಳಾಗಿದೆ. ಅದೇ ರೀತಿ ಇನ್ನೂ ಋತುಮತಿಯಾಗದವರಿಗೂ ಇದೇ ನಿಯಮವಿದೆ." (65:4)

ಕೆಲವೊಮ್ಮೆ ಸ್ತ್ರೀಯರಿಗೆ ಬಹಳ ತಡವಾಗಿ ಋತುಸ್ರಾವ ಆರಂಭವಾಗುತ್ತದೆ. ಇನ್ನು ಕೆಲವರಿಗೆ ಜೀವನ ಪರ್ಯಂತ ಋತುಸ್ರಾವ ಆಗದೆ ಇರಬಹುದು. ಈ ಎಲ್ಲಾ ಅವಸ್ಥೆಯಲ್ಲಿಯೂ ಅವರ ಇದ್ದತ್‌ನ ಅವಧಿಯು "ಋತುಸ್ರಾವದ ಬಗ್ಗೆ ನಿರಾಶರಾದವರ" ಇದ್ದತ್‌ನ ಅವಧಿಯೇ ಆಗಿದೆ. ಅಂದರೆ ಮೂರು ಚಾಂದ್ರಮಾನ ತಿಂಗಳು.

ಅದೇ ರೀತಿ ಗರ್ಭಿಣಿ ಸ್ತ್ರೀಯರ ತಲಾಕ್ ವಿಷಯವೂ ಭಿನ್ನವಾಗಿದೆ. ಗರ್ಭಿಣಿಯರ ಇದ್ದತ್ ಹೆರಿಗೆಯಾಗುವ ವರೆಗಿದೆ. ಇದು ಪತಿ ಮರಣ ಹೊಂದಿರುವ ಸ್ತ್ರೀಯರಿಗೂ ಅನ್ವಯವಾಗುತ್ತದೆ.

"ಗರ್ಭಿಣಿಯ ಇದ್ದತಿನ ಅವಧಿಯು ಅವರ ಪ್ರಸವದ ವರೆಗಿದೆ." (65:4) ಗರ್ಭಿಣಿ ಸ್ತ್ರೀಗೆ ಆಕೆಯ ಗರ್ಭದ ಆರಂಭ ಘಟ್ಟದಲ್ಲಿ ಪತಿ ತಲಾಕ್ ಕೊಟ್ಟರೆ ಅಥವಾ ಆಕೆಯ ಪತಿ ಮರಣ ಹೊಂದಿದರೆ ಅವಳ ಇದ್ದತ್ ಆಕೆಯ ಹೆರಿಗೆಯ ವರೆಗೂ ಮುಂದುವರಿಯುತ್ತದೆ. ಅಂದರೆ ಸುಮಾರು 9 ತಿಂಗಳುಗಳ ವರೆಗೆ ಮುಂದುವರಿಯುತ್ತದೆ. ಇನ್ನು ಗರ್ಭದ ಕೊನೆಯ ಹಂತದಲ್ಲಿ ಅಂದರೆ ಹೆರಿಗೆಯಾಗುವುದಕ್ಕಿಂತ ಕೆಲವೇ ಕ್ಷಣಗಳ ಮುಂಚೆ ಪತಿ ತಲಾಕ್ ಕೊಟ್ಟರೆ ಅಥವಾ ಪತಿ ಮರಣ ಹೊಂದಿದರೆ ಆಗಲೂ ಹೆರಿಗೆಯಾದ ಕೂಡಲೇ ಆಕೆಯ ಇದ್ದತ್ ಕೊನೆಗೊಳ್ಳುತ್ತದೆ. ಒಟ್ಟಿನಲ್ಲಿ ಪ್ರಶ್ನೆಯಲ್ಲಿ ಪ್ರಸ್ತಾಪಿಸಿರುವಂತೆ, ತಲಾಕ್ ಆದ ಮಹಿಳೆ ಗರ್ಭಿಣಿಯಾಗಿದ್ದರೆ, ಆಕೆಯ ಇದ್ದತ್ ಹೆರಿಗೆಯ ವರೆಗಿರುವುದು.

## ಕುರ್‌ಆನ್ ಅಧ್ಯಯನ 508

## ಅಧ್ಯಾಯ: 4 ಅನ್ನಿಸಾ

**(ವಚನ 59ರ ಟಿಪ್ಪಣಿಯ ಉಳಿದ ಭಾಗ)**

'ನಿಮಗೆ ಯಾವುದಾದರೂ ವಿಷಯದಲ್ಲಿ ಭಿನ್ನಾಪ್ರಾಯವುಂಟಾದರೆ ಅದನ್ನು ಅಲ್ಲಾಹ್ ಮತ್ತು ಪ್ರವಾದಿಯತ್ತ ಮರಳಿಸಿರಿ' ಎಂಬ ವಚನದಲ್ಲಿ ಮೂರು ಅಂಶಗಳಿವೆ. 1. ಅಲ್ಲಾಹ್ ಮತ್ತು ಪ್ರವಾದಿಯ ಆಜ್ಞೆಗಳ ವಿಷಯದಲ್ಲಿ ಭಿನ್ನಮತಕ್ಕೆ ಅಸ್ಪದವಿಲ್ಲ. ಅದರ ಯುಕ್ತಿ ಮತ್ತು ಔಚಿತ್ಯವು ನಿಮಗೆ ಮನವರಿಕೆಯಾದರೂ ಆಗದಿದ್ದರೂ ಅನುಸರಿಸಲೇಬೇಕು. 2. ಅಲ್ಲಾಹ್ ಮತ್ತು ಪ್ರವಾದಿಯ ಸುಸ್ಪಷ್ಟ ಶಾಸನವಿಲ್ಲದ ವಿಷಯಗಳಲ್ಲಿ ಉಲುಲ್ ಅಮ್ರ್‌ನ್ನು ಅನುಸರಿಸಬೇಕು. ಸುಸ್ಪಷ್ಟ ಶಾಸನವಿರುವ ವಿಷಯಗಳಲ್ಲಿ ನೇರವಾಗಿ ಅಲ್ಲಾಹ್ ಮತ್ತು ಪ್ರವಾದಿಯವರನ್ನೇ ಅನುಸರಿಸಬೇಕು. 3. ಉಲುಲ್ ಅಮ್ರ್ ವ್ಯವಹರಿಸುವ ವಿಷಯಗಳಲ್ಲಿ ಅವರ ಮಧ್ಯೆಯೂ, ಅವರು ಮತ್ತು ಜನರ ಮಧ್ಯೆಯೂ ಪರಸ್ಪರ ಭಿನ್ನಾಭಿಪ್ರಾಯ ಮತ್ತು ವಿವಾದವಿರಬಹುದು. 'ತನಾಝಉ ಫಿಲ್ ಅಮ್ರಿ' ಎಂದರೆ ವಿಷಯದ ಬಗ್ಗೆ ತರ್ಕಿಸು, ಭಿನ್ನಿಸು ಎಂದರ್ಥ. ಧಾರ್ಮಿಕ ಮತ್ತು ನೈತಿಕ ವಿಷಯಗಳಲ್ಲಿರುವ ಭಿನ್ನತೆಯೇ ಇಲ್ಲಿ ಉದ್ದೇಶವಾಗಿದೆ. ಭೌತಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರವನ್ನು ಅವುಗಳ ಅಧಿಕೃತ ವಿದ್ವಾಂಸರು ಮತ್ತು ಆಧಾರಗಳಿಂದಲೇ ಕಂಡು ಹಿಡಿಯಬೇಕು.

ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ಸ್ಪಷ್ಟವಾಗಿ ಪ್ರಸ್ತಾವಿಸಿಲ್ಲದ ವಿಷಯಗಳ ಬಗೆಗಿನ ವಿವಾದವನ್ನು ಅಲ್ಲಾಹ್ ಮತ್ತು ಪ್ರವಾದಿಯತ್ತ ಮರಳಿಸುವ ರೂಪ ಹೀಗಿದೆ: ವಿವಾದಾಸ್ಪದ ವಿಷಯಕ್ಕೆ ಸಮಾನವಾದ ಅಥವಾ ತುಲನಾತ್ಮಕವಾಗಿ ತತ್ವ, ವ್ಯವಹಾರ ಮತ್ತು ಪರಿಣಾಮಗಳಲ್ಲಿ ಕುರ್‌ಆನ್ ಮತ್ತು ಸುನ್ನತ್‌ನ ತೀರ್ಪುಗಳಿಗೆ ಸಂಬಂಧಿಸಿದ ತೀರ್ಪುಗಳನ್ನು ವಿವಾದಾಸ್ಪದ ವಿಷಯಗಳಲ್ಲಿಯೂ ಸ್ವೀಕರಿಸಬೇಕು. ಉದಾ: ಮದ್ಯದ ಕುರಿತು ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯಲ್ಲಿ ಸ್ಪಷ್ಟ ನಿಯಮಗಳಿವೆ. ಆದರೆ ಮಾದಕ ಔಷಧಗಳ ಬಗ್ಗೆ ಪ್ರಸ್ತಾಪವಿಲ್ಲ. ಆದರೆ ಮದ್ಯ ನಿಷೇಧದ ಕಾರಣಗಳು ಸಂಪೂರ್ಣವಾಗಿ ಮಾದಕ ಔಷಧ ನಿಷೇಧದಲ್ಲಿಯೂ ಇರುವುದರಿಂದ ಅವು ಕೂಡಾ ನಿಷಿದ್ಧವೆಂದು ಸ್ಪಷ್ಟವಾಗುತ್ತದೆ. ಈ ರೀತಿಯ ಧೋರಣೆಗಳಿಂದ ವಿಶ್ವಾಸಿಗಳು ತಮ್ಮ ನೈಜ ನೀತಿಯನ್ನು ಕಂಡುಕೊಳ್ಳುತ್ತಾರೆ. ಮೂಲದಲ್ಲಿ 'ದಾಲಿಕ ಖೈರುನ್' ಎನ್ನಲಾಗಿದೆ. 'ಖೈರುನ್' ಎಂಬ ಪದಕ್ಕೆ ಒಳಿತು, ನೀತಿ, ಹಿತ, ಪುಣ್ಯ ಇತ್ಯಾದಿ ಅರ್ಥಗಳಿವೆ. ಆ ರೀತಿ ಮಾಡುವುದೇ ಹಿತಕರ ಅಥವಾ ಪುಣ್ಯದಾಯಕವೆಂದೂ ಇಲ್ಲಿ ಅರ್ಥೈಸಬಹುದಾಗಿದೆ.

'ವ ಅಹ್‌ಸನು ತಅ್‌ವೀಲಾ' ಎಂಬ ಪದವನ್ನು 'ವ್ಯಾಖ್ಯಾನದಿಂದ ಅತ್ಯುತ್ತಮ' ಎಂದೂ ಅನುವಾದಿಸಬಹುದು. ಅವಲ್ ಪದವು 'ತಅ್‌ವೀಲಾದ' ಮೂಲವಾಗಿದೆ.



ಅವ್‌ಲ್ ಎಂದರೆ ಮರಳಿಕೆ ಎಂದರ್ಥ. ಒಂದು ವಿಷಯವು ಅದರ ಗುರಿ ತಲುಪುವುದು, ಯಥಾಸ್ಥಾನಕ್ಕೆ ತಲುಪುವುದು ಎಂಬರ್ಥದಲ್ಲಿ 'ತಅ್‌ವೀಲಾ' ಬಳಸಲಾಗುತ್ತದೆ. ಕನಸುಗಳ ವ್ಯಾಖ್ಯಾನಕ್ಕೂ ವಚನಗಳನ್ನು ವಿಶ್ಲೇಷಿಸಿ ಅರ್ಥ ಕಂಡುಹಿಡಿಯುವುದಕ್ಕೂ 'ತಅ್‌ವೀಲಾ' ಎನ್ನಲಾಗುತ್ತದೆ. ಈ ಆಧಾರದಲ್ಲಿ ವ್ಯಾಖ್ಯಾನವೆಂಬ ಅರ್ಥದಲ್ಲಿಯೂ ಈ ಪದವನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ವಿವಾದ ವಿಷಯಗಳ ತೀರ್ಮಾನಕ್ಕೆ ದಿವ್ಯವಚನ ಮತ್ತು ಪ್ರವಾದಿಚರ್ಯೆಯನ್ನು ಅವಲಂಬಿಸಬೇಕು. ಅದುವೇ ವಿಷಯಗಳ ವಾಸ್ತವಿಕತೆಯನ್ನು ಗುರುತಿಸಿ ವಿಶಿಷ್ಟ ಫಲಿತಾಂಶ ಪಡೆಯುವುದಕ್ಕೆ ಸೂಕ್ತ ಮಾರ್ಗವಾಗಿದೆಯೆಂಬುದು ಇಲ್ಲಿ 'ವಅಹ್‌ಸನು ತಅ್‌ವೀಲಾ' ಎಂಬ ಮಾತಿನ ಉದ್ದೇಶವಾಗಿದೆ.

ಈ ವಚನವು ಇಸ್ಲಾಮಿ ಸಾಮಾಜಿಕ ವ್ಯವಸ್ಥೆಯ ರಚನೆಗೆ ಪ್ರಥಮ ಮತ್ತು ಪ್ರಧಾನವಾದ ಮೂಲ ತತ್ವವನ್ನು ಸಮರ್ಪಿಸಿದೆ. ಒಂದು ಶಾಸಕಾಂಗದ ಅಥವಾ ಅನುಸರಣಾ ಸಂಸ್ಥೆಯಿಲ್ಲದೆ ಯಾವುದೇ ರೀತಿಯ ಸಾಮಾಜಿಕ, ರಾಜಕೀಯ ವ್ಯವಸ್ಥೆಯೂ ಸ್ಥಾಪನೆಯಾಲಾರದು. ಇಸ್ಲಾಮಿ ವ್ಯವಸ್ಥೆಯಲ್ಲಿ ಶಾಸನ ಕೇಂದ್ರದ 3 ಘಟಕಗಳಿವೆ: ಅಲ್ಲಾಹ್, ಪ್ರವಾದಿ, ಉಲುಲ್ ಅಮ್ರ್. ಆರಂಭದ ಎರಡು ಘಟಕಗಳು ಸ್ಥಿರ ಮತ್ತು ಸ್ವತಂತ್ರವಾಗಿವೆ. ಸಮಾಜವು ಅವುಗಳನ್ನು ಎಲ್ಲ ಪರಿಸ್ಥಿತಿಗಳಲ್ಲಿಯೂ ಅನಿವಾರ್ಯವಾಗಿ ಅನುಸರಿಸಬೇಕು. ಮೂರನೆಯದ್ದು, ತಾತ್ಕಾಲಿಕ ಮತ್ತು ಶರ್ತಬದ್ಧವಾಗಿದೆ. ಪ್ರತಿಯೊಂದು ಕಾಲ ಮತ್ತು ದೇಶದಲ್ಲಿ ಆಸ್ತಿತ್ವಕ್ಕೆ ಬರುವ ಉಲುಲ್ ಅಮ್ರ್‌ಗಳು ಆಯಾ ಕಾಲ ಮತ್ತು ದೇಶದವರ ಅನುಸರಣೆಗೆ ಅರ್ಹರಾಗಿರುತ್ತಾರೆ. ಅವರಿಗೆ ಅಲ್ಲಾಹ್ ಮತ್ತು ಪ್ರವಾದಿಯ ಕಾನೂನುಗಳಿಗೆ ಬದ್ಧವಾದ ಕಾನೂನುಗಳನ್ನು ಮಾತ್ರ ನೀಡುವ ಅಧಿಕಾರವಿರುತ್ತದೆ.

ಇಸ್ಲಾಮಿ ವಿದ್ವಾಂಸರು ಈ ವಚನದಿಂದ ಶರೀಅತ್‌ನ 4 ರೀತಿಯ ಶಾಸ್ತ್ರಗಳನ್ನು ನಿರ್ಣಯಿಸಿದ್ದಾರೆ. ಕುರ್‌ಆನ್, ಸುನ್ನತ್, ಇಜ್ಮಾಅ್ ಮತ್ತು ಕಿಯಾಸ್. ಪ್ರವಾದಿಯ ನಡವಳಿಕೆಯು ಸುನ್ನತ್. ಪ್ರವಾದಿಯವರ(ಸ) ನಡವಳಿಕೆಗಳಲ್ಲಿ ಅವರ ಮಾತು, ಕೃತಿ, ಸಮ್ಮತಿ ಸೇರಿವೆ. ಕುರ್‌ಆನ್ ಮತ್ತು ಸುನ್ನತ್ ಪ್ರಸ್ತಾವಿಸಿಲ್ಲದ ವಿಷಯಗಳಲ್ಲಿ ಅವೆರಡರ ಆಧಾರದಲ್ಲಿ 'ಅಹ್ಲುಲ್ ಹಲ್ಲ್ ವಲ್ ಉಕ್ದ್' ಸರ್ವಾನುಮತದಿಂದ ಅಂಗೀಕರಿಸುವ ತೀರ್ಪುಗಳೇ ಇಜ್‌ಮಾಅ್, ಕಿಯಾಸ್ ಅಂದರೆ, ವಿವಾದ ಮತ್ತು ಸಂದೇಹಾಸ್ಪದ ವಿಷಯಗಳಲ್ಲಿ ಶರಈ ವಿದ್ವಾಂಸರು ಕುರ್‌ಆನ್ ಮತ್ತು ಸುನ್ನತ್‌ನ ಸಾಮಾನ್ಯ ತತ್ವಗಳ ಆಧಾರದಲ್ಲಿ ಸಂಶೋಧನೆ ನಡೆಸಿ ಕಾನೂನುಗಳನ್ನು ರಚಿಸುವುದಾಗಿದೆ. ಇಸ್ತಿಹ್‌ಸಾನ್, ಮುಸಾಲಹುಲ್ ಮುರ್ಸಲ, ಇಸ್ತಿಸ್‌ಹಾಬ್ ಮುಂತಾದ ಇತರ ರೀತಿ ಶಾಸ್ತ್ರಗಳು ವಾಸ್ತವದಲ್ಲಿ ಮೇಲೆ ಹೇಳಿದ 4 ಶಾಸ್ತ್ರಗಳ ವಿಶಾಲಾರ್ಥದಲ್ಲಿ ಸೇರಿವೆ.

### ಕೇಳಿದಿರಾ? ಕೇಳಿ (7ನೇ ಪುಟದಿಂದ)

**ಅದು ವಾಸಿಯಾಗುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಬೇಕು.**

**ಜಾಬಿರ್(ರ) ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು, "ಪ್ರತಿಯೊಂದು ರೋಗಕ್ಕೂ ಔಷಧಿಯಿದೆ. ಔಷಧಿ ತಗಲಿದರೆ ಅಲ್ಲಾಹನ ಅನುಜ್ಞೆ ಪ್ರಕಾರ ಅದು ವಾಸಿಯಾಗುತ್ತದೆ." (ಮುಸ್ಲಿಮ್) ಆದ್ದರಿಂದ ಯಾವುದೇ ರೋಗಕ್ಕೆ ಚಿಕಿತ್ಸೆ ಮಾಡಲೇ ಬೇಕು.**

**'ಸರ್ಪದ ಹುಣ್ಣು' ಎಂಬುದಕ್ಕೆ ನಮ್ಮ ಕಡೆಯಲ್ಲಿ 'ಸರ್ಪಸುತ್ತು' ಎಂದು ಹೇಳುತ್ತಾರೆ. ಅದು ಸುತ್ತುವರಿದು ಪೂರ್ಣಗೊಂಡರೆ ರೋಗಿ ಸಾಯುತ್ತಾನೆಂಬ ನಂಬಿಕೆಯೂ ಇದೆ. ನಮ್ಮಲ್ಲೂ ಅಂತಹದ್ದೆಲ್ಲ ಮೂಢನಂಬಿಕೆಗಳು ಚಾಲ್ತಿಯಲ್ಲಿದೆ. ಮುಸ್ಲಿಮರೂ ಅದರಲ್ಲಿ ಮುಂದೆ ಇದ್ದಾರೆ. ಆದರೆ ರೋಗಕ್ಕೆ ಚಿಕಿತ್ಸೆ ಮಾಡುವುದನ್ನು ಬಿಟ್ಟು ಚಿತ್ರ ಬಿಡಿಸುವುದು, ತಾಯಿತ ಕಟ್ಟುವುದು, ಮಂತ್ರಿಸಿ ಊದುವುದು, ನೂಲು ಕಟ್ಟುವುದು ಇತ್ಯಾದಿಗಳಿಂದ ರೋಗ ಗುಣವಾಗುವುದೆಂಬ ನಂಬಿಕೆಯು ಶಿರ್ಕ್ ಆಗಿದೆ.**

## ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

### ಪಾದರಕ್ಷೆ ತೊಟ್ಟುಕೊಂಡು ನಮಾಝ್

**246.** ಅನಸ್(ರ)ರೊಂದಿಗೆ, ಪ್ರವಾದಿವರ್ಯರು ಪಾದರಕ್ಷೆ ತೊಟ್ಟುಕೊಂಡು ನಮಾಝ್ ಮಾಡುತ್ತಿದ್ದರೇ ಎಂದು ಕೇಳಲಾಯಿತು. ಅವರು ಹೌದೆಂದು ಉತ್ತರಿಸಿದರು.

**247.** ಜರೀರ್ ಬಿನ್ ಅಬ್ದುಲ್ಲಾ(ರ) ಮೂತ್ರ ಹೊಯ್ದ ನಂತರ ವುಝೂ ಮಾಡಿದರು. ಕಾಲ್ಚೀಲಗಳನ್ನು ಸವರಿದರು. ತರುವಾಯ ನಿಂತುಕೊಂಡು ಎರಡು ರಕಅತ್ ನಮಾಝ್ ನಿರ್ವಹಿಸಿದರು. ಅವರೊಂದಿಗೆ ಕೇಳಲಾದಾಗ, "ಪ್ರವಾದಿವರ್ಯರು ಹೀಗೆಯೇ ಮಾಡುವುದನ್ನು ನಾನು ಕಂಡಿದ್ದೇನೆ" ಎಂದರು. ಜನರಿಗೆ ಆಶ್ಚರ್ಯವಾಯಿತು. ಏಕೆಂದರೆ ಜರೀರ್ ಹಿಂಗಾಮಿಗಳಲ್ಲಾಗಿದ್ದರು.

**248.** ಅಬ್ದುಲ್ಲಾ ಬಿನ್ ಬಹೀನ(ರ) ಹೇಳುತ್ತಾರೆ- ಪ್ರವಾದಿ(ಸ) ನಮಾಝ್ ಮಾಡುತ್ತಿರುವಾಗ ತಮ್ಮ ಎರಡೂ ಕೈಗಳನ್ನು ವಿಶಾಲವಾಗಿಡುತ್ತಿದ್ದರು. ಅದರಿಂದ ಅವರು ಕಂಕುಳ ಕಾಣುತ್ತಿತ್ತು.

### ಕಿಬ್ಲಾಭಿಮುಖವಾಗುವುದು

**249.** ಅನಸ್ ಬಿನ್ ಮಾಲಿಕ್ ಹೇಳುತ್ತಾರೆ: ಪ್ರವಾದಿ(ಸ) ಹೇಳಿದರು, "ಯಾರು ನಮ್ಮಂತೆ ನಮಾಝ್ ಮಾಡುತ್ತಾನೋ, ನಮ್ಮ ಕಿಬ್ಲಾದತ್ತ ಮುಖ ಮಾಡಿದನೋ, ನಾವು ದಿಬಹ್ ಮಾಡಿದುದನ್ನು ತಿನ್ನುತ್ತಾನೋ ಅವನು ಮುಸ್ಲಿಮ್ ಆಗಿದ್ದಾನೆ. ಅವನಿಗೆ ಅಲ್ಲಾಹ್ ಮತ್ತು ರಸೂಲರ ಹೊಣೆಯಿದೆ (ಆಶ್ರಯವಿದೆ). ಆದ್ದರಿಂದ ನೀವು ಅಲ್ಲಾಹನ ಆಶ್ರಯವನ್ನು (ಹೊಣೆಯನ್ನು) ಮುರಿಯದಿರಿ.

**250.** ಇಬ್ನು ಉಮರ್(ರ)ರೊಂದಿಗೆ ಕೇಳಲಾಯಿತು. ಒಬ್ಬ ವ್ಯಕ್ತಿ ಉಮ್ರಾದ ತವಾಫ್ ಮಾಡಿದನು. ಆದರೆ ಸಫಾ-ಮರ್ವಾದ ಮಧ್ಯೆ ಸಈ ಮಾಡಲಿಲ್ಲ. ಅವನು ತನ್ನ ಪತ್ನಿಯನ್ನು ಸಮೀಪಿಸಬಲ್ಲನೇ?" ಅವರು ಹೇಳಿದರು, "ಪ್ರವಾದಿ(ಸ) ಒಮ್ಮೆ ಬಂದರು. ಏಳು ಬಾರಿ ಕಅಬಾ ಪ್ರದಕ್ಷಿಣೆ ಮಾಡಿದರು. ಮಕಾಮು ಇಬ್ರಾಹೀಮ್‌ನ ಹಿಂದೆ ಎರಡು ರಕಅತ್ ನಮಾಝ್ ನಿರ್ವಹಿಸಿದರು. ಸಫಾ-ಮರ್ವಾಗಳ ಮಧ್ಯೆ ಸಈ ಮಾಡಿದರು. ನಿಮಗೆ ಪ್ರವಾದಿವರ್ಯರ ಅನುಕರಣೆಯಲ್ಲಿ ಅತ್ಯುತ್ತಮ ಮಾರ್ಗ ದರ್ಶನವಿದೆ."

**251.** ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಪ್ರವಾದಿ(ಸ) ಕಅಬಾ ಭವನವನ್ನು ಪ್ರವೇಶಿಸಿ ಅದರ ಎಲ್ಲ ಮೂಲೆಗಳಲ್ಲೂ ಪ್ರಾರ್ಥಿಸಿದರು. ಆದರೆ ನಮಾಝ್ ಮಾಡಲಿಲ್ಲ. ಹೊರಗೆ ಬಂದಾಗ ಕಅಬಾದತ್ತ ತಿರುಗಿ ಎರಡು ರಕಅತ್ ನಮಾಝ್ ಮಾಡಿದರು ಮತ್ತು ಇದುವೇ ಕಿಬ್ಲಾ ಎಂದರು.

**252.** ಬರಾರ್(ರ) ಹೇಳುತ್ತಾರೆ- ಪ್ರವಾದಿ(ಸ) **16-17** ವರ್ಷಗಳ ಕಾಲ ಬೈತುಲ್ ಮಕ್ದಿಸ್‌ನತ್ತ(ಮುಖಮಾಡಿ) ನಮಾಝ್ ಮಾಡಿದ್ದರು. ಈ ಹದೀಸ್ ಹಿಂದೆಯೂ ಉಲ್ಲೇಖಿಸಲ್ಪಟ್ಟಿದೆ. ಎರಡರಲ್ಲೂ ಕೇವಲ ಪದಗಳ ವ್ಯತ್ಯಾಸವಿದೆ.

**253.** ಜಾಬೀರ್(ರ) ಹೇಳುತ್ತಾರೆ- ಪ್ರವಾದಿ(ಸ) ವಾಹನದ ಮೇಲೆ ಕುಳಿತು ನಮಾಝ್ ಮಾಡುತ್ತಿದ್ದರು. ವಾಹನವು ಎತ್ತ ಮುಖ ಮಾಡಿದ್ದರೂ ಸರಿ. ಆದರೆ ಫರ್ಝ್ ನಮಾಝ್ ಮಾಡ ಬಯಸಿದರೆ ವಾಹನದಿಂದ ಕೆಳಗಿಳಿದು ಬಂದು ಕಿಬ್ಲಾದತ್ತ ಮುಖ ಮಾಡುತ್ತಿದ್ದರು.

**254.** ಅಬ್ದುಲ್ಲಾ ಬಿನ್ ಮಸ್‌ಊದ್(ಸ) ಹೇಳುತ್ತಾರೆ: ಪ್ರವಾದಿ(ಸ) ಒಮ್ಮೆ ನಮಾಝ್ ಮಾಡಿಸಿದರು. ಸಲಾಮ್ ಹೇಳಿದ ನಂತರ ಅವರೊಂದಿಗೆ ಕೇಳಲಾಯಿತು, "ಪ್ರವಾದಿಯವರೇ! ನಮಾಝ್‌ನಲ್ಲಿ ಅದೇನುಂಟಾಯಿತು?" ಪ್ರವಾದಿ(ಸ) ಏನು ವಿಷಯ? ಎಂದು ಕೇಳಿದರು. ತಾವು ಇಷ್ಟು ರಕಅತ್(ಹೆಚ್ಚು ಅಥವಾ ಕಡಿಮೆ) ಮಾಡಿದ್ದೀರೆಂದು ಹೇಳಲಾಯಿತು. ಪ್ರವಾದಿ(ಸ) ಕೂಡಲೇ ತಮ್ಮ ಕಾಲುಗಳನ್ನು ಮಡಚಿ ಕಿಬ್ಲಾದತ್ತ ಮುಖ ಮಾಡಿ ಎರಡು ಸಜ್ದಾ ಮಾಡಿದರು ಮತ್ತು ಸಲಾಮ್ ಹೇಳಿದರು. ತರುವಾಯ ನಮ್ಮ ಕಡೆಗೆ ತಿರುಗಿ ಹೀಗೆಂದರು, "ನಮಾಝ್‌ನಲ್ಲೇನಾದರೂ ಹೊಸ ವಿಷಯ ಸೇರ್ಪಡೆಗೊಂಡಿದ್ದರೆ ನಾನು ನಿಮಗೆ ತಿಳಿಸುತ್ತಿದ್ದೆ. ಆದರೆ ನಾನೂ ನಿಮ್ಮಂತೆಯೇ ಓರ್ವ ಮನುಷ್ಯನಾಗಿದ್ದೇನೆ. ನಿಮಗೆ ಮರೆವುಂಟಾಗುವಂತೆ ನಾನೂ ಮರೆತುಬಿಡುತ್ತೇನೆ. ನಾನು ಮರೆತುಬಿಟ್ಟರೆ ನನಗೆ ನೆನಪಿಸಿರಿ. ನಿಮ್ಮವರ ಪೈಕಿ ಯಾರಿಗಾದರೂ ನಮಾಝ್‌ನಲ್ಲಿ ಸಂಶಯವುಂಟಾಗಿ ಬಿಟ್ಟರೆ ಖಾತ್ರಿಯಾದುದರ ಬಗ್ಗೆ ಆಲೋಚಿಸಿ, ಅದರಂತೆ ನಮಾಝ್ ಪೂರ್ತಿಗೊಳಿಸಲಿ. ನಂತರ ಸಲಾಮ್ ಹೇಳಿ ಎರಡು ಸಜ್ದಾ ಮಾಡಲಿ.

**255.** ಉಮರ್(ರ) ಹೇಳುತ್ತಾರೆ: ನಾನು ನನ್ನ ಪ್ರಭುವಿನ ಮೂರು ವಿಷಯಗಳಲ್ಲಿ ಸಾಮ್ಯತೆ ಹೊಂದಿದೆ. (ಒಂದನೆಯದಾಗಿ) ನಾನು ಪ್ರವಾದಿವರ್ಯರಲ್ಲಿ, ನಾವು ಮಕಾಮು ಇಬ್ರಾಹೀಮನ್ನು ನಮಾಝ್‌ನ ಸ್ಥಳವಾಗಿ ಮಾಡುತ್ತಿದ್ದರೆ ಚೆನ್ನಾಗಿತ್ತು ಎಂದು ಹೇಳಿ, 'ವತ್ತಖಿದೂ ಮಿನ್‌ಮಕಾಮಿ ಇಬ್ರಾಹೀಮ್ ಮುಸ್ಸಲ್ಲ' ಎಂಬ ಸೂಕ್ತ ಅವತೀರ್ಣಗೊಂಡಿತ್ತು. (ಎರಡನೆಯದಾಗಿ) ನಾನು ಪ್ರವಾದಿವರ್ಯರೊಡನೆ, "ಪ್ರವಾದಿ ವರ್ಯರೇ! ತಾವು ತಮ್ಮ ಪತ್ನಿಯರಿಗೆ ಪರ್ದಾ ಹಾಕಲು ಆದೇಶಿಸುತ್ತಿದ್ದರೆ ಒಳ್ಳೆಯದಿತ್ತು. ಏಕೆಂದರೆ ಅವರೊಂದಿಗೆ ಒಳ್ಳೆಯವರೂ ಕೆಟ್ಟವರೂ ಮಾತಾಡುತ್ತಾರೆ" ಎಂದು ಹೇಳಿದಾಗ ಹಿಜಾಬ್‌ನ ಸೂಕ್ತ ಅವತೀರ್ಣಗೊಂಡಿತು. (ಮೂರನೆಯದಾಗಿ) ಪ್ರವಾದಿವರ್ಯರ ಎಲ್ಲ ಪತ್ನಿಯರು ಅವರನ್ನು ಕಡೆಗಣಿಸಿದರು. ನಾನು ಅವರೊಂದಿಗೆ, "ಪ್ರವಾದಿಯವರು ನಿಮಗೆ ತಲಾಕ್ ಕೊಟ್ಟರೆ ಅಲ್ಲಾಹನು ನಿಮಗಿಂತ ಉತ್ತಮರಾದ ವಿಧೇಯ ಪತ್ನಿಯರನ್ನು ದಯಪಾಲಿಸುವನು" ಎಂದು ಹೇಳಿದಾಗ ಇದೇ ಸೂಕ್ತ ಅವತೀರ್ಣಗೊಂಡಿತು.



ಸಿದ್ದೀಕುಲ್ ಅಕ್ಬರ್ - 2

ಇ.ಎಸ್. ಇಬ್ರಾಹೀಮ್

# ಸಚ್ಚಾರಿತ್ರ್ಯ

## ವಿಶಿಷ್ಟ ಗುಣದ ಅಬೂಬಕರ್

**ಕು**ರೈಶಿಗಳ ನಿರ್ಜೀವಿ ದೇವರಲ್ಲಿ ಜಿಗುಪ್ಸೆಗೊಂಡು ಮನೆಯ ಲ್ಲಿಯೇ ಒಂದು ಆರಾಧನಾ ಕೊಠಡಿ ಮಾಡಿ, ಅದರಲ್ಲಿ ಅಬೂಕೈಸಿಬ್ನು ಅನಸ್ ಅಲ್ಲಾಹ ನನ್ನು ಪ್ರಾರ್ಥಿಸುತ್ತಾ ಬಂದರು.

"ನಾನು ಇಬ್‌ರಾಹೀಮರ ಪ್ರಭುವಿಗೆ ವಂದಿಸುತ್ತೇನೆ" ಕುಸ್ಸಿಬ್ನು ಸಾಈದತಿಲ್ ಇಯಾದಿಯ ಒಂದು ಭಾಷಣವನ್ನು ಹೀಗೆ ವಾಚಿಸಬಹುದು;

ಜನರೇ, ಕೇಳಿರಿ, ಗ್ರಹಿಸಿರಿ, ಬದುಕಿರುವವರು ಸಾಯುವರು. ಬರಲಿರು ವುದೆಲ್ಲವೂ ಬರುವುದು... ಕಗ್ಗತ್ತಲು, ಪ್ರಜ್ವಲಿಸುವ ಸೂರ್ಯ, ನಕ್ಷತ್ರ ರಾಶಿಯಿರುವ ಆಕಾಶ, ಹೊಳೆಯುವ ನಕ್ಷತ್ರ ಗಳು, ತೆರೆಗಳೇಳುವ ಸಮುದ್ರಗಳು, ನಿಶ್ಚಲವಾದ ಪರ್ವತಗಳು, ವಾಸಯೋಗ್ಯ ಭೂಮಿ, ಹರಿಯುವ ನದಿ, ಬಾನಲೋಕದಲ್ಲಿ ಸುದ್ದಿಯಿವೆ... ಭೂಲೋಕದಲ್ಲಿ ಪಾಠವಿದೆ. ಮನುಷ್ಯರ ಅವಸ್ಥೆ ಏನು? ಅವರು ಹೋಗಿ ಮರೆಯಾಗುತ್ತಾರೆ. ಮರಳಿ ಬರುವುದೇ ಇಲ್ಲ. ಆ ಸ್ಥಳ (ಹೋದಸ್ಥಳ) ಇಷ್ಟವಾಗಿ ಅಲ್ಲಿಯೇ ಅವರು ಖಾಯಮ್ ವಾಸ ಮಾಡಿರಬಹುದೇ? ಅಥವಾ ಎಲ್ಲರೂ ಕಡೆ ಗಣಿಸಿರುವುದರಿಂದ ಅಲ್ಲಿ ಉಳಿದಿದ್ದಾರೆಯೇ?

ಕುಸ್ಸು ಅಲ್ಲಾಹನನ್ನು ಹಿಡಿದು ಆಣೆ ಹಾಕುತ್ತಾನೆ. ಇದು ಅಪರಾಧವೇನಲ್ಲ. ನಿಶ್ಚಯವಾಗಿಯೂ ಅಲ್ಲಾಹನಿಗೊಂದು ಧರ್ಮವಿದೆ. ಅದು ನಿಮಗೆ ಉತ್ತಮವಾಗಿದೆ. ನೀವು ಸ್ವೀಕರಿಸಿರುವ ಧರ್ಮಕ್ಕಿಂತಲೂ ಶ್ರೇಷ್ಠ ಅದಾಗಿದೆ. ನೀವೆಲ್ಲರೂ ಒಟ್ಟಾರೆ ನಿಷಿದ್ಧಗಳಲ್ಲಿ ಮುಳುಗಿರುವಿರಿ.

ಅಧರ್ಮಕ್ಕೆ ಮನಸೊಂದು ದೂರವುಳಿದ ಅನೇಕ ಮಂದಿ ಬೇರೆಯೂ ಅಲ್ಲಿ ಇದ್ದಾರೆ. ವರಕತಿಬ್ನು ನೌಫಲ್, ಹಾರಿಸಿಬ್ನು ಹುವೈರಿಸ್, ಉಬೈದುಲ್ಲಾಹಿಬ್ನು ಜಹ್ಸ್, ಝೈದಿಬ್ನು ಅಮ್ರಿಬ್ನು ನುಫೈಲ್ ಹೀಗೆ ಇವರಲ್ಲಿ ಮೊದಲ ಮೂರು ಮಂದಿ, ನಂತರ ಕ್ರೈಸ್ತ ಧರ್ಮಾವಲಂಬಿಗಳಾಗಿ ಪರಿವರ್ತನೆಯಾದರು. ಝೈದ್ ಸ್ವತಂತ್ರವಾದ ಒಂದು ದಾರಿಯನ್ನು ಅಳವಡಿಸಿ ಏಕದೇವಾರಾಧನೆ ಯಲ್ಲೇ ಜೀವನ ನಡೆಸುತ್ತಾ ಬಂದರು.

ಮೇಲೆ ಹೆಸರು ಉಲ್ಲೇಖಿಸಲಾದವರಿಗೆ, ಮತ್ತು ಅಂತಹ ಇತರರಿಗೆ ಸತ್ಯ ಪಥದ ಕುರಿತು ಸ್ಪಷ್ಟವಾದ ಯಾವುದೇ ದೃಷ್ಟಿಕೋನವಿರಲಿಲ್ಲ. ಆದರೆ ನಿಕಟದಲ್ಲಿ ಆಗಮಿಸಲಿರುವ ಓರ್ವ ಪ್ರವಾದಿಯ ಕುರಿತು ನಿರೀಕ್ಷೆ ಅವರಲ್ಲಿ ಹಲವರಿಗಿತ್ತು ಎಂದು ಭಾವಿಸಬಹುದು. ಅವರ ಕೂಟದಲ್ಲಿ ಆ ಪ್ರವಾದಿಯನ್ನು ಕಾಣಲು, ಅವರ ವಿಶ್ವಸ್ಥ ಅನುಯಾಯಿಯಾಗಲು ಆಶೆಯಿಂದ ಕಾದು ಕುಳಿತಿದ್ದ ಹಲವರಿದ್ದರು. ಇಂತಹ ಸಚ್ಚರಿತರು ಮತ್ತು ಸತ್ಯಾರ್ಥಿಗಳಾದ ಜನ ರೊಂದಿಗಿದ್ದ ಸಂಬಂಧವು ಅಬೂಬಕರ್‌ರ ಜೀವನವನ್ನು ತುಂಬಾ ಪ್ರಭಾವಕ್ಕೊಳಪಡಿಸಿತ್ತು. ಮುಂದೆ ಆಗಮಿಸಲಿರುವ ಪ್ರವಾದಿಯ ಕುರಿತು ಅಬೂಬಕರ್‌ರವರು ಇವರಿಂದಲೇ ತಿಳಿದುಕೊಂಡಿರುವ ಸಾಧ್ಯತೆಗಳಿವೆ.

## ವಿಶಿಷ್ಟ ವ್ಯಕ್ತಿತ್ವ

ತುಂಬ ಸಂಕ್ಷಿಪ್ತ ಕಾಲದಲ್ಲಿ ತನ್ನ ನಾಡಿನವರ ನಡುವೆ ಪ್ರಸ್ತಾಪಯೋಗ್ಯವಾದ ಒಂದು ಸ್ಥಾನವನ್ನು ಗಳಿಸಿಕೊಳ್ಳಲು ಅಬೂಬಕರ್‌ರಿಗೆ ಸಾಧ್ಯವಾಯಿತು. ಸಾಲ, ನಷ್ಟ ಪರಿಹಾರ ಮುಂತಾದ ಅವರ ಹಲವಾರು ಆರ್ಥಿಕ ಬಾಧ್ಯತೆಗಳನ್ನು ವಹಿಸಿಕೊಂಡು ಪರಿಹಾರ ನಡೆಸುವುದು ಅಬೂಬಕರ್‌ರ ರೂಢಿಯಾಗಿತ್ತು. ಆದರೂ ಅವರ ಕೆಲವು ಅಭ್ಯಾಸಗಳು, ಸಂಪ್ರದಾಯಗಳು ತನ್ನ ಮೇಲೆ ಸ್ವಲ್ಪವೂ ಪ್ರಭಾವ ಬೀರದಂತೆ ಅಬೂಬಕರ್‌ರು(ರ) ನೋಡಿಕೊಂಡರು. ಕುರೈಶರು ಕಲಬಾದ ಸಮೀಪ ಗುಂಪುಗೂಡಿದಾಗ ಕೆಲವು ಬಾರಿ ಅವರ ಸಮೀಪದಿಂದಲೇ ಹಾದು ಹೋಗಬೇಕಾಗಿತ್ತು. ಆಗಲೇ ಈ ಹಠಮಾರಿಗಳ ವಿರುದ್ಧ, ಅವರ ಹೊಡಿಬಡಿ ಕೂಟಗಳ ವಿರುದ್ಧ ಅಬೂಬಕರ್‌ರ ಮನಸಾಕ್ಷಿ ನೈತಿಕವಾಗಿ ಆಕ್ರೋಶಗೊಳ್ಳುತ್ತಿತ್ತು. ಅವರು ಸ್ವಯಂ ತನ್ನನ್ನು ಪ್ರಶ್ನಿಸುತ್ತಿದ್ದರು. "ದೇವನೇ ಇದಕ್ಕೊಂದು ಕೊನೆ ಇಲ್ಲವೇ ಓರ್ವ ಧರ್ಮೋಪದೇಶಕ ಇಲ್ಲಿಗೆ ಬರುವುದಿಲ್ಲವೇ?"

## ಜನನ

ಅಬೂಬಕರ್ ಯಾವಾಗ ಹುಟ್ಟಿದರು. ಆ ಕುರಿತು ದಿನ, ವಾರಗಳನ್ನು ನಿರ್ಣಯಿಸುವುದು ಕಷ್ಟಕರವಾಗಿದೆ. ಆದರೆ ವರ್ಷವನ್ನು ನಿರ್ಣಯಿಸಲು ಪ್ರಯಾಸವಿಲ್ಲ. ಪ್ರವಾದಿವರ್ಯರು(ಸ) ಜನಿಸಿ ಎರಡು ವರ್ಷ ಮತ್ತು ಕೆಲವು ತಿಂಗಳು ಕಳೆದ ನಂತರ ಕ್ರಿ.ಶಕ. 573ರಲ್ಲಿ ಜನಿಸಿದರು. ಅದೇ ರೀತಿ ಬಾಲ್ಯ ಜೀವನದ ಕುರಿತು ಏನನ್ನಾದರೂ ಹೇಳುವುದು ಕಷ್ಟವಾಗಿದೆ. ಓರ್ವ ಯುವಕನಾಗಿ, ತಂದೆಯ ಮೇಲೆ ಪ್ರಭಾವ ಬೀರಲಾರಂಭಿಸಿದ ನಂತರದ ಜೀವನದ ಕುರಿತ ವಿವರ ಮಾತ್ರವೇ ಇತಿಹಾಸದಲ್ಲಿ ಲಭ್ಯವಾಗಿದೆ.

## ಕುಟುಂಬ

ಕುರೈಶಿ ಕುಲದ ತೈಮ್ ವಂಶದಲ್ಲಿ ಅಬೂಬಕರ್ ಜನಿಸಿದರು. ಅವರ ಪಿತೃ ಪರಂಪರೆ ಪ್ರವಾದಿವರ್ಯರ(ಸ) ಆರನೇ ಪಿತಾಮಹ ಮುರ್ರಾ ರೊಂದಿಗೆ ಸೇರುತ್ತದೆ. ಕಅಬದೊಂದಿಗೆ ವಿಶೇಷ ಸಂಬಂಧವಿರುವುದರಿಂದ ಕುರೈಶಿ ಕುಲದ ಯಾವುದೇ ವಂಶಕ್ಕೂ ಸಮಾಜದಲ್ಲಿ ಕೆಲವು ವಿಶೇಷ ಪದವಿಗಳಿದ್ದುವು. ಹಾಜಿಗಳನ್ನು ಸತ್ಕರಿಸುವುದು, ಅವರಿಗೆ ನೀರು ಕೊಡುವುದು ಅಬ್ದುಮನಾಫ್ ಸಂತತಿಗಳ ಹೊಣೆಗಾರಿಕೆಯಾಗಿತ್ತು. ಯುದ್ಧಕ್ಕೆ ಹೋಗುವ ಸೈನ್ಯಕ್ಕೆ ಪತಾಕೆ ನೀಡುವುದು, ಕಅಬದ ಸಂರಕ್ಷಣೆ ಮಾಡುವುದು, ಸಾರ್ವಜನಿಕ ಸಭೆ ಕರೆದು ಸೇರಿಸುವುದು, ಅಬ್ದುದ್ದಾರ್ ಸಂತತಿಗಳ ಹೊಣೆಯಾಗಿತ್ತು. ತೈಮ್ ಕುಟುಂಬದ ಹೊಣೆ ಸಾರ್ವಜನಿಕರ ಸಾಲ ಪಾವತಿಸುವುದು, ನಷ್ಟ ಪರಿಹಾರ ನೀಡುವುದಾಗಿತ್ತು. ಕಾರ್ಯ ಸಾಮರ್ಥ್ಯ ಪಡೆದುಕೊಂಡ ನಂತರ ತೈಮ್ ಕುಟುಂಬದ ಬಾಧ್ಯತೆಗಳನ್ನು ವಹಿಸಿ ಅಬೂಬಕರ್ ನಿರ್ವಹಿಸುತ್ತಿದ್ದರು. ಕುರೈಶಿಗಳು ಅವರಿಗೆ ಅದಕ್ಕೆ ಅಂಗೀಕಾರ ನೀಡಿದ್ದರು. ಈ ಕರ್ತವ್ಯ ನಿರ್ವಹಿಸುವಾಗ, ಅವರು ಅಬೂಬಕರ್‌ರಿಗೆ ಸಹಕರಿಸುತ್ತಿದ್ದರು. ಆ ಕಾಲದಲ್ಲಿ ಈ ಪದವಿ ಬೇರೆ ಯಾರಿಗೂ ಲಭಿಸಿರಲಿಲ್ಲ.

ತೈಮ್ ಕುಟುಂಬ ಪ್ರಸಿದ್ಧವಾಗಿತ್ತು. ಕಾರಿರುಳಿನ ದೀಪಗಳು ಎಂದು ತೈಮ್ ಕುಟುಂಬವನ್ನು ಪ್ರಸಿದ್ಧ ಕವಿ ಇಮ್ರುಲ್ ಕೈಸ್ ವಿಶ್ಲೇಷಿಸಿದ್ದಾರೆ. ಉಸ್ಮಾನೆಂಬ 'ಅಬೂಕುಹಾಫ' ಅಬೂಬಕರ್‌ರ ತಂದೆಯಾಗಿದ್ದಾರೆ. ತೈಮ್ ವಂಶದ್ದೇ ಸಕ್ರಿಬ್ನು ಆಮಿರ್‌ರ ಎಂಬವರ ಪುತ್ರಿ 'ಸಲ್ಮಾ' ಅಬೂಬಕರ್‌ರ ತಾಯಿಯಾಗಿದ್ದಾರೆ.

## ನಾಮ ಪರಿಣಾಮ

ಅಬ್ದುಲ್ ಕಅ್‌ಬ ಎಂದು ಅಬೂಬಕರ್‌ರ ಪ್ರಾರಂಭದ ಹೆಸರಾಗಿತ್ತು. ಈ ಶಬ್ದದ ಅರ್ಥ ಕಅಬಾದ ಗುಲಾಮ (ದಾಸ)ಎಂದಾಗಿದೆ. ಅಲ್ಲಾಹನಲ್ಲದವರ ದಾಸ್ಯತ್ವವನ್ನು ಸೂಚಿಸುವ ಹೆಸರನ್ನು ಇಸ್ಲಾಮೀ ಆದರ್ಶಕ್ಕೆ ನಿಲುಕುವುದಿಲ್ಲ. ಆದುದರಿಂದ ಪ್ರವಾದಿವರ್ಯರು(ಸ) ಆ ಹೆಸರು ಬದಲಾಯಿಸಿದರು. ಅಬ್ದುಲ್ಲ ಎಂದು ಕರೆದರು. ವಿಮುಕ್ತ ಎಂಬ ಅರ್ಥದ 'ಅತೀಕ' ಎಂಬ ಬೇರೊಂದು ಉಪನಾಮವೂ ಅಬೂಬಕರ್‌ರಿಗೆ ಇತ್ತು. ಈ ಎಲ್ಲ ಹೆಸರು ಬರಲು ಎರಡು ಕಾರಣ ಗಳನ್ನು ಹೇಳಲಾಗುತ್ತಿವೆ. ಒಂದು ಅಬೂಕುಹಾಫ ದಂಪತಿಗಳ ಗಂಡು ಸಂತಾನಗಳು ಬದುಕುಳಿದಿರಲಿಲ್ಲ. ಅದರಿಂದ ನೊಂದ ಸಲ್ಮಾ ಅಬೂಬಕರ್ ಹುಟ್ಟಿದಾಗ ಶಪಥ ತೊಟ್ಟರು. "ಈ ಮಗು ಬದುಕಿ ಉಳಿಯುವುದಾದರೆ ಅವನನ್ನು ನಾನು ಅಬ್ದುಲ್ ಕಅ್‌ಬ್ ಎಂಬ ಹೆಸರಿಂದ ಕರೆಯುತ್ತೇನೆಂಬ ಹರಕೆ ಹೊತ್ತರು. ನಂತರ ನರಕ ವಿಮುಕ್ತನೆಂಬ ಅರ್ಥದಲ್ಲಿ ಅತೀಕ್ ಎಂದು ಕರೆಯುತ್ತಾ ಬಂದರು. ನರಕ ವಿಮುಕ್ತನನ್ನು ನೋಡುವವರು ಇವರನ್ನು ನೋಡಲಿ ಎಂದು ಅಬೂಬಕರ್‌ರನ್ನು ಪ್ರವಾದಿವರ್ಯರು(ಸ) ತೋರಿಸಿದರು. ಪ್ರವಾದಿವರ್ಯರ ಪ್ರಸ್ತಾಪದಿಂದ ಆ ಹೆಸರು ಲಭಿಸಿದ್ದೆಂಬ ಇನ್ನೊಂದು ಅಭಿಪ್ರಾಯ ಕೂಡಾ ಇದೆ.

ಆದರೆ, ಅಬೂಬಕರ್ ಎಂಬ ಹೆಸರು ಹೇಗೆ ಲಭಿಸಿತು ಎಂಬುದಕ್ಕೆ ಕಾರಣ ಉಲ್ಲೇಖಗೊಂಡಿಲ್ಲ. ಪ್ರಾರಂಭದಲ್ಲಿ ಇಸ್ಲಾಮ್ ಸ್ವೀಕರಿಸುವ ಮೂಲಕ ಆರಂಭದಲ್ಲಿ ಬಂದವನು ಎಂಬ ಅರ್ಥದಲ್ಲಿ ಅಬೂಬಕರ್ ಎಂದು ಕರೆಯಲಾಯಿತೆಂದು ಭಾವಿಸಲಾಗಿದೆ. ಇನ್ನು ಉಳಿದಿರುವುದು ಸಿದ್ದೀಕ್ ಎಂಬ ಇನ್ನೊಂದು ಉಪನಾಮದ ವಿಚಾರ. ಅದರ ಕುರಿತು ಮುಂದೆ ವಿವರಿಸಲಿರುವುದರಿಂದ ಅದನ್ನು ಇಲ್ಲಿ ವಿವರಿಸುವುದಿಲ್ಲ.

## ಸ್ಪರ್ಧೆಯ ಧಾರ್ಮಿಕತೆ

1922ರ ಮೇ ತಿಂಗಳಲ್ಲಿ ಲಾಹೋರಿನ ಶಾಹ್ ಆಲಮ್ ದ್ವಾರದ ಹೊರಗೆ ಹಿಂದುಗಳು ಒಂದು ಮಂದಿರ ನಿರ್ಮಿಸಿದರು. ಇದನ್ನು ಕಂಡು ಮುಸ್ಲಿಮರಲ್ಲಿ ಅಲ್ಲೇ ಒಂದು ಮಸೀದಿ ನಿರ್ಮಿಸಬೇಕೆಂಬ ಬಯಕೆ ಹುಟ್ಟಿತು. ಕೂಡಲೇ ನಿಧಿ ಸಂಗ್ರಹಿಸಿ ರಾತೋ ರಾತ್ರಿ ಮಸೀದಿಯನ್ನು ನಿರ್ಮಿಸಲಾಯಿತು. ಈ ಘಟನೆಯಿಂದ ಪ್ರೇರಿತವಾಗಿ ಮಹಾ ಕವಿ ಇಕ್ಬಾಲರು ಈ ದ್ವಿಪದಿಯನ್ನು ಹೇಳಿದರು,

"ಮಸ್ಜಿದ್ ತೊ ಬನಾದಿ ಶಬ್ ಭರ್ ಮೆ ಈಮಾನ್ ಕಿ ಹರಾರತ್ ವಾಲೋಂನೆ

ಮನ್ ಅಪ್ನಾ ಪುರಾನಾ ಪಾಪಿ ಹೈ ಬರ್ಸೋಸಮೆ ನಮಾಝಿ ಬನ್‌ನ ಸಕಾ"

ಅರ್ಥಾತ್: ವಿಶ್ವಾಸದ ಬಿಸಿಯುಳ್ಳವರು ರಾತೋ ರಾತ್ರಿ ಮಸೀದಿ ನಿರ್ಮಿಸಿ ಬಿಟ್ಟರು.

ಆದರೆ ನನ್ನ ಮನವು ಹಳೆಯ ಪಾಪಿಯಾಗಿದ್ದು ವರ್ಷಗಳೇ ಕಳೆದರೂ ನನಗೆ ನಮಾಝ್ ಮಾಡಲು ಸಾಧ್ಯವಾಗಲಿಲ್ಲ.

ಇದು ಧಾರ್ಮಿಕತೆಯು ಇಂದು ತಾಳಿರುವ ರೂಪದ ಒಂದು ಪ್ರತೀಕದಂತಿದೆ. ಇದು ಸ್ಪರ್ಧೆಯ ಧಾರ್ಮಿಕತೆ. ಇದು ಧರ್ಮನಿಷ್ಠೆಗಿಂತಲೂ ಕೋಮು ಭಾವನೆಯಿಂದ ಮೈವೆತ್ತುತ್ತದೆ. ಇಂತಹ ಧಾರ್ಮಿಕತೆಯನ್ನು ಯಾವ ಧರ್ಮದವರು ಪ್ರದರ್ಶಿಸಿದರೂ ಅದು ಡಂಬಾಚಾರವೇ ಸರಿ. ಸತ್ಯವಿಶ್ವಾಸಿಯು ಸೃಷ್ಟಿಕರ್ತನ ಭಯವಿರಿಸಿಕೊಳ್ಳುತ್ತಾನೆ. ದೇವರ ಭಯವೇ ಅವನೆಲ್ಲ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಇಂತಹ ದೇವಭಯಭಕ್ತಿಯೊಂದಿಗೆ ಮಾಡಿದ ಎಲ್ಲ ಕಾರ್ಯಗಳೂ ಉತ್ತಮ ಪರಿಣಾಮ ಉಂಟು ಮಾಡುತ್ತದೆ. ಅವುಗಳಿಗೆ ದೇವಸಹಾಯವೂ ಇರುತ್ತದೆ. ಇತರರೊಂದಿಗೆ ಸ್ಪರ್ಧೆಗಾಗಿ ಮಾಡುವ ದೇವಭಯದಿಂದ ಪರಸ್ಪರ ಸಹಕಾರದ ವಾತಾವರಣ ಬೆಳೆಯದು.

ಚಿಂತನೆ



ಇಬ್ರಾಹೀಮ್ ಸಈದ್

## ವೃಕ್ಷ

ನೆರಳಾಗಿ ದಾರಿ ಹೋಕನಿಗೆ ಆಶ್ರಯ
ನೀಡುವೆ ಹೂ ಹಣ್ಣಿನಂತೆ ಲೆಕ್ಕವಿಲ್ಲದಷ್ಟು
ನಿನ್ನ ತೋಳತೆಕ್ಕೆಯಲಿ
ನೆಲೆನಿಂತಿವೆ ಕುಟುಂಬಗಳು.

ಬಿಸಿಲು ಮಳೆ ಚಳಿಗೆ ಆಶ್ರಯವಾಗಿರುವೆ
ನಿನ್ನ ಬೀಸಣಿಕೆಯಿಂದ ಸೌಖ್ಯ ಮುದ ಅನುಭವಿಸುತ
ಜೀವರು ಮಾಯವಾಗಿ
ಹಿತವೆನಿಸುವುದು ಗಾಳಿ ಸುಳಿಗಾಳಿಯಿಂದ.

ಎಲೆ ತರಗೆಲೆ ಗೊಬ್ಬರವಾಗಿ
ಫಸಲು ಇಮ್ಮಡಿಯಾಗುವುದು
ನಿನ್ನ ಋಣದಲ್ಲಿ ರೈತಾಪಿ ಜನ
ಬೆಚ್ಚನೆಯ ಮನೆಗೆ ಮೇಲು ಹೊದಿಕೆಯಾಗಿರುವೆ.

ಉರುವಲು ಬಂಡಿಗೆ ಅನ್ನ ಬೇಯಿಸಿಕೊಳ್ಳಲು
ನೀ ಮೂಲ ಉತ್ತಮ ಹವೆ ನೀಡಿ
ರೋಗ ನಿರ್ಮೂಲನೆಗೆ ನೀ ಹರಿಕಾರ.

ಮನೆ ಮುಂದೆ ಸಸಿಯೊಂದು ನೆಡುವ
ಚಿಂತೆಯಿಲ್ಲ ಕಾಡು ಉಳಿಸಿ
ನಾಡು ಬೆಳೆಸಿ ಮನೆ
ಮುಂದೆ ವೃಕ್ಷವೊಂದಿರಲಿ.

ಸಾಕಿ ಸಲಹಿ ಮಗುವಿನಂತೆ
ಅಂತರ್ಜಲ ಕುಸಿದಂತೆ
ಅರಣ್ಯ ಸಂಪತ್ತು ನಾಶವಾಗಿ ಉಷ್ಣಾಂಶ
ಹೆಚ್ಚಾಗಿ ಬಳಲ ಬೇಕಾಗಿತ್ತು ವಹಿಸಿ ಎಚ್ಚರ
ನೀಯಾರಿಗಾದೆ ಎಲೆ ಮಾನವನೆಂದು
ಪ್ರಶ್ನಿಸಿತ್ತು ವೃಕ್ಷವೊಂದು.

ಉಮರ್ ಶರೀಫ್. ಎನ್. ಕುಂಟೋಜಿ
ಬಿಜಾಪುರ



# ಪ್ರಾಣಿಗಳ ದೃಷ್ಟಾಂತಗಳು

## ದೇವಾಸ್ತಿತ್ವದ ದೃಷ್ಟಾಂತಗಳು-26

ಇಮಾಮ್ ಗಝ್ಝಾಲಿ

**ಪ್ರಾ**ಣಿಗಳ ಕಾಲುಗಳನ್ನು ನೋಡಿರಿ. ನಡೆಯಲು ಸಾಧ್ಯವಾಗುವಂತೆ ಜೋಡಿಯಾಗಿವೆ. ಜೋಡಿಯಾಗಿಲ್ಲದಿದ್ದರೆ ನಡೆಯಲು ಸಾಧ್ಯವಿಲ್ಲ. ಯಾಕೆಂದರೆ, ಓಡುವಾಗ ಮತ್ತು ನಡೆಯುವಾಗ ಒಂದು ಕಾಲು ಊರಿಯೇ ಇನ್ನೊಂದು ಕಾಲನ್ನಿರಿಸಲು ಸಾಧ್ಯ. ಎರಡು ಕಾಲುಗಳಿರುವಾತನು ಒಂದು ಕಾಲನ್ನು ಊರಿ ಇನ್ನೊಂದು ಕಾಲಿನಲ್ಲಿ ನಿಲ್ಲುತ್ತಾನೆ. ನಾಲ್ಕು ಕಾಲುಗಳಿರುವ ಜೀವಿಗಳು ಎದುರಿನ ಎರಡು ಕಾಲುಗಳನ್ನು ಊರಿ ಎರಡು ಕಾಲುಗಳನ್ನು ಮುಂದಿರಿಸುತ್ತವೆ. ಒಂದು ಬದಿಯ ಎರಡು ಕಾಲುಗಳನ್ನು ಮುಂದಿರಿಸಿದರೆ ಅಥವಾ ಎರಡು ಮುಂಗಾಲುಗಳನ್ನು ಮುಂದೆ ಸರಿಸಿ ಹಿಂದಿನ ಕಾಲುಗಳನ್ನು ಒಟ್ಟಿಗೆ ಊರಿದರೂ ಸಮತೋಲನ ತಪ್ಪುತ್ತದೆ. ನಡೆಯಲು ಸಾಧ್ಯವಿಲ್ಲ.

ಕತ್ತೆಗಳನ್ನು ನೋಡಿದಿರಾ? ಅವುಗಳನ್ನು ಹೊರೆ ಸಾಗಿಸಲು ಮತ್ತು ಬೀಸು ಯಂತ್ರ ತಿರುಗಿಸಲು ಮಾನವನು ಬಳಸುತ್ತಾನೆ. ಆದರೆ ಅಂಥ ಕೆಲಸಗಳನ್ನು ಕುದುರೆಗಳಿಂದ ಮಾಡಿಸಲು ಸಾಧ್ಯವಿದೆಯೇ? ಒಂಟೆಯು ಕೆರಳಿದರೆ ಅದನ್ನು ಯಾರಿಂದಲೂ ನಿಯಂತ್ರಿಸಲು ಸಾಧ್ಯವಿಲ್ಲ. ಆದರೆ ಸಾಮಾನ್ಯ ಸ್ಥಿತಿಯಲ್ಲಿ ಸಣ್ಣ ಮಕ್ಕಳು ಅದನ್ನು ನಿಯಂತ್ರಿಸಬಹುದು. ಕೊಬ್ಬಿದ ಕೋಣವು ಯಜಮಾನನಿಗೆ ವಿಧೇಯವಾಗಿ, ಆತನು ಅದರ ಭುಜದಲ್ಲಿ ನೊಗವಿರಿಸಿ ಉಳುತ್ತಾನೆ. ಕುದುರೆಯನ್ನು ಸವಾರಿಗೆ ಬಳಸುತ್ತಾನೆ. ಸವಾರನ ರಕ್ಷಣೆಗೆ ಅಗತ್ಯವಿರುವ ಖಡ್ಗ, ಬಾಣ ಇತ್ಯಾದಿ ಯುದ್ಧ ಸಾಮಗ್ರಿಗಳನ್ನು ಅವು ಹೊರುತ್ತವೆ. ಒಂದು ದೊಡ್ಡ ಆಡಿನ ಮಂದೆಯನ್ನು ಒಬ್ಬ ಸಣ್ಣ ಬಾಲಕ ಮೇಯಿಸುತ್ತಾನೆ. ಆಡಿನ ಮಂದೆಯು ಚೆಲ್ಲಾಪಿಲ್ಲಿಯಾಗಿ ನಾನಾ ಕಡೆಗೆ ಓಡುತ್ತಿದ್ದರೆ ಮೇಯಿಸಲು ಸಾಧ್ಯವಿರಲಿಲ್ಲ. ಅದನ್ನು ಹುಡುಕಲು ಕೆಲವೊಮ್ಮೆ ಸಾಧ್ಯವಾಗುತ್ತಿರಲಿಲ್ಲ. ಮಾನವನಿಗೆ ಅಧೀನಗೊಳಿಸಲಾಗಿರುವ ಎಲ್ಲ ಪ್ರಾಣಿಗಳ ಸ್ಥಿತಿ ಇದೇ ಆಗಿದೆ. ಅವುಗಳಿಗೆ ವಿಶೇಷ ಬುದ್ಧಿ ಮತ್ತು ವಿಚಾರ ಶಕ್ತಿಯಿಲ್ಲದಿರುವುದರಿಂದ ಅವುಗಳನ್ನು ವಿಧೇಯಗೊಳಿಸಲು ನಮಗೆ ಸಾಧ್ಯವಾಗುತ್ತದೆ. ದುಡಿಸಿ ಕಷ್ಟಕೊಟ್ಟರೂ ಅವು ಮಾನವನೊಡನೆ ವೈರ ವಿದ್ವೇಷ ಬೆಳೆಸುವುದಿಲ್ಲ.

ಕ್ರೂರ ಜಂತುಗಳೂ ಅಷ್ಟೆ. ಅವುಗಳಿಗೆ ವಿಶೇಷ ಬುದ್ಧಿ ಮತ್ತು ವಿಚಾರ ಶಕ್ತಿಯಿರುತ್ತಿದ್ದರೆ ಅವು ಪದೇ ಪದೇ ಮಾನವರನ್ನು ಆಕ್ರಮಿಸಿ ಸದಾ ಅಪಾಯಕಾರಿಯಾಗುತ್ತಿದ್ದುವು. ಅವುಗಳನ್ನು ಪ್ರತಿರೋಧಿಸಿ ಓಡಿಸಲು ವಿಶೇಷತಃ ಅವು ಹಸಿದಿರುವಾಗ ಕಷ್ಟವಾಗುತ್ತಿತ್ತು. ಆದರೆ ಕ್ರೂರ ಪ್ರಾಣಿಗಳು ಮಾನವರಿಂದ ದೂರವಿರುವುದನ್ನು ನೀವು ನೋಡುತ್ತೀರಿ. ಅವು ತಮ್ಮ ತಾಣ ಗಳಲ್ಲಿ ಅವಿತಿರುತ್ತವೆ. ಜನರು ಅವುಗಳಿಗೆ ಹೆದರುತ್ತಾರೆ. ಹೆಚ್ಚಿನಂಶ ರಾತ್ರಿ ಕಾಲಗಳಲ್ಲಿ ಆಹಾರ ಹುಡುಕುತ್ತಾ ಹೊರ ಬರುತ್ತವೆ. ಬಹಳ ಶಕ್ತಿ ಮತ್ತು ಗಾತ್ರವಿದ್ದರೂ ಅಲ್ಲಾಹನು ಕ್ರೂರ ಪ್ರಾಣಿಗಳನ್ನು ಮಾನವರಿಗೆ ಹೆದರುವ ವರ್ಗದಲ್ಲಿಯೇ ಸೃಷ್ಟಿಸಿದ್ದಾನೆ. ಅನ್ಯಥಾ ಅವು ಜನವಾಸ ಪ್ರದೇಶಗಳಿಗೆ ಬಂದು ಜನಜೀವನವನ್ನು ದುರಂತಮಯಗೊಳಿಸುತ್ತಿದ್ದುವು.

ನೀವು ನಾಯಿಯನ್ನು ನೋಡಿಲ್ಲವೇ? ಒಂದೊಮ್ಮೆ ಅದು ಕ್ರೂರ ಜಂತುವಾಗಿತ್ತು. ಆದರೂ ಅದನ್ನು ಯಜಮಾನನ ಮನೆಯ ಕಾವಲಿಗೆ ಸಜ್ಜುಗೊಳಿಸಲಾಯಿತು. ಯಜಮಾನನಿಗೆ ಯಾವುದೇ ಹಾನಿಯಾಗದಿರಲಿಕ್ಕಾಗಿ ಅದು ಆಹಾರ ಮತ್ತು ನಿದ್ದೆಯನ್ನು ತೊರೆಯುತ್ತದೆ. ತನ್ನ ಬೊಗಳುವಿಕೆ ಯಜಮಾನನನ್ನು ಎಚ್ಚರಗೊಳಿಸಿ ಅಪಾಯದ ಮುನ್ಸೂಚನೆ ನೀಡುತ್ತದೆ. ನಾಯಿಯು ಯಜಮಾನನೊಂದಿಗೆ ಬಹಳಷ್ಟು ಹೊಂದಿಕೊಳ್ಳುತ್ತದೆ. ಇದು ಯಜಮಾನನ ಜತೆಯಲ್ಲಿ ಹಸಿವೆ, ದಾಹ, ಹಿಂಸೆ ಮತ್ತು ವಿವಶತೆಯನ್ನು ಸಹಿಸುತ್ತದೆ. ಮಾನವರಿಗೆ ಕಾವಲು ಮತ್ತು ಬೇಟೆ ಇತ್ಯಾದಿ ಅಗತ್ಯಗಳಿಗಾಗಿ ನಾಯಿಗಳಿಗೆ ಇಂಥ ನೈಸರ್ಗಿಕ ವೈಶಿಷ್ಟ್ಯಗಳನ್ನು ನೀಡಲಾಗಿದೆ. ಸೃಷ್ಟಿಕರ್ತನು ಅದನ್ನು ಕಾವಲುಗಾರಗೊಳಿಸಿದಾಗ ಅದಕ್ಕೆ ಸೂಕ್ತ ಆಯುಧಗಳನ್ನೂ ನೀಡಿದನು. ಕಚ್ಚಿ ಹರಿದು ಹಾಕುವ ಹಲ್ಲುಗಳು ಮತ್ತು ಉಗುರುಗಳು ಮತ್ತು ನಾಲಗೆ ಚಾಚಿ ಉಸಿರು ಬಿಡುವ ಸ್ವಭಾವ. ಅದರಿಂದ ಕಳ್ಳರು ಹಾಗೂ ಇತರರು ಹೆದರಿ ಅದರ ಸಂರಕ್ಷಣೆಯ ವಲಯದಿಂದ ದೂರ ಹೋಗುತ್ತಾರೆ.

ಇನ್ನು ಪ್ರಾಣಿಗಳ ಬೆನ್ನುಗಳನ್ನು ಕಾಲುಗಳ ಮೇಲೆ ಸ್ಥಿರಗೊಳಿಸಿ ಒಂದು ಸಮತಲಗೊಳಿಸಿರುವುದನ್ನು ಗಮನಿಸಿರಿ. ಅದು ಸವಾರಿ ಮತ್ತು ಹೊರೆ ಹೇರಲು ಅನುಕೂಲವಾಗಿದೆ. ಹಾಗೆಯೇ ಹೇಂಟೆಯ ಜನನೇಂದ್ರಿಯವು ಹಿಂದೆ ತೆರೆದ ರೀತಿಯಲ್ಲಿದೆ. ಅದರಿಂದ ಹುಂಜವು ಸರಾಗವಾಗಿ ಜೋಡಿಯಾಗಬಹುದಾಗಿದೆ. ಮಾನವರಂತೆ ಹೊಟ್ಟೆಯ ಕೆಳಗೆ ಗುಪ್ತವಾಗಿರುತ್ತಿದ್ದರೆ ಅವುಗಳಿಗೆ ಜೋಡಿಯಾಗಲು ಕಷ್ಟವಾಗುತ್ತಿತ್ತು. ಈ ವ್ಯವಸ್ಥೆಯ ಬಗ್ಗೆ ಆಲೋಚಿಸಿರಿ.

ಹೆಣ್ಣಾನೆಯ ಜನನೇಂದ್ರಿಯವು ಉದರದ ಅಡಿಭಾಗದಲ್ಲಿರುವುದರಿಂದ ಜೋಡಿಯಾಗುವಾಗ ವಿಶಿಷ್ಠ ಭಂಗಿಯಲ್ಲಿ ಗಂಡಾನೆಗೆ ಅವಕಾಶ ಒದಗಿಸುತ್ತದೆ. ಅದರ ಜನನೇಂದ್ರಿಯವು ಇತರ ಪ್ರಾಣಿಗಳಿಗಿಂತ ಭಿನ್ನವಾದ ಸ್ಥಾನದಲ್ಲಿರುವುದರಿಂದ ಅದರ ಸಂತಾನೋತ್ಪಾದನಾ ಪ್ರಕ್ರಿಯೆಯಲ್ಲಿ ಈ ವೈಶಿಷ್ಟ್ಯವನ್ನು ಸೃಷ್ಟಿಸಲಾಗಿದೆ. ಅದು ಬಹುದೊಡ್ಡ ದೃಷ್ಟಾಂತವೇ ಸರಿ!

ಅದೇ ರೀತಿ ಪ್ರಾಣಿಗಳ ದೇಹವನ್ನು ರೋಮಗಳಿಂದ ಮುಚ್ಚಿರುವ ಕುರಿತು ಆಲೋಚಿಸಿರಿ. ಅದರಿಂದಾಗಿ ಬಿಸಿಲು ಮತ್ತು ಚಳಿಯಿಂದ ರಕ್ಷಣೆ ದೊರೆಯುತ್ತದೆ. ಕೆಲವು ಪ್ರಾಣಿಗಳ ಪಾದಗಳಲ್ಲಿ ಗೊರಸುಗಳಿವೆ. ಗಟ್ಟಿಯಾದ ನೆಲದಲ್ಲಿ ನಗ್ನಪಾದ ಗಳಿಂದ ನಡೆಯುವಾಗ ಗಾಯವಾಗದಂತೆ ಅದು ರಕ್ಷಿಸುತ್ತದೆ. ಕೆಲವು ಪ್ರಾಣಿಗಳ ಗೊರಸುಗಳು ಬಹಳ ಗಟ್ಟಿಯಾಗಿವೆ. ಕೆಲವು ಜೀವಿಗಳಿಗೆ ಗೊರಸುಗಳ ಬದಲಾಗಿ ಬೇರೆ ರೀತಿಯ ಪಾದರಕ್ಷೆಗಳಿವೆ.

# ಹಣಕಾಸು ವಿನಿಮಯದ ರೂಪಗಳು

## ಇಸ್ಲಾಮೀ ಬ್ಯಾಂಕಿಂಗ್-36

ಡಾ| ಮೊಂದಿರ್ ಕಲಾಹ್

1. ಎಲ್ಲವನ್ನು ಸ್ಪಷ್ಟ ಪಡಿಸುವ ಅಮಾನ್‌ನ ಕರಾರುಗಳು.
2. ವಿಶ್ವಸ್ಥ ಕರಾರುಗಳು ಅಥವಾ ಅಮಾನ್ ಹ್ಯಾಂಡ್ ಕರಾರುಗಳು.
3. ಸಮಾಲೋಚನಾ ಕರಾರುಗಳು ಅಥವಾ ಮುಸಾವಮ ಕರಾರು.

ಹೀಗೆ ಇಸ್ಲಾಮಿಕ್ ಹಣಕಾಸು ವ್ಯವಹಾರಗಳನ್ನು ಮೂರಾಗಿ ವಿಂಡಿಸಬಹುದು.

ಅಮಾನ ಕರಾರುಗಳಲ್ಲಿ ಖರ್ಚು ಮತ್ತು ಲಾಭಗಳನ್ನು ಸ್ಪಷ್ಟ ಪಡಿಸಲಾಗುವುದು. ಅದಕ್ಕೆ ಮುರಾಬಹ ಕರಾರು ಒಂದು ಉದಾಹರಣೆಯಾಗಿದೆ. ಇದರಲ್ಲಿ ಖರ್ಚು ಮತ್ತು ನಿಗದಿತ ಲಾಭವನ್ನು ಮೊದಲೇ ನಿಶ್ಚಯಿಸಿ ವ್ಯವಹಾರವನ್ನು ನಡೆಸಲಾಗುತ್ತದೆ. ಬ್ಯಾಂಕ್‌ನ ಖರ್ಚು ಯಾವುದಾದರೂ ವಿಧದಲ್ಲಿ ಕಡಿಮೆಯಾದರೆ ಅದರ ಲಾಭ ವ್ಯವಹಾರಸ್ಥರಿಗೆ ಲಭಿಸುತ್ತದೆ.

ಅಮಾನ ಹ್ಯಾಂಡ್ ಕರಾರುಗಳಲ್ಲಿ ಠೇವಣಿದಾರರು ಮ್ಯಾನೇಜರ್/ಸಂಸ್ಥೆಗೆ ತೀರ್ಮಾನ ಕೈಗೊಳ್ಳುವ ಹೊಣೆ ನೀಡುತ್ತಾರೆ. ಮ್ಯಾನೇಜರ್ ಮಾಲಿಕರಿಗಾಗಿ ಠೇವಣಿಗೆ ಸಂಬಂಧಿಸಿದ ನಿರ್ಧಾರವನ್ನು ಕೈಗೊಳ್ಳುತ್ತಾನೆ. ಲಾಭದಲ್ಲಿ ಪಾಲು ಮ್ಯಾನೇಜ್‌ಮೆಂಟ್‌ಗೆ ಲಭಿಸುವುದಾದರೂ ಮಾರುಕಟ್ಟೆಯ ಏರುಪೇರಿಂದ ಉಂಟಾಗುವ ನಷ್ಟವನ್ನು ಮ್ಯಾನೇಜ್‌ಮೆಂಟ್‌ಗೆ ಈಡುಗೊಳಿಸುವುದಿಲ್ಲ.

ಮುಸಾವಮ ಕರಾರುಗಳಲ್ಲಿ ಸಂಬಂಧಿತ ವ್ಯವಸ್ಥೆಯನ್ನು ಚರ್ಚಿಸಿ ಸಮಾಲೋಚನೆಯ ಮೂಲಕ ನಿರ್ಧರಿಸಲಾಗುತ್ತದೆ. ಇದಕ್ಕೆ ಮುರಾಬಹದಲ್ಲಿ ಲಾಭವನ್ನು ನಿರ್ಣಸುವುದು ಮತ್ತು ಮುಷಾರಕ, ಮುದಾರಬಗಳಲ್ಲಿ ಲಾಭವನ್ನು ವಿತರಿಸುವ ಅನುಪಾತವನ್ನು ನಿರ್ಣಯಿಸುವುದು ಉದಾಹರಣೆಗಳಾಗಿವೆ.

### ಇಸ್ಲಾಮಿಕ್ ಸಾಲಪತ್ರ

ಸಂಪನ್ಮೂಲಗಳನ್ನು ಹಣಕಾಸು ವಿನಿಮಯದ ಆಸ್ತಿಗಳನ್ನಾಗಿ ಪರಿವರ್ತಿಸಿ ಮಾರುಕಟ್ಟೆಯಲ್ಲಿ ವಿನಿಮಯ ನಡೆಸುವುದನ್ನು 'ಸಾಲಪತ್ರ' ಮಾಡುವುದರ ಮೂಲಕ ಉದ್ದೇಶಿಸಲಾಗುತ್ತದೆ. ಶರೀಅತ್ ಇಂತಹ ವಿನಿಮಯಗಳಿಗೆ ಅನುಮತಿಯನ್ನು ನೀಡಿದೆ. ಇದಕ್ಕೆ ಪರಂಪರಾಗತ ಗ್ರಂಥಗಳಲ್ಲಿರುವ ಸಾಕಷ್ಟು ಘಟನೆಗಳ ಉದಾಹರಣೆ ನೀಡಬಹುದಾಗಿದೆ. ಸಾಲವನ್ನು ಬರೆದಿಡುವುದರ ಮಹತ್ವವನ್ನು ಪವಿತ್ರ ಕುರ್‌ಆನ್ ವಿವರಿಸಿದೆಯಷ್ಟೇ (2:282) ಒಡೆತನದ ಹಕ್ಕನ್ನು ತೋರಿಸಿ ಬರೆಯಲಾದ ಪುರಾವೆಗಳು ಸಾಲ ಪತ್ರವಾಗಿವೆ. ಸೊತ್ತುಗಳು, ಆಸ್ತಿಗಳು, ಸರಕುಗಳು, ಬೌದ್ಧಿಕ ಒಡೆತನದ ಹಕ್ಕು (Patent), ರಾಯಲ್ಟಿಗಳು ವಸ್ತುಗಳ ಬಳಕೆ ಸಾಲಗಳು, ಹಣ ಮುಂತಾದವುಗಳನ್ನು ಸಾಲ ಪತ್ರ ಮಾಡಬಹುದಾಗಿದೆ. ಇದರ ವ್ಯಾಪಾರದಲ್ಲಿ ಪಾಲಿಸ ಬೇಕಾದ ತತ್ವಗಳನ್ನು ವ್ಯಾಪಾರ (ಬೈಅ್) ಹಣದ ಹಸ್ತಾಂತರ (ಸ್ವರ್ಫ್) ಸ್ಥಾನಾಂತರ (ಹವಾಲ)ಗಳದ್ದಾಗಿದೆ.

ಸೊತ್ತುಗಳು, ವಸ್ತುಗಳು ಮುಂತಾದವುಗಳನ್ನು ಮಾರಲು ಶರೀಅತ್ ಅನುಮತಿಸಿದೆಯಷ್ಟೇ. ಆದರೆ ಹಣ ವನ್ನು ಹಸ್ತಾಂತರಿಸಬೇಕು. ಸಮಾನ ಕರೆನ್ಸಿಯೇ ಆಗಬೇಕಾಗಿದೆ. ಹಣ ಮುಖ ಬೆಲೆಗೆ ಹಸ್ತಾಂತರ ನಡೆಯ ಬೇಕಾಗಿದೆ. ಹೆಚ್ಚು ತೆಗೆಯುವುದು, ಕಡಿಮೆ ಮಾಡುವುದು, ಭವಿಷ್ಯದಲ್ಲಿ ನೀಡುವುದನ್ನೆಲ್ಲ ನಿಷೇಧಿಸಲಾಗಿದೆ. ಹಣ ವಿನಿಯೋಗದಲ್ಲಿ ಎರಡು ವಿಚಾರವನ್ನು ಗಮನಿಸಬೇಕಾಗಿದೆ. ಹಸ್ತಾಂತರಿಸಲಾಗುವ ಕರೆನ್ಸಿಗಳನ್ನು ಸಂಪೂರ್ಣ ವಾಗಿ ಹಸ್ತಾಂತರಿಸಬೇಕು. ಕರಾರು ನಡೆಸುವ ಸಮಯದಲ್ಲಿಯೇ ವಿನಿಮಯ ನಡೆಯಬೇಕಾಗಿದೆ. ಸಮಯಕ್ಕೆ ತಕ್ಕಂತೆ ಬೆಲೆಯಲ್ಲಿ ವ್ಯತ್ಯಾಸಗೊಂಡರೆ ಅದು ಬಡ್ಡಿಯಾಯಿತು. ಕೆಲವು ಸಂದರ್ಭಗಳಲ್ಲಿ ಹಸ್ತಾಂತರಕ್ಕಿರುವ ವಸ್ತುಗಳು ಹಣ, ಸೊತ್ತುಗಳು, ಬೌದ್ಧಿಕ ಒಡೆತನದ ಹಕ್ಕು ಮುಂತಾದುವುಗಳು ಅಡಕವಾಗಿರಬಹುದು. ಇಲ್ಲಿ ಯಾವ ಗುಣದಲ್ಲಿರುವುದು ಹೆಚ್ಚು ಇದೆಯೋ ಅದರ ನಿಯಮವನ್ನೇ (Rule of Mejority) ಸ್ವೀಕರಿಸಬೇಕಾಗಿದೆ. ಸೊತ್ತು ಮತ್ತು ಇತರ ಆಸ್ತಿಗಳೇ ಹೆಚ್ಚಾಗಿದ್ದರೆ ಬೆಲೆಯನ್ನು ಚರ್ಚೆಯ ಮೂಲಕ ನಿರ್ಧರಿಸ ಬೇಕಾಗಿದೆ. ಹಣವನ್ನು ತಕ್ಷಣ ಅಥವಾ ನಂತರವೋ ನೀಡಬಹುದಾಗಿದೆ. ಹಣವೇ ಹೆಚ್ಚಾದರೆ ಮುಖ ಬೆಲೆಯನ್ನು ಪರಿಗಣಿಸಬೇಕಾಗಿದೆ. ಸಾಲಪತ್ರಗಳು, ಆಸ್ತಿಗಳ ಹಣಕಾಸು ವಿನಿಮಯವನ್ನು ಪ್ರತಿನಿಧಿಸುತ್ತದೆ ಎಂಬುದು ವಿಶೇಷತೆಯಾಗಿದೆ. ಆಸ್ತಿಗಳ ಹಸ್ತಾಂತರಕ್ಕೆ ಇಲ್ಲಿ ನಿಯಮಗಳು ಬಾಧಕವಾಗಿವೆ. ಸಾಲಪತ್ರಗಳು ಪ್ರತಿನಿಧಿಸುವ ಮುಸ್ತವಿನ ಮುಖ ಪರದೆಯಾಗಿದೆ ಎಂಬುದು ಇಸ್ಲಾಮೀ ದೃಷ್ಟಿಕೋನವಾಗಿದೆ. ಆದುದರಿಂದ ಯಾವುದೇ ವಸ್ತುಗಳನ್ನು ಸಾಲಪತ್ರ ಮಾಡಿ ಹಸ್ತಾಂತರಿಸಬಹುದಾಗಿದೆ.

# ಪರ್ದಾ ಧರಿಸೋದು ದೇಹಕ್ಕೆ, ಬುದ್ಧಿಗಲ್ಲ

ಮಹಿಳಾ ವೇದಿಕೆ

ಶಾಹೀನ್, ಮಾನ್ವಿ

ಇಂದು ಮಹಿಳೆಯು ಪ್ರಗತಿಯ ಉತ್ತುಂಗಕ್ಕೇರಿದ್ದಾಳೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಅದ್ಭುತ ಸಾಧನೆಯನ್ನು ಮಾಡುತ್ತಿದ್ದಾಳೆ. ಶಿಕ್ಷಣ ಕ್ಷೇತ್ರ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಾರ್ವಜನಿಕ ರಂಗ, ಸಮಾಜಸೇವಾ ರಂಗ ಹೀಗೆ ಎಲ್ಲಾ ಕ್ಷೇತ್ರದಲ್ಲಿಯೂ ಮುಂದುವರೆಯುತ್ತಿದ್ದಾಳೆ.

ಆದರೂ ಮಹಿಳೆಯರು ಇಂದಿಗೂ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡಿರುವುದನ್ನು ಕಾಣಬಹುದಾಗಿದೆ. ಮಹಿಳೆಯರ ಶೋಷಣೆ, ದಬ್ಬಾಳಿಕೆ, ಅನ್ಯಾಯದ ಕಥೆ ಮಾನವ ಕುಲದ ಇತಿಹಾಸದಷ್ಟೇ ಪುರಾತನವಾದುವು. 21ನೇ ಶತಮಾನದಲ್ಲಿಯೂ ಹಲವಾರು ರೀತಿಯಲ್ಲಿ ಹಿಂಸೆ, ಅನ್ಯಾಯ, ದೌರ್ಜನ್ಯಗಳನ್ನು ಮಹಿಳೆ ಸಹಿಸಬೇಕಾಗಿದೆ.

ಜಾಗತೀಕರಣದ ಮೊದಲ ಬಲಿಪಶುವೇ ಸ್ತ್ರೀ ಆಗಿದ್ದು, ಮಾರುಕಟ್ಟೆಯ ಅಭಿವೃದ್ಧಿಗಾಗಿ ಸ್ವಂತ ಲಾಭಕ್ಕಾಗಿ ಉದ್ಯಮಿಗಳು ಮಹಿಳೆಯ ಮಾನವನ್ನು ಫೋಕಸ್ ಮಾಡಿದ್ದಾರೆ. ಪಾಶ್ಚಾತ್ಯರ ಗಾಳಿಗೆ ಭಾರತೀಯ ವಸ್ತ್ರ ತತ್ತರಿಸಿ ಹೋಗುತ್ತಿದೆ. ಅಶ್ಲೀಲತೆಯು ಎಲ್ಲಾ ಕಡೆ ಹರಡಿರುವಾಗ ಮಹಿಳೆಯರ ಸಂರಕ್ಷಣೆ ಮತ್ತು ಗೌರವದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾಗುತ್ತದೆ.

ಅಭಿವೃದ್ಧಿಯತ್ತ ಸಾಗುತ್ತಿರುವ ಈ ಆಧುನಿಕ ಸಮಾಜದಲ್ಲಿ ನಾವು ಮಹಿಳಾ ದೌರ್ಜನ್ಯದ ನಾನಾ ಮುಖಗಳನ್ನು ಕಾಣಬಹುದು. ವರದಕ್ಷಿಣೆ, ಚುಡಾಯಿಸುವಿಕೆ, ಅತ್ಯಾಚಾರ ಸಹೋದ್ಯೋಗಿಗಳಿಂದ ಲೈಂಗಿಕ ಕಿರುಕುಳ, ವೇತನದಲ್ಲಿ ಅಸಮಾನತೆ ವೇಶ್ಯಾವಾಟಿಕೆ, ಅನಕ್ಷರತೆ, ಅಜ್ಞಾನ, ಮೂಢ ನಂಬಿಕೆ ಮುಂತಾದ ಸಮಸ್ಯೆಗಳನ್ನು ಮಹಿಳೆಯು ಎದುರಿಸುತ್ತಿದ್ದಾಳೆ.

ಕೇವಲ ಭಾರತದಲ್ಲಿ ವರ್ಷಕ್ಕೆ 2 ಲಕ್ಷ ಹೆಣ್ಣು ಭ್ರೂಣಹತ್ಯೆಯಾಗುತ್ತಿದೆ ಎಂದು ಇಂಡಿಯನ್ ಮೆಡಿಕಲ್ ಅಸೋಶಿಯನ್ ಮತ್ತು ಯೂನಿಸೆಫ್ ಸಂಸ್ಥೆ ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಮ್ಮೇಳನವೊಂದರಲ್ಲಿ ತಿಳಿಸಿತ್ತು.

ದೆಹಲಿಯ ಒನ್ ಪೀಪಲ್ ಒನ್ ಇಂಡಿಯಾ ಪತ್ರಿಕೆಯ ವರದಿಯಂತೆ ಭಾರತದಲ್ಲಿ ಪ್ರತಿ 26 ನಿಮಿಷಕ್ಕೆ ಓರ್ವ ಮಹಿಳೆ ದೈಹಿಕ ಹಲ್ಲೆಗೊಳಗಾಗುತ್ತಿದ್ದಾಳೆ. ಪ್ರತಿ 54 ನಿಮಿಷಕ್ಕೆ ಓರ್ವಳ ಮಾನಭಂಗ ನಡೆಯುತ್ತದೆ. ಪ್ರತಿ 50 ನಿಮಿಷಕ್ಕೆ ಓರ್ವಳನ್ನು ಚುಡಾಯಿಸಲಾಗುತ್ತದೆ. ಪ್ರತಿ 16 ಗಂಟೆಗೆ ಓರ್ವ ವಿವಾಹಿತೆಯ ವರದಕ್ಷಿಣೆ ಸಾವು ನಡೆಯುತ್ತದೆ. ಸರಕಾರಿ ವರದಿ ಪ್ರಕಾರ ದೇಶದಲ್ಲಿ 5 ಲಕ್ಷಕ್ಕೂ ಮಿಕ್ಕಿದ ಬಾಲಕಿಯರು ವೇಶ್ಯಾವಾಟಿಕೆಗೆ ತಳ್ಳಲ್ಪಟ್ಟಿದ್ದಾರೆ. ರಾಜಸ್ತಾನ, ಮಧ್ಯಪ್ರದೇಶ, ಬಿಹಾರದ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಮಹಿಳೆಯರ ಮಾರಾಟ ನಡೆಯುತ್ತಿದೆ. ಮಹಿಳೆಯರ ಶಿಕ್ಷಣ ಶೇ. 40 ದಾಟಿಲ್ಲ. ಈ ಎಲ್ಲಾ ಕ್ರೌರ್ಯವು "ಎಲ್ಲಿ ಸ್ತ್ರೀಯರಿಗೆ ಯೋಗ್ಯ ಸ್ಥಾನವಿದೆಯೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ" ಎಂದು ಹಾಡಿ ಹೊಗಳುವ ನಮ್ಮ ದೇಶದಲ್ಲೇ ನಡೆಯುತ್ತಿದೆ.



ಇಸ್ಲಾಮ್ ಮಹಿಳೆಗೆ ನೀಡಿರುವ ಸ್ಥಾನಮಾನ ಎಂತಹುದು ಎಂಬುದನ್ನು ತಿಳಿಯಬೇಕಾದುದು ಅತ್ಯವಶ್ಯಕವಾಗಿದೆ. 1,400 ವರ್ಷಗಳ ಹಿಂದೆ ಸೌದಿ ಅರೇಬಿಯಾದಲ್ಲೂ ಹಲವಾರು ಕೆಡುಕುಗಳಿದ್ದವು. ಬೇರೆ ಬೇರೆ ದೇಶಗಳಲ್ಲಿದ್ದಂತೆ ಅಲ್ಲಿಯೂ ಸ್ತ್ರೀಯ ಜೊತೆ ಮನಬಂದಂತೆ ವರ್ತಿಸಲಾಗುತ್ತಿತ್ತು. ಸ್ತ್ರೀಗೆ ಯಾವುದೇ ಸ್ಥಾನವಿರದ ಆ ಪ್ರದೇಶದಲ್ಲಿ ಪ್ರವಾದಿ ಮುಹಮ್ಮದ್‌ರು(ಸ) ಏಕದೇವನ ಸಂದೇಶವನ್ನು ಸಾರಿದರಲ್ಲದೆ ಹಲವಾರು ಸಮಸ್ಯೆಗಳಲ್ಲಿ ಸಿಲುಕಿದ್ದ ಮಹಿಳೆಗೆ ವಿಮೋಚಕರಾಗಿ ಬಂದರು.

ಇಸ್ಲಾಮ್ ಪೂರ್ವದಲ್ಲಿ ಅರೇಬಿಯಾದಲ್ಲಿ ಹೆಣ್ಣು ಮಗು ಹುಟ್ಟಿದರೆ ಅಪಮಾನಕರವೆಂದು ಭಾವಿಸಿ, ಆ ಮಗುವನ್ನು ಜೀವಂತವಾಗಿ ಮಣ್ಣಿನಲ್ಲಿ ಹೂಳಲಾಗುತ್ತಿತ್ತು. ಇಂದು ನಾವು ಆಧುನಿಕ ಜಗತ್ತಿನಲ್ಲಿದ್ದೇವೆ. ಮುಂದುವರಿದ ಕಾಲದಲ್ಲಿ ಮಗು ಹುಟ್ಟುವ ವರೆಗೆ ಕಾಯಬೇಕಾಗಿಲ್ಲ, ಹೊಟ್ಟೆಯಲ್ಲಿಯೇ ಮಗುವಿನ ಲಿಂಗ ಪತ್ತೆ ಹಚ್ಚಿ ಸಾಯಿಸಲಾಗುತ್ತದೆ.

ಅರೇಬಿಯಾದ ಆ ಕ್ರೂರಿ ಜನರನ್ನು ಕುರ್‌ಆನಿನ ಒಂದು ವಾಕ್ಯವು ಆಮೂಲಾಗ್ರ ಬದಲಾಯಿಸಿತು.

"ಆ ದಿನ ಜೀವಂತ ಹೂಳಲ್ಪಟ್ಟ ಮಗುವಿನೊಂದಿಗೆ ಯಾವ ಅಪರಾಧಕ್ಕಾಗಿ ನಿನ್ನನ್ನು ಕೊಲ್ಲಲಾಯಿತು ಎಂದು ಪ್ರಶ್ನಿಸಲಾಗುವುದು" ಎಂದಿತು.

ಕುರ್‌ಆನ್ ಕರ್ಮ ಮತ್ತು ಮರಣಾನಂತರ ಪ್ರತಿಫಲದ ವಿಚಾರದಲ್ಲಿಯೂ ಸ್ತ್ರೀ ಪುರುಷರಲ್ಲಿ ಭೇದ ಕಲ್ಪಿಸುವುದಿಲ್ಲ. "ಸ್ತ್ರೀ ಪುರುಷರ ಕರ್ಮಗಳನ್ನು ನಾವು ವ್ಯರ್ಥಗೊಳಿಸುವುದಿಲ್ಲ" (3: 195)

ಕುರ್‌ಆನ್ ಸ್ತ್ರೀಗೆ ತಂದೆಯ ಆಸ್ತಿಯಲ್ಲಿ ಹಕ್ಕನ್ನು ನೀಡಿ ಗೌರವಿಸಿತು. ಅತ್ಯಂತ ಸುಸಂಸ್ಕೃತವೆನ್ನಲಾಗಿರುವ ಯೂರೋಪಿನಲ್ಲಿ 1922ರ ತನಕವೂ ವಿವಾಹಿತ ಮಹಿಳೆಗೆ ಆಸ್ತಿಯ ಮಾಲಕತ್ವ ಇರಲಿಲ್ಲ. ಭಾರತದಲ್ಲೂ ಹಿಂದೂ ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕುಗಳು ಇತ್ತೀಚೆಗೆ ದೊರೆತವು. ತನಗೆ ಇಷ್ಟವಿಲ್ಲದ ಪತಿಯಿಂದ ವಿಚ್ಛೇದನ ಪಡೆಯುವ ಹಕ್ಕನ್ನು ಕುರ್‌ಆನ್ ನೀಡಿತು. ವರದಕ್ಷಿಣೆಯ ಬದಲಾಗಿ ವಿವಾಹಧನವನ್ನು ವಧುವಿಗೆ ನೀಡುವುದನ್ನು ಕುರ್‌ಆನ್ ಕಡ್ಡಾಯಗೊಳಿಸಿತು.

ಕುರ್‌ಆನ್ ಮಹಿಳೆಗೆ ಎಷ್ಟು ಪ್ರಾಶಸ್ತ್ಯ ನೀಡಿದೆಯೆಂದರೆ ಅದರಲ್ಲಿ ಮಹಿಳೆಯರ ಹಕ್ಕು ಬಾಧ್ಯತೆ, ಸ್ಥಾನಮಾನಗಳ ವಿವರಣೆಯುಳ್ಳ ಒಂದು ಅಧ್ಯಾಯವೇ ಅವತರಿಸಲ್ಪಟ್ಟಿದೆ.

ಇಸ್ಲಾಮಿನಲ್ಲಿ ಮಹಿಳೆಗೆ ಪರ್ದಾವನ್ನು ಕಡ್ಡಾಯ ಮಾಡಿರುವ ಮೂಲಕ ಮಹಿಳೆಗೆ ಸಂರಕ್ಷಣೆ, ಗೌರವವನ್ನು ನೀಡಲಾಗಿದೆ. ಪವಿತ್ರ ಕುರ್‌ಆನಿನಲ್ಲಿ ಪರ್ದಾದ ಆದೇಶದೊಂದಿಗೆ ಪರ್ದಾದ ಕಾರಣವನ್ನು ನೀವು ಸತಾಯಿಸಲ್ಪಡದಿರಲು ಎಂದು ಹೇಳಲಾಗಿದೆ. ಪರ್ದಾದ ಆಚರಣೆಯು ದೇಹದಲ್ಲಿ ಇರುತ್ತದೆಯೇ ಹೊರತು ಬುದ್ಧಿಯ ಮೇಲಲ್ಲ. ಆದ್ದರಿಂದ ಪ್ರಗತಿಗೆ, ಮಹಿಳಾ ಅಭಿವೃದ್ಧಿಗೆ ಪರ್ದಾ ಪೂರಕವಾಗಿದೆಯೇ ಹೊರತು ಮಾರಕವಲ್ಲವೆಂಬುದನ್ನು ಮನಗಾಣಬೇಕು. ಮಹಿಳೆಯರ ಪ್ರಸಕ್ತ ಸಮಸ್ಯೆ ಕೇವಲ ಸ್ತ್ರೀ ಪುರುಷರ ಸಮಾನತೆಯ ಕಲ್ಪನೆಯಿಂದ ಕೊನೆಗೊಳ್ಳದು. ಇದಕ್ಕಾಗಿ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ.

ಪ್ರತಿ ಮಹಿಳೆಯು ತನ್ನ ತಾಯ್ತನದ ಹಕ್ಕನ್ನು ಬಳಸಿ ಪುರುಷರನ್ನು, ಒಳ್ಳೆಯ ಸಂಸ್ಕಾರ ನೀಡಿ ಮಹಿಳೆಯರನ್ನು ಗೌರವಿಸುವ ಮನೋಭಾವನೆ ಮೂಡಿಸಬೇಕು.

ಮಹಿಳೆಯ ವಿರುದ್ಧ ಆಗುವ ಹಿಂಸೆ, ಅತ್ಯಾಚಾರಗಳಲ್ಲಿ, ಅನ್ಯಾಯಗಳಲ್ಲಿ ಸ್ತ್ರೀಯರು ಪ್ರಮುಖ ಪಾತ್ರವನ್ನು ಹೊಂದಿರುತ್ತಾರೆ. ಮಹಿಳೆ ಇನ್ನೊಬ್ಬ ಮಹಿಳೆಯ ನೋವನ್ನು ಅರಿಯದಿರುವುದು ದುರದೃಷ್ಟಕರ. ಮಹಿಳಾ ಸಮಸ್ಯೆ ಕಡಿಮೆಯಾಗಬೇಕಾದರೆ ಮೊದಲು ಮಹಿಳೆ ಇತರ ಮಹಿಳೆಯರ ಮೇಲೆ ಮಾಡುವ ಅನ್ಯಾಯ, ಹಿಂಸೆ, ಅತ್ಯಾಚಾರ ನಿಲ್ಲಿಸಬೇಕು.

# ಹೆಣ್ಣಿಗೂ ಗಂಡಿನಂತೆ ಹಕ್ಕಿದೆ

ಕುಟುಂಬ ಒಂದು ಅಧ್ಯಯನ-22

ಡಾ। ಎಫ್.ಆರ್. ಫರೀದಿ

ಇಸ್ಲಾಮನ್ನು ಬಿಟ್ಟರೆ ವಿಶ್ವದಲ್ಲಿರುವ ಇತರ ಎಲ್ಲ ನಾಗರಿಕ ವ್ಯವಸ್ಥೆಗಳು ಕುಫ್ರ್ (ಏಕದೇವ ನಿಷೇಧಿ) ಮತ್ತು ಶಿರ್ಕ್(ಬಹುದೇವ ವಾದಿ) ಆಧಾರಿತವಾಗಿದೆ. ಇದೇ ಕಾರಣದಿಂದಾಗಿ, ಅವೆಲ್ಲವೂ ಮಾನವನನ್ನು ಜಾತಿ, ಜನಾಂಗ, ಪಂಗಡ, ಗೋತ್ರ, ಬಣ್ಣ, ಭಾಷೆ ಮತ್ತು ಲಿಂಗಾಧಾರಿತವಾಗಿ ಹಂಚಿವೆ. ಈ ವಿಗಂಡನೆಯನ್ನು ಆಧಾರವಾಗಿಟ್ಟು ಈ ನಾಗರಿಕತೆಗಳು ಅದರಲ್ಲೂ ವಿಶೇಷವಾಗಿ ಪಾಶ್ಚಾತ್ಯ ನಾಗರಿಕತೆಯು ಹಕ್ಕು ಮತ್ತು ಕರ್ತವ್ಯವನ್ನು ನಿರ್ಧರಿಸಿವೆ. ಈ ಕಾಲ್ಪನಿಕ ಮತ್ತು ಅಪ್ರಾಕೃತಿಕ ವಿಭಜನೆಯನ್ನು ತನ್ನ ಸಾಮಾಜಿಕ ವ್ಯವಸ್ಥೆಯಲ್ಲಿ ಅದು ಪರಸ್ಪರ ವಿರುದ್ಧ ಉದ್ದೇಶಗಳಿಗಾಗಿ ಪ್ರಯೋಗಿಸುವ ಕಾರ್ಯಕ್ರಮ ಮತ್ತು ನೀತಿಯನ್ನು ರೂಪಿಸಿತು. ಒಂದೆಡೆಯಲ್ಲಿ, ಈ ವಿಭಜನೆಯನ್ನು ಪಾಶ್ಚಾತ್ಯ ನಾಗರಿಕತೆ ಸುದೃಢಗೊಳಿಸಿತು ಮತ್ತು ಅದರಿಂದ ಉತ್ಪತ್ತಿಯಾದ ಸಮಸ್ಯೆಯ ನಿವಾರಣೆಗಾಗಿ ಅದು ಹಕ್ಕು ಮತ್ತು ಕರ್ತವ್ಯಗಳ ಯುದ್ಧವನ್ನು ಪ್ರಾಯೋಜಿಸಿದೆ ಮತ್ತು ಪ್ರತಿಯೊಂದು ವಿಭಜಿತ ಪಂಗಡಗಳನ್ನು ಪರಸ್ಪರ ಯುದ್ಧಗ್ರಸ್ತವಾಗಿರುವ ಪಂಗಡಗಳಲ್ಲಿ ಹಂಚಿದವು.

ಜಗತ್ತಿನಲ್ಲಿ ಈ ವಿಭಜನೆ ಜಾಲಕ್ಕೆ ಗಂಡು ಹೆಣ್ಣುಗಳ ವಿಭಜನೆಯೆಂಬುದು ಅತಿ ಹೆಚ್ಚು ಬಲಿಯಾಗಿದೆ. ಅದನ್ನೇ ಇನ್ನೊಂದು ರೀತಿಯಲ್ಲಿ ಲೈಂಗಿಕ ಪಕ್ಷಪಾತ ಅಥವಾ ಭೇದಭಾವ (Gender Disparity) ಎಂದು ಕರೆಯಲಾಗುತ್ತಿದೆ. ಈ ಹೆಸರೇ ಗಂಡು ಹೆಣ್ಣಿನ ಹಕ್ಕುಗಳ ಮೇಲೆ ಅನ್ಯಾಯವಾಗಿದೆ ಎಂಬುದನ್ನು ಸೂಚಿಸುತ್ತಿದೆ. ಈ ಅನ್ಯಾಯವನ್ನು ನಿವಾರಿಸುವುದಕ್ಕಾಗಿ, ಅವರ ಹಕ್ಕಿಗಾಗಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ. ಆಧುನಿಕ ಯುಗದ ನಾಗರಿಕತೆಗಳಿಗೆ ಹೋರಾಟವನ್ನು ಸದಾ ಊರ್ಜಿತದಲ್ಲಿಡುವುದು ಮುಖ್ಯ ಉದ್ದೇಶವಾಗಿದೆ. ಈ ಹೋರಾಟದಲ್ಲಿ ಹಕ್ಕನ್ನು ನಿರ್ಧರಿಸುವುದು ಪ್ರಮುಖವಾಗಿರುತ್ತದೆ ಮತ್ತು ಈ ಹಕ್ಕುಗಳನ್ನು ನಿರ್ಧರಿಸುವಾಗ ಕೆಲವು ಮಹತ್ವಪೂರ್ಣ ನಿಯಮಗಳು ನಿರ್ಲಕ್ಷ್ಯಕ್ಕೊಳಗಾಗುತ್ತವೆ.

ಮೊದಲನೆಯದಾಗಿ, ಹಕ್ಕನ್ನು ಹಂಚುವಾಗ ಪ್ರತಿಯೊಂದು ವರ್ಗದ ಪ್ರಾಕೃತಿಕ ಅರ್ಹತೆ ಮತ್ತು ಸಕ್ಷಮತೆಗಳು ಆಧಾರವಾಗಿರಬೇಕು. ಗಂಡು ಮತ್ತು ಹೆಣ್ಣಿನ ಯೋಗ್ಯತೆ ಮತ್ತು ಕ್ಷಮತೆಯಲ್ಲಿ ಯಾವುದೇ ಪರಿವರ್ತನೆ ಲೋಕಾಂತ್ಯದವರೆಗೂ ಅಸಾಧ್ಯವಾಗಿದೆ. ಇನ್ನೊಂದು ಮುಖ್ಯ ನಿಯಮವೆಂದರೆ ಹಕ್ಕು ಮತ್ತು ಕರ್ತವ್ಯಗಳೆರಡೂ ಒಂದು ಇನ್ನೊಂದರ ಸಹಯೋಗದಲ್ಲಿ ಪೂರ್ಣಗೊಳ್ಳುತ್ತವೆ. ಒಂದು ವೇಳೆ ಕೇವಲ ಕರ್ತವ್ಯದ ಸಹಾಯದಲ್ಲಿ ಸಮಾಜ ನಿರ್ಮಾಣಗೊಂಡರೆ ಅತ್ಯಾಚಾರ ಮತ್ತು ಶೋಷಣೆ ಜನ್ಮ ಪಡೆಯುತ್ತದೆ ಮತ್ತು ಒಂದು ವೇಳೆ ಕೇವಲ ಹಕ್ಕುಗಳ ಮೂಲಕ ಸಮಾಜ ನೆಟ್ಟಗೆ ನಿಂತರೆ ಅದಕ್ಕೆ ತನ್ನ ಉದ್ದೇಶವನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ಹಕ್ಕುಗಳ ಮೇಲೆ ಒತ್ತು ನೀಡಿದರೆ ಸ್ವಚ್ಛಂದತೆ ಮಿತಿಮೀರುತ್ತದೆ. ಜನರು ಕರ್ತವ್ಯವನ್ನೇ ಮರೆತು ಬಿಡುತ್ತಾರೆ. ನಿಯಮ, ಕಾನೂನುಗಳು,



ಮೌಲ್ಯಗಳನ್ನು ಲೆಕ್ಕಕ್ಕೆ ಇಡದೆ ಒಂದುಗೂಡಿ ಬದುಕುವುದನ್ನೇ ಮರೆತು ಬಿಡುತ್ತಾರೆ. ಇಂತಹ ಸಮಾಜದಲ್ಲಿ ವೈಯಕ್ತಿಕ ಮತ್ತು ಸಾಮಾಜಿಕ ಹೊಣೆಗಾರಿಕೆ ನಿರ್ಲಕ್ಷ್ಯಗಳೇ ಎದ್ದು ಕಾಣುತ್ತದೆ.

ಇಸ್ಲಾಮ್ ಎಂಬುದು ಲಿಂಗಾಧಾರಿತ ಭೇದ ಭಾವವನ್ನು ರದ್ದುಗೊಳಿಸಿದ ಒಂದು ಪ್ರಾಕೃತಿಕ ಧರ್ಮವಾಗಿದೆ. ಇದರ ಜೀವನದರ್ಶನದಂತೆ ಮಾನವತೆಯ ವಿಭಜನೆ ಜಗತ್ಪಾಲಕ ಪ್ರಭುವಾದ ದೇವನ ಇಚ್ಛೆಗೆ ವಿರುದ್ಧವಾದುದು. ಸಕಲ ಮಾನವರೂ ದೇವನ ದೃಷ್ಟಿಯಲ್ಲಿ ಸಮಾನ ಮಹತ್ವವಿರುವ ಗೌರವಪೂರ್ಣರು. ದೇವದತ್ತವಾದ ಗಾಳಿ, ನೀರು, ಆಹಾರ, ಸೂರ್ಯ, ಚಂದ್ರ, ನದಿ, ಹಳ್ಳ ಕೊಳ್ಳ ಪರ್ವತಗಳೆಲ್ಲದರಿಂದ ಪ್ರಯೋಜನ ಪಡೆಯುವ ಹಕ್ಕು ಜಗತ್ತಿನ ಎಲ್ಲ ಮಾನವರಿಗೂ ಇದೆ.

“ಅವನು ನಿಮ್ಮನ್ನು ಒಂದೇ ಜೀವದಿಂದ ಸೃಷ್ಟಿಸಿದನು ಮತ್ತು ಅದೇ ಜೀವದಿಂದ ಅದರ ಜೋಡಿಯನ್ನು ಉಂಟು ಮಾಡಿದನು” (7:189) ಎಂದು ಪವಿತ್ರ ಕುರ್‌ಆನ್ ಸಾರಿದೆ.

## ಬಾಲಪಂಕ್ತಿ



ಅಲಿಶಾ ಅನಮ್
ನೆಕ್ಕಿಲಾಡಿ



ಇದು ಪ್ರವಾದಿಯವರು(ಸ) ಹೇಳಿದ ಕಥೆ. ಪುರಾತನ ಕಾಲದಲ್ಲಿ ಓರ್ವ ವಿಗ್ರಹಾರಾಧಕನಾದ ರಾಜನಿದ್ದ. ಆತ ಆ ದೇಶದಲ್ಲಿ ಒಂದು ವಿಗ್ರಹವನ್ನು ಸ್ಥಾಪಿಸಿದ್ದ. ಅಲ್ಲಿಂದ ಹಾದು ಹೋಗುವವರು ಏನಾದರೂ ಬಲಿ ನೀಡಬೇಕಾದುದು ಅಲ್ಲಿಯ ನಿಯಮವಾಗಿತ್ತು.

ಹೀಗಿರುತ್ತಾ, ಒಮ್ಮೆ ಓರ್ವ ಅಲ್ಲಿಂದ ಹಾದು ಹೋಗುತ್ತಿದ್ದ. ಆತನಲ್ಲಿ ಬಲಿ ನೀಡುವ ಸಾಮರ್ಥ್ಯವಿರಲಿಲ್ಲ.

ಆದರೆ ಅಲ್ಲಿಯ ಅರ್ಚಕರು ನೀವು ಏನಾದರೂ ಬಲಿ ನೀಡದೆ ಇಲ್ಲಿಂದ ಹಾದು ಹೋಗಬಾರದು. ಹಾಗೆ ನೀಡುವುದು ತಮ್ಮ ನಂಬಿಕೆಗೆ ವಿರುದ್ಧವಾಗಿದೆಯೆಂದೂ ವಾದಿಸಿದ.

ಅದು ಸಾಧ್ಯವಿಲ್ಲ. ಒಂದು ನೊಣವನ್ನಾದರೂ ಬಲಿ ನೀಡಬೇಕು. ಇಲ್ಲದಿದ್ದರೆ ಕಠಿಣ ಶಿಕ್ಷೆಗೆ ಗುರಿಯಾಗಬೇಕಾದೀತು ಎಂದು ಅರ್ಚಕ ಗುಡುಗಿದ.

ಈ ಆದೇಶದಿಂದ ಆ ಯಾತ್ರಿಕ ವಿಚಲಿತನಾಗಲಿಲ್ಲ. ಅವನ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಅವನು ನಾನು ಯಾವ ಕಾರಣಕ್ಕೂ ಸತ್ಯದಿಂದ ಹಿಂದೆ ಸರಿಯಲಾರೆ. ನಾನು ವಿಗ್ರಹಕ್ಕೆ ಬಲಿ ನೀಡಲಾರೆ ಎಂದ.

ಬಳಿಕ ಆತನಿಗೆ ಮರಣ ದಂಡನೆಯನ್ನು ವಿಧಿಸಲಾಯಿತು.

ಈ ಕಥೆ ಹೇಳಿದ ಬಳಿಕ ಪ್ರವಾದಿಯವರು(ಸ)

# ಸ್ವರ್ಗ-ನರಕ

ಹೇಳುತ್ತಿದ್ದರು, ಕೇವಲ ಒಂದು ನೊಣದಿಂದಾಗಿ ಒಬ್ಬಾತ ಸ್ವರ್ಗಕ್ಕೆ ಅರ್ಹನಾದ. ಇನ್ನೋರ್ವ ನರಕಕ್ಕೂ ಅರ್ಹನಾದ. ಸತ್ಯಕ್ಕೆ ವಿರುದ್ಧ ವರ್ತಿಸಿದಾತ ನರಕಕ್ಕೂ ಸತ್ಯದಲ್ಲಿ ವಿಚಲಿತನಾಗದೆ ಅಚಂಚಲವಾಗಿ ನಿಂತಾತ ಸ್ವರ್ಗಕ್ಕೂ ಅರ್ಹನಾದ.

ಮಾಡಿದರೆ ಅದನ್ನು ಅಪರಾಧವಾಗಿ ಪರಿಗಣಿಸಬೇಕಾಗುತ್ತದೆ. ಏನಿಲ್ಲದಿದ್ದರೆ ಒಂದು ನೊಣವನ್ನಾದರೂ ಬಲಿ ನೀಡಬೇಕು ಎಂದರು.

ದಾರಿಹೋಕ ಒಪ್ಪಿದ. ಒಂದು ನೊಣವನ್ನು ಹಿಡಿದು ವಿಗ್ರಹಕ್ಕೆ ಬಲಿ ನೀಡಿದ. ಹಾಗೆಯೇ ಆತನನ್ನು ಬಿಟ್ಟು ಬಿಡಲಾಯಿತು.

ಇನ್ನೋರ್ವ ಪ್ರಯಾಣಿಕ ಆ ದಾರಿಯಾಗಿ ಬಂದ. ಆತ ಅಪ್ಪಟ ಏಕ ದೇವಾರಾಧಕ. ಅವನು ವಿಗ್ರಹಾರಾಧನೆ ಸಲ್ಲದೆಂದೂ ಅದಕ್ಕೆ ಬಲಿ

## ಇಸ್ಲಾಮೀ ಕ್ವಿಝ್

1. ಯುದ್ಧ ನಿಷಿದ್ಧವಾದ ನಾಲ್ಕು ತಿಂಗಳುಗಳು ಯಾವುವು?
ಮುಹರ್ರಮ್, ರಜಬ್, ದುಲ್‌ಹಜ್ಜ್, ದುಲ್‌ಕಅದ.
2. 'ಖುಲಫಾವುರ್ರಾಶಿದೀನ್' ಎಂದು ಕರೆಯಲ್ಪಡುವ ನಾಲ್ಕು ಖಲೀಫರು ಯಾರು?
ಅಬೂಬಕ್ಕರ್ ಸಿದ್ದೀಕ್(ರ), ಉಮರ್ ಬಿನ್ ಖತ್ತಾಬ್(ರ), ಉಸ್ಮಾನ್ ಬಿನ್ ಅಫ್ಫಾನ್(ರ), ಅಲಿ(ರ).
3. ಪ್ರವಾದಿ ಮುಹಮ್ಮದ್‌ರ(ಸ) ನಾಲ್ಕು ಪುತ್ರಿಯರ ಹೆಸರೇನು?
ಝೈನಬ್(ರ), ರುಕಿಯ್ಯ(ರ), ಉಮ್ಮು ಕುಲ್ಸೂಮ್(ರ), ಫಾತಿಮಾ(ರ).
4. ಕಪಟ ವಿಶ್ವಾಸದ ನಾಲ್ಕು ಲಕ್ಷಣಗಳು ಯಾವುವು?
ಮಾತನಾಡಿದರೆ ಸುಳ್ಳು ಹೇಳುವುದು, ವಂಚನೆ, ವಚನ ಭಂಗ, ಜಗಳಾಡಿದರೆ ಬಯ್ಯುವುದು.
5. ಸ್ವರ್ಗದ ನಾಲ್ಕು ಪಾನೀಯಗಳು ಯಾವುವು?
ನೀರು, ಹಾಲು, ಝುನ್‌ಜಬೀಲ್, ಶರಾಬುನ್ ತಹೂರ
6. ನಾಲ್ಕು ಇಮಾಮರ ಹೆಸರೇನು?
ಶಾಫಿಈ(ರ), ಅಬೂ ಹನೀಫ(ರ) ಹಂಬಲಿ(ರ), ಮಾಲಿಕ್(ರ).
7. ಪುನರುತ್ಥಾನ ದಿನದಂದು ವಿಚಾರಿಸಲ್ಪಡುವ ನಾಲ್ಕು ವಸ್ತುಗಳು?
ಆಯುಷ್ಯ, ಕರ್ಮ, ಶರೀರ, ಸಂಪತ್ತು.
8. 'ಇನ್ನಾ'ದಿಂದ ಆರಂಭವಾಗುವ ನಾಲ್ಕು ಸೂರಗಳು ಯಾವುವು?
ಅಲ್ ಕೌಸರ್, ಅಲ್ ಕದ್ರ್, ನೂಹ್, ಅಲ್‌ಫತಹ್
9. ಪ್ರವಾದಿ(ಸ) ಪುತ್ರಿ ಫಾತಿಮಾರ(ರ) ನಾಲ್ಕು ಉಪನಾಮಗಳು ಯಾವುವು?
ಝುಹ್ರಾ, ಬತೂಲ್, ಝಕಿಯ, ರಾಸಿಯ.

ಖತೀಜ ನುಸ್ರತ್, ಅಬುಧಾಬಿ

## ಲೋಕೋಕ್ತಿ – 6 ಇಸ್ಲಾಮಿನ ಸಂದೇಶ

ಮುಖ್ತಾರ್ ಅಹ್ಮದ್, ಪಾಣೆಮಂಗಳೂರು

| | |
|---|---|
| 1. Fruit laden trees always bend low. (Indian)<br>ಫಲಗಳಿಂದ ತುಂಬಿದ ವೃಕ್ಷಗಳು ಸದಾ ಬಾಗಿರುತ್ತವೆ. | ಉಮರ್(ರ) ಭಾಷಣ ಪೀಠದಿಂದ ಈ ರೀತಿ ಹೇಳಿದರು, "ಜನರೇ ವಿನಮ್ರತೆ ಪಾಲಿಸಿರಿ. ಏಕೆಂದರೆ ಪ್ರವಾದಿ(ಸ) ಈ ರೀತಿ ಹೇಳಿದ್ದಾರೆ– ಯಾರು ಅಲ್ಲಾಹನಿಗಾಗಿ ವಿನಮ್ರತೆ ಪಾಲಿಸುವನೋ ಅಲ್ಲಾಹನು ಆತನನ್ನು ದೊಡ್ಡವನನ್ನಾಗಿ ಮಾಡುವನು. ಆತ ಸ್ವಯಂ ತನ್ನನ್ನು ಚಿಕ್ಕವನಾಗಿ ಕಾಣುವನು. ಆದರೆ ಜನರ ದೃಷ್ಟಿಯಲ್ಲಿ ಆತ ದೊಡ್ಡವನಾಗಿರುವನು." (ಹದೀಸ್–ಬೈಹಕಿ) |
| 2. Curiosity killed the cat (American)<br>ಜಿಜ್ಞಾಸೆ (ಕುತೂಹಲ) ಅಪಾಯಕಾರಿಯಾಗಿದೆ. | ಪ್ರವಾದಿ(ಸ) ಹೇಳಿರುವರು,"ನೀವು ಜನರ ರಹಸ್ಯ ವಿಷಯಗಳನ್ನು ಕೆದಕ ಹೊರಟರೆ, ಅವರನ್ನು ಕೆರಳಿಸಬಹುದು ಅಥವಾ ಅವರನ್ನು ಕೆರಳುವಂತೆ ಮಾಡುವಿರಿ." (ಅಬೂದಾವೂದ್) |
| 3. Make thyself a sheep and the wolf is ready (Rasian)<br>ನಿನ್ನನ್ನು ನೀನು ಕುರಿಯಾಗಿಸು, ತೋಳ (ಆಕ್ರಮಣಕ್ಕೆ) ಸಿದ್ಧವಾಗಿದೆ. | ಪ್ರವಾದಿ(ಸ) ಹೇಳಿದ್ದಾರೆ, "ದೇವನ ದೃಷ್ಟಿಯಲ್ಲಿ ಬಲಶಾಲಿ ಆರಾಧಕ, ದುರ್ಬಲ ಆರಾಧಕನಿಗಿಂತ ಪ್ರಿಯನಾಗಿರುವನು. ಆದಾಗ್ಯೂ ಈರ್ವರಲ್ಲೂ ಒಳಿತಿದೆ." (ಮುಸ್ಲಿಮ್) |
| 4. It is easier to suppress the first desire than to satisfy all that follw it. (English)<br>ಪ್ರಥಮ ಇಚ್ಛೆಯನ್ನು ದಮನಿಸುವುದು ಅದರ ಬಳಿಕದ ಇಚ್ಛೆಗಳನ್ನು ದಮನಿಸುವ ಅಪೇಕ್ಷೆಗಿಂತ ಅಧಿಕ ಸುಲಭವಾಗಿದೆ. | "ತನ್ನ ಚಿತ್ತಾಕಾಂಕ್ಷೆಯನ್ನು ತನ್ನ ದೇವನಾಗಿ ಮಾಡಿಕೊಂಡಿರುವಾತನ ಸ್ಥಿತಿಯ ಬಗೆಗೆ ನೀವೆಂದಾದರೂ ವಿವೇಚಿಸಿದ್ದೀರಾ?"(ಪವಿತ್ರ ಕುರ್‌ಆನ್: 25:43) |
| 5. An optimist sees an opportunity in every calamitiy, A passimist sees a calamity in every opportunity (English)<br>ಪ್ರತಿಯೊಂದು ವಿಪತ್ತಿನಲ್ಲೂ ಆಶಾವಾದಿಗೆ ವಿಪತ್ತೇ ಕಾಣುತ್ತದೆ. ಅದರ ಫಲಗಳು ಸಿಹಿಯಾಗಿರುತ್ತವೆ. | ಪ್ರವಾದಿ(ಸ) ಹೇಳಿದರು, "ಕೆಟ್ಟ ಗುಮಾನಿ (ಮಿಥ್ಯ ಸಂದೇಹ) ಯಿಂದ ಪಾರಾಗಿ. ಏಕೆಂದರೆ ಅದು ಅತಿ ದೊಡ್ಡ ಸುಳ್ಳಾಗಿದೆ." (ಬುಖಾರಿ) |

## ಅರಬಿ ಸುಡೊಕು -58

**ಆಟದ ನಿಯಮ:**
**ಖಾಲಿ ಜಾಗದಲ್ಲಿ 'ا'ನಿಂದ 'ح'ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!**

| | | | | | |
|---|---|---|---|---|---|
| ب | ج | | | | ا |
| ث | | | | ج | |
| | | ث | ج | | |
| | | ج | ح | | |
| | ث | | | | ج |
| ج | | | | ب | ث |

**ಅರಬಿ ಸುಡೊಕು- 56ರ ಸರಿಯುತ್ತರ ಕಳುಹಿಸಿದವರು:**

**ಸುಮಯ್ಯ ಮರ್ಯಮ್**
8ನೇ ತರಗತಿ, ಸೈಂಟ್ ಜೆರೋಸಾ ಹೈಸ್ಕೂಲ್
ಮಂಗಳೂರು–1

**ಅರಬಿ ಸುಡೊಕು -56ರ ಉತ್ತರ**

| | | | | | |
|---|---|---|---|---|---|
| ت | ج | ث | ب | ا | ح |
| ا | ح | ب | ث | ت | ج |
| ح | ت | ج | ا | ث | ب |
| ث | ب | ا | ج | ح | ت |
| ج | ث | ح | ت | ب | ا |
| ب | ا | ت | ح | ج | ث |

ಮಕ್ಕಳೇ! ನೀವೂ **'ಅರಬಿ ಸುಡೊಕು'** ತುಂಬಿಸಿ ಸನ್ಮಾರ್ಗಕ್ಕೆ ಕಳುಹಿಸಬಹುದು. ಸರಿಯುತ್ತರ ಕಳುಹಿಸಿದವರ ಹೆಸರನ್ನು ಪ್ರಕಟಿಸಲಾಗುವುದು. ಒಂದಕ್ಕಿಂತ ಹೆಚ್ಚು ಸರಿ ಉತ್ತರ ಬಂದರೆ ಚೀಟಿ ಎತ್ತಲಾಗುವುದು. ಇದರಲ್ಲಿ ಬಹುಮಾನವಿಲ್ಲ ಮಕ್ಕಳೇ. ಆದರೆ ಯಾರದೇ ಸಹಾಯವಿಲ್ಲದೆ ನೀವಾಗಿಯೇ **'ಅರಬಿ ಸುಡೊಕು'** ತುಂಬಿಸಿದರೆ, ನೀವು ಬುದ್ಧಿವಂತರು ಎಂದು ಅರ್ಥ. ಹಾಗಾದರೆ ರೆಡೀನಾ? ನೀವು ಮಾಡಬೇಕಾದದ್ದಿಷ್ಟೇ, ಅರಬಿ ಸುಡೊಕು ತುಂಬಿಸಿದ ಮೇಲೆ (ಆಟದ ನಿಯಮ ನೋಡಿ) ನಿಮ್ಮ ಹೆಸರು, ತರಗತಿ, ಶಾಲೆ/ಮದ್ರಸಾ, ಊರು ಮತ್ತು ಪಿನ್‌ಕೋಡ್ ಸರಿಯಾಗಿ ಬರೆದು ಈ ಕೆಳಗಿನ ವಿಳಾಸಕ್ಕೆ ಒಂದು ವಾರದೊಳಗೆ ಕಳುಹಿಸಬೇಕು.

**ಅರಬಿ ಸುಡೊಕು- 58**
ಸಂಪಾದಕರು, ಸನ್ಮಾರ್ಗ ವಾರಪತ್ರಿಕೆ
ಅಂಚೆಪೆಟ್ಟಿಗೆ ನಂಬ್ರ - 16, ಮಂಗಳೂರು - 575001

# ಅಡ್ಡ ರೇಖೆ

ಕಥೆ

✍ ತೊಡಿಕಾನ ಅಬ್ದುಲ್ಲ

ಅದೊಂದು ಭಯಾನಕ ರಾತ್ರಿ.

ಅಂದು ಅಮಾವಾಸ್ಯೆಯಾದುದರಿಂದ ಬಾನಿನಲ್ಲಿ ಚಂದ್ರನಿರಲಿಲ್ಲ. ದಟ್ಟ ಮೋಡದ ಮುಸುಕಿನಲ್ಲಿ ತಾರೆಗಳೂ ಮಿನುಗುತ್ತಿರಲಿಲ್ಲ. ಇದ್ದಕ್ಕಿದ್ದಂತೆ ವಿದ್ಯುತ್ ಸರಬರಾಜು ನಿಂತು ಹೋಗಿತ್ತು. ದೂರದ ಸ್ಮಶಾನದಲ್ಲಿ ಸಿಡಿಯುವ ಕಿಡಿಯೆಬ್ಬಿಸಿ ಉರಿಯುತ್ತಿರುವ ಚಿತೆಯೊಂದರ ಬೆಂಕಿಯನ್ನು ಹೊರತು ಪಡಿಸಿ ಈಗ ಬೇರೆಲ್ಲೂ ಬೆಳಕಿರಲಿಲ್ಲ. ಕೊಳೆಗೇರಿಯಲ್ಲಿ ಸತ್ತು ಬಿದ್ದ ಅದಾವುದೋ ಅನಾಥ ಪ್ರಾಣಿಯ ಕೊಳೆತ ಶವಕ್ಕಾಗಿ ಕಚ್ಚಾಡುತ್ತಿದ್ದ ಬೀದಿ ನಾಯಿಗಳ ವಿಕಾರ ಊಳಿಡುವಿಕೆಯನ್ನು ಬಿಟ್ಟರೆ ಬೇರೆ ಸದ್ದು-ಗದ್ದಲಗಳೂ ಇರಲಿಲ್ಲ. ಇಡೀ ನಗರವೇ ಈಗ ಕರಾಳ ಕತ್ತಲ ಗರ್ಭದಲ್ಲಡಗಿ ನಿದ್ರಿಸುತ್ತಿತ್ತು. ಸುತ್ತಲ ಪರಿಸರ ಗಾಢ ನೀರವತೆಯಲ್ಲಿ ಮುಳುಗಿ ಭೀಕರವಾಗಿ ಭೀತಿ ಹುಟ್ಟಿಸುವಂತಿತ್ತು.

ಎಲ್ಲೆಡೆ ಗೂಡು ಕಟ್ಟುತ್ತಿರುವ ನಿಗೂಢತೆ. ಜನ ಜಂಗುಳಿಯಿಲ್ಲದೆ ಬಿಕೋ ಎನ್ನುತ್ತಿರುವ ಪಟ್ಟಣ... ಅಲ್ಲಲ್ಲಿ ಕಾವಲು ನಿಂತ ಶಸ್ತ್ರಧಾರಿ ಪೊಲೀಸರನ್ನು ಹೊರತುಪಡಿಸಿ ಬೀದಿಯಲ್ಲಿ ಈಗ ಬೇರೆ ಜನರಿರಲಿಲ್ಲ. ಆಗಾಗ ಆಚೀಚೆ ಓಡಾಡುವ ಪೊಲೀಸ್ ಜೀಪುಗಳ ವಿನಹ ಬೇರೆ ವಾಹನ ಸಂಚಾರವೂ ಇರಲಿಲ್ಲ. ಇಡೀ ನಗರವೇ ಸತ್ತು ಬಿದ್ದಂತೆ ನಿಶ್ಚಲವಾಗಿತ್ತು. ಅದಾವುದೋ ಅಪಾಯದ ಮುನ್ಸೂಚನೆಯನ್ನರಿತವರಂತೆ ನಗರದ ಸಹಸ್ರ ಸಹಸ್ರ ಸಂಖ್ಯೆಯ ಪ್ರಜೆಗಳೂ ತಂತಮ್ಮ ಮನೆಗಳೊಳಗೆ ಸೇರಿಕೊಂಡು ಭದ್ರವಾಗಿ ಬಾಗಿಲು ಮುಚ್ಚಿ ಕುಳಿತಿದ್ದರು. ಯಾವ ಕ್ಷಣದಲ್ಲಿ ಎಲ್ಲಿ ಏನಾಗುವುದೋ ಎಂಬ ಭಯ ಎಲ್ಲರನ್ನೂ ಕಾಡತೊಡಗಿತ್ತು.

ಸಮಯ ಸರಿಯುತ್ತಿತ್ತು. ಅದರೊಂದಿಗೆ ಬೆಳಕಿಲ್ಲದ, ಸದ್ದುಗದ್ದಲಗಳಿಲ್ಲದ ನಗರದ ಬಾಹ್ಯ ಯಥಾಸ್ಥಿತಿಯೂ ಯಾವುದೇ ಬದಲಾವಣೆಗೊಳಗಾಗದೆ ಮುಂದುವರಿಯುತ್ತಿತ್ತು. ಆದರೆ...

ಬಾಹ್ಯ ನೋಟಕ್ಕೆ ಇಡೀ ನಗರ ಸತ್ತಂತಿದ್ದರೂ ಆಂತರಿಕವಾಗಿ ಆ ಕರಾಳ ರಾತ್ರಿಯ ಕತ್ತಲ ಗರ್ಭದಲ್ಲಿ ನಗರದ ವಿವಿಧೆಡೆ ವಿಭಿನ್ನ ಚಟುವಟಿಕೆಗಳು ಸಜೀವವಾಗಿ ಮುಂದುವರಿಯುತ್ತಿದ್ದವು.

ಒಂದು ಕಡೆ ಶಸ್ತ್ರಧಾರಿ ಪೊಲೀಸರು ಕಣ್ಣಲ್ಲಿ ಕಣ್ಣಿಟ್ಟು ನಗರವನ್ನು ಕಾಯುತ್ತಿದ್ದರೆ ಇನ್ನೊಂದು ಕಡೆ ಕೆಲವು ಮಂದಿ ನಿಗೂಢ ವ್ಯಕ್ತಿಗಳು ಪೊಲೀಸರ ಚಲನವಲನಗಳನ್ನು ಗಮನಿಸುತ್ತಾ ಗಾಢ ಕತ್ತಲಲ್ಲಿ ಸದ್ದಿಲ್ಲದೆ ಸಂಚರಿಸುತ್ತಿದ್ದರು. ಮತ್ತೊಂದು ಕಡೆ ಅಮಾಯಕ ಪ್ರಜೆಗಳು ಯಾವ ಕ್ಷಣದಲ್ಲಿ ಎಂಥ ದಾರುಣ ಆಪತ್ತು ಬಂದೊದಗುವುದೋ ಎಂಬ ಭಯದಲ್ಲಿ ಮನೆಯ ನಾಲ್ಕು ಗೋಡೆಗಳ ನಡುವೆ ಕುಳಿತೋ, ಮಲಗಿಯೋ ಯಾವಾಗ ಬೆಳಗಾದೀತೆಂದು ಕಾಯುತ್ತಿದ್ದರು.

ಅದೇ ಸಮಯದಲ್ಲಿ ನಗರದ ಹೊರವಲಯದ ಮನೆಯೊಂದರಲ್ಲಿ ಪುಟ್ಟ ಬುಡ್ಡಿ ದೀಪವೊಂದು ಬೆಳಗುತ್ತಿತ್ತು. ಆ ದೀಪದ ಮಂದ ಬೆಳಕಿನಲ್ಲಿ ಕಲಾವಿದನೊಬ್ಬ ಕುಂಚ ಆಡಿಸುತ್ತಾ ಕುಳಿತಿದ್ದ.

❖ ❖ ❖

ನೀಲಿ ಬಣ್ಣದ ಕುಂಚ ಅದ್ದಿ ಬಿಳಿ ಹಾಳೆಯ ಮೇಲೆ ಕಲಾವಿದ ಒಂದು ಅಂಗಳದ ನಕ್ಷೆ ಬಿಡಿಸಿದ. ಆಮೇಲೆ ಆ ಅಂಗಳದ ನಡುವೆ ಅಕ್ಕಪಕ್ಕದಲ್ಲಿ ಹಸಿರು ಹಾಗೂ ಕೇಸರಿ ಬಣ್ಣಗಳನ್ನು ಬಳಸಿ ಎರಡು ಸುಂದರ ಭವನಗಳನ್ನು ಚಿತ್ರಿಸಿದ. ನಂತರ ಆ ಭವನಗಳ ಸುತ್ತಲ ಪರಿಸರವನ್ನು ವಿವಿಧ ಮರ,



ಬಳ್ಳಿ, ಫಲ-ಪುಷ್ಪಾದಿಗಳಿಂದ ಅಲಂಕರಿಸಿದ. ಕೊನೆಗೆ ಒಂದೇ ಅಂಗಳದಲ್ಲಿರುವ ಆ ಎರಡು ಭವನಗಳೂ ಪರಸ್ಪರ ಬೇರ್ಪಟ್ಟಿರುವಂತೆ ಅವುಗಳ ನಡುವೆ ಒಂದು ಕಪ್ಪು ಗೆರೆ ಎಳೆದು ಚಿತ್ರವನ್ನು ಪೂರ್ಣಗೊಳಿಸಿದ. ಆಗ ಅವನ ಪಕ್ಕದಲ್ಲೇ ಕುಳಿತು ಆ ಚಿತ್ರದ ಎದ್ದು ಕಾಣುವ ಕೊರತೆಯನ್ನು ಗಮನಿಸಿದ ಗೆಳತಿ ಹೇಳಿದಳು,

"ಪ್ರಿಯ ಸೋದರ, ಕೊನೆಯವರೆಗೂ ನಾನು ನಿನ್ನ ಸೋದರಿಯಾಗಿರಬೇಕೆಂದು ಬಯಸುವಿಯಾದರೆ ನೀನು ನಿನ್ನ ತಪ್ಪನ್ನು ತಕ್ಷಣ ತಿದ್ದಿಕೊಳ್ಳಬೇಕು."

ಕಲಾವಿದ ನಸು ನಕ್ಕು ಲೇಖನಿ ಎತ್ತಿಕೊಂಡ. ಆಮೇಲೆ ಚಿತ್ರದಲ್ಲಿದ್ದ ಒಂದು ಭವನದ ಕೆಳಗೆ ಅಣ್ಣನ ಮನೆ ಎಂದು ಬರೆದ. ಇನ್ನೊಂದರ ಕೆಳಗೆ ತಂಗಿಯ ಮನೆ ಎಂದು ಗುರುತಿಸಿದ. ನಂತರ ಹೇಳಿದ,

"ಪ್ರಿಯ ಸೋದರಿ ಎಲ್ಲರೂ ಒಡ ಹುಟ್ಟಿ ಅಣ್ಣ-ತಂಗಿಯರಾಗುತ್ತಾರೆ. ನಾವು ಒಡ ಹುಟ್ಟಿದವರಲ್ಲ. ಆದರೆ ಒಡನಾಟದಿಂದ ಆ ಮಧುರ ಬಾಂಧವ್ಯಕ್ಕೆ ಅರ್ಥ ತುಂಬಿ ಸೋದರ ಸೋದರಿಯರಾದೆವು. ನಿಜವಾದ ಒಡ ಹುಟ್ಟಿದವರಲ್ಲಿರುವುದಕ್ಕಿಂತಲೂ ಮಿಗಿಲಾದ ಪ್ರೀತಿ-ವಿಶ್ವಾಸಗಳು ಇಂದು ನಮ್ಮಲ್ಲಿವೆ. ಮುಂದೆಯೂ ಆ ಸೋದರತ್ವದ ಆತ್ಮಬಂಧ ನಮ್ಮಿಬ್ಬರ ನಡುವೆ ಶಾಶ್ವತವಾಗಿರಬೇಕೆಂದು ನಾನು ಬಯಸುತ್ತೇನೆ. ಅದಕ್ಕಾಗಿ ಒಂದೇ ಅಂಗಳದಲ್ಲಿ ಎರಡು ಮನೆಗಳನ್ನು ಚಿತ್ರಿಸಿದೆ. ಅದರಲ್ಲಿ ತಪ್ಪೇನಿದೆ?"

"ಅದೇನೋ ಸರಿ. ಆದರೆ ಅಣ್ಣ-ತಂಗಿಯರಿಗೆ ಬೇರೆ ಬೇರೆ ಮನೆಯ ಅಗತ್ಯವೇನಿದೆ? ಅವರಿಬ್ಬರೂ ಒಂದೇ ಮನೆಯಲ್ಲಿರುವುದಲ್ಲವೇ ನಿಜವಾದ ಸೋದರ ಪ್ರೇಮದ ಸಂಕೇತ?" ಎಂದಳು ಅವಳು.

ಕಲಾವಿದ ಮತ್ತೆ ವಿವರಿಸಿದ, "ಅಣ್ಣ ತಂಗಿಯರ ಸಂಬಂಧದಲ್ಲಿ ಸ್ವಾರ್ಥಕ್ಕೆ ಸ್ಥಾನವಿಲ್ಲ. ಅವರ ನಡುವೆ ಇರುವುದೇನಿದ್ದರೂ ಪರಸ್ಪರ ತ್ಯಾಗ ಮನೋಭಾವ ಮಾತ್ರ! ಒಂದೇ ಉದರದಿಂದ ಹುಟ್ಟಿ ಬಂದವರಾದರೂ, ಒಂದೇ ಅಂಗಳದಲ್ಲಿ ಆಡಿ ಬೆಳೆದವರಾದರೂ ಒಂದು ನಿಗದಿತ ಅವಧಿಯ ನಂತರ ಅವರಿಬ್ಬರ ನಡುವೆ ಒಂಥರಾ ಭೌತಿಕ ಅಂತರ ಸ್ವಾಭಾವಿಕ. ನೇರವಾಗಿ ಅಣ್ಣನು ತಂಗಿಗೆ ಹೇಳಲಾಗದ, ತಂಗಿಯು ಅಣ್ಣನಿಗೆ ಹೇಳಲಾಗದ, ಪ್ರಕೃತಿದತ್ತವಾದ ಒಂದಷ್ಟು ವಿಚಾರಗಳು ಅವರ ಮಧ್ಯೆ ಗೌಪ್ಯತೆಯ ಗೋಡೆ ಕಟ್ಟುವುದೂ ಸಹಜ. ಮುಂದೆ ಅಣ್ಣನು ತಂಗಿಗಾಗಿ ತಂಗಿಯು ಅಣ್ಣನಿಗಾಗಿ ಒಂದಷ್ಟು ತ್ಯಾಗ, ಅಗಲಿಕೆಯ ನೋವನ್ನು ಸಹಿಸಿಕೊಂಡು ಇಬ್ಬರೂ ಬೇರೆ ಬೇರೆಯಾಗಿ ಲೋಕ ರೂಢಿಯಂತೆ ಸ್ವಂತ ಕುಟುಂಬ ಜೀವನ ಆರಂಭಿಸುವುದೂ ಅನಿವಾರ್ಯವೇ. ಆದರೆ ಮನೆ ಎರಡಾದರೂ ಮನ ಒಂದಾಗಿರಬೇಕು. ತನು ದೂರವಾದರೂ ಮನ ಪಕ್ಕದಲ್ಲಿರಬೇಕು ಎಂಬ ಆಶಯದ ಅರ್ಥಸೂಚಕವಾಗಿ ನಾನು ಎರಡು ಮನೆಗಳನ್ನೂ ಒಂದೇ ಅಂಗಳದಲ್ಲಿ ಚಿತ್ರಿಸಿದೆ. ಸರಿ ತಾನೇ?"

"ಅದೂ ಸರಿಯೇ. ಆದರೆ ಇಲ್ಲಿ ನೀನು ಬಳಸಿಕೊಂಡ ವರ್ಣ ವೈಪರೀತ್ಯಗಳನ್ನು ನೋಡು. ಒಂದು ಮನೆಗೆ ಹಸಿರು ಬಣ್ಣ. ಇನ್ನೊಂದಕ್ಕೆ ಕೇಸರಿ. ಇದು ಪ್ರತ್ಯೇಕತೆಯ ಸಂಕುಚಿತ ಮನೋಭಾವದ ಸಂಕೇತ ಅಲ್ಲವೇ?" ಮುನಿಸು ಧ್ವನಿಯಲ್ಲಿ ಪ್ರಶ್ನಿಸಿದಳು ಅವಳು.

(ಮುಂದುವರಿಯುವುದು)

ನೀವು ಸನ್ಮಾರ್ಗವನ್ನು ಮೆಚ್ಚಿದರೆ ಇತರರಿಗೂ ತಿಳಿಸಿ,
ಮೆಚ್ಚದಿದ್ದರೆ ನಮಗೆ ತಿಳಿಸಿ.

## 73 ಪಾರ್ಟಿಗಳು ಮತ್ತು ಸ್ವರ್ಗ (5ನೇ ಪುಟದಿಂದ)

ಮತ್ತು ನಾವು ದಿಬ್ಬ ಮಾಡಿದ ಪ್ರಾಣಿಯನ್ನು ತಿನ್ನುವವನು ಮುಸ್ಲಿಮ್ ಆಗಿದ್ದಾನೆ. ಅವನ ಹೊಣೆ ಅಲ್ಲಾಹನ ಮತ್ತು ಆತನ ಪ್ರವಾದಿಯ ಮೇಲಿದೆ, ಅದ್ದರಿಂದ ಅವನ ಮೇಲಿರುವ ಅಲ್ಲಾಹನ ವಚನವನ್ನು ಭಂಗಗೊಳಿಸದಿರಿ.

ಪರಸ್ಪರ ಸಹನೆಯೊಂದಿಗೆ ಸಂಯೋಜಿತವಾದ ಒಂದು ಮುಸ್ಲಿಮ್ ಸಮುದಾಯವನ್ನು ಕಟ್ಟಿ ಬೆಳೆಸಲು ಈ ಒಂದು ಹದೀಸ್ ಸಾಕಾಗುತ್ತದೆ. ಅರ್ಥಾತ್ ಸಂಘಟನಾತ್ಮಕವಾಗಿ ಪ್ರತ್ಯೇಕವಾಗಿದ್ದರೂ ಮೈಮನಸ್ಸುಗಳು ಮುಸ್ಲಿಮ್ ಏಕತಾ ಸೂತ್ರದತ್ತ ಪ್ರವಹಿಸುವಂತಹ ಇಸ್ಲಾಮಿ ಗುಣವಿಶೇಷಗಳನ್ನು ಹೊಂದಿರಬೇಕು.

ಈ ದೃಢಚಿತ್ತತೆ ಕಾಲಘಟ್ಟದ ಅಪ್ರತಿಮ ಬೇಡಿಕೆಯಲ್ಲವೇ? ಹೊಂಚು ಹಾಕುತ್ತಿರುವ ಕೋಮುಶಕ್ತಿಗಳು, ಝಿಯೋನಿಸ್ಟ್ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಅಂತಾರಾಷ್ಟ್ರೀಯ ಷಡ್ಯಂತ್ರ, ರಾಜಕೀಯ ಅಸ್ಥಿರತೆ, ನಿಷ್ಕ್ರಿಯವಾದ ಮುಸ್ಲಿಮ್ ರಾಜಕಾರಣ, ಅದಕ್ಕೆ ಪೂರಕವಾದ ಅಸಮಗ್ರ ಮತ್ತು ಅಸಂಘಟಿತವಾದ ಮುಸ್ಲಿಮ್ ನೇತೃತ್ವ... ಈ ನತದೃಷ್ಟ ಸಮುದಾಯದ ವರ್ತಮಾನ, ಭವಿಷ್ಯದಲ್ಲಿ ಈ ಬೆಳವಣಿಗೆ ಯಾವ್ಯಾವ ಅನಾಹುತಗಳನ್ನು ತರಬಲ್ಲದು? ಯೋಚಿಸಿ ನೋಡಬೇಕಾದ ಅನಿವಾರ್ಯತೆ ಇದೆ. ಝಕಾತ್ ಎಂಬುದು ಇಸ್ಲಾಮ್ ನಿರ್ದೇಶಿಸಿದ ಎಷ್ಟೊಂದು ಉಜ್ವಲವಾದ ಕೊಡುಗೆ? ಸಂಪತ್ತಿನ ಒಂದಂಶವನ್ನು ಸಮುದಾಯದ ಬಡವರಿಗೆ, ದರಿದ್ರರಿಗೆ ನೀಡಬೇಕಾದ ಕಡ್ಡಾಯ ವಿಧಿ. ನಮ್ಮ ಆದ್ಯಾತ್ಮಿಕ ಜ್ಞಾನ ಕೇಂದ್ರಗಳಿಂದ ಪಾರಂಗತರಾದ ವಿದ್ವಾಂಸರಿಗೆ ಝಕಾತ್ ವ್ಯಾಪಕವಾಗಿ ಫಲಪ್ರದವಾಗುವಂತೆ ವಿಧಿ ಬದ್ಧವಾಗಿ ವೈಜ್ಞಾನಿಕ ರೀತಿ–ನೀತಿಗಳನ್ನು ಕಂಡುಕೊಳ್ಳಲು ಯಾಕೆ ಸಾಧ್ಯವಾಗಲಿಲ್ಲ? ದಾರಿದ್ರ್ಯ ನಿವಾರಣೆಯ ಈ ಧರ್ಮ ವಿಧಿಯು ಭಿಕ್ಷಾಟನೆಯ ರೂಪತಾಳಿರುವುದು ಲಜ್ಜಾಸ್ಪದ. ಮಸೀದಿಯ ಬಾಗಿಲಲ್ಲಿ ಮಸೀದಿ (ವ್ಯವಸ್ಥೆ) ನೀಡಿದ ಭಿಕ್ಷಾ ಪ್ರಮಾಣ ಪತ್ರಗಳನ್ನು ಹಿಡಿದು ಕೈಚಾಚುವ ಬುರ್ಖಾಧಾರಿಣಿಯರು. ಮಸೀದಿಯ ಒಳಹೊಕ್ಕರೆ ಪುತ್ರಿಯ ವಿವಾಹ ನಿಮಿತ್ತ ನಲ್ವತ್ತು–ನಲವತ್ತೈದರ ಅಕಾಲವೃದ್ಧರು ಸಹಾಯಕ್ಕಾಗಿ ಭಿಕ್ಷಾ ಪ್ರಮಾಣ ಪತ್ರದೊಂದಿಗೆ ಎದುರಾಗುವ ದೃಶ್ಯ. ಶುಕ್ರವಾರ ಜುಮಾ ನಮಾಝಿನ ನಂತರ ರೋಗರುಜಿನ, ಹೆಣ್ಮಕ್ಕಳ ವಿವಾಹಗಳಿಗಾಗಿ ದೇಣಿಗೆ ಸಂಗ್ರಹಿಸುವ ಈ ಪರಿಯು ಯಾವುದನ್ನು ಸೂಚಿಸುತ್ತದೆ?

ಜಗತ್ತು ಅಭಿವೃದ್ಧಿಯತ್ತ ಹೆಜ್ಜೆ ಹಾಕುವಂತೆ ನಮ್ಮ ಆಧ್ಯಾತ್ಮಿಕ ಕಾರ್ಯ ಚಟುವಟಿಕೆ ಅಭಿವೃದ್ಧಿ ಹೊಂದಬೇಕು. ನಮ್ಮ ಝಕಾತ್ ಇನ್ನಿತರ ಸಾಮಾಜಿಕ ಸಹಾಯ ಹಸ್ತಗಳು ಅತ್ಯಧಿಕ ಜನರಿಗೆ ಫಲಪ್ರದವಾಗುವಂತಹ ಯೋಜನೆಗಳನ್ನು ಸುಸಂಘಟಿತವಾಗಿ ಕ್ರೋಢೀಕರಿಸಬೇಕಾಗಿದೆ. ಸಾಮಾಜಿಕ ಗೌರವ ಮತ್ತು ನೆರವು ಪಡೆಯುವಾತನ ಆತ್ಮ ಪ್ರತಿಷ್ಠೆಯನ್ನು ಪರಿಗಣಿಸಿಕೊಂಡು ಉದಾರ ಮನೋಭಾವದಲ್ಲಿ ಸಂಯೋಜಿತ ಕಾರ್ಯವಿಧಾನವನ್ನು ಹಮ್ಮಿಕೊಳ್ಳಬೇಕಾಗಿದೆ. ದೇಶೀಯ ಮುಸ್ಲಿಮರೆಂಬ ಸುಸಂಘಟಿತ ಉದಾರ ಭಾವನೆಯಲ್ಲಿ ನಮ್ಮ ಮೈಮನಸ್ಸುಗಳನ್ನು ಜಾಗೃತಗೊಳಿಸಬೇಕಾಗಿದೆ.

ಮಸೀದಿಗಳ ನೇತೃತ್ವವನ್ನು ವಹಿಸಿರುವ ಆಡಳಿತ ಸಮಿತಿಯವರಿಗೆ ಝಕಾತ್‌ನ ಈ ಉನ್ನತ ಮಾದರಿಗಳನ್ನು ಜಾರಿಗೊಳಿಸಲು ಯಾಕೆ ಸಾಧ್ಯವಾಗುವುದಿಲ್ಲ? ಮಸೀದಿಗಳನ್ನು ಗುಂಪುಗಾರಿಕೆಯ ತಾಣವಾಗಿರಿಸಿಕೊಂಡು ವಿಶ್ವಾಸ ಮತ್ತು ಕ್ರಿಯಾಶಾಸ್ತ್ರಗಳಿಗೆ ಸಂಬಂಧಿಸಿ ಪರಸ್ಪರ ಜರೆದು ದಬಾಯಿಸುವ ದಯನೀಯ ಆಟ ಹೂಟಗಳು ವೃದ್ಧಿಯಾಗುತ್ತಲೇ ಇವೆ. ಅದೇ ಆವೇಶದಲ್ಲಿ ಝಕಾತ್‌ನ ಸಾಮೂಹಿಕ ವಿತರಣೆಯಂತಹ ಉನ್ನತ ಪ್ರಕ್ರಿಯೆಗಳಿಗೆ ಪಾಂಡಿತ್ಯವು ಅಡ್ಡಗೋಡೆಯಾಗಿ ನಿಲ್ಲುವುದಾದರೆ ಅದು ಧರ್ಮ ವಿಧಿಗಳ ಮೇಲೆ ಹೊರಿಸುವ ಸುಳ್ಳಾರೋಪವಲ್ಲದೆ ಇನ್ನೇನೂ ಅಲ್ಲ. ಮತ್ತೇನಾದರೂ ಇದೆ ಎಂದಾದರೆ ಅದು ಕೇವಲ ಸ್ವಾರ್ಥ ಮತ್ತು ಪಟ್ಟ ಭದ್ರತೆ ಮಾತ್ರವಾಗಿದೆ.

ಪ್ರಸಿದ್ಧ(ಸ್ಥಳೀಯ) ಪಂಡಿತರೊಬ್ಬರು ಹೇಳಿದಂತೆ, ನಮ್ಮಲ್ಲಿ ಅಲ್ಲಾಹನ ವಿಷಯಗಳನ್ನು ಕಲಿಸುವ ಅನೇಕ ಕೇಂದ್ರಗಳಿವೆ. ಆದರೆ ಅಲ್ಲಾಹನ ಆಜ್ಞೆಗಳನ್ನು ಅನುಸರಿಸುವವರ ತೀವ್ರ ಕೊರತೆಯಿದೆ.

ಈ ಸಂಕೀರ್ಣತೆಯಲ್ಲಿ ಭಾರತೀಯ ಮುಸ್ಲಿಮರು ಸಮಾಜದ ಸರ್ವ ಸಮಸ್ಯೆಗಳನ್ನು ನಿಭಾಯಿಸಲು ಪ್ರಾಪ್ತವಿರುವ ಒಂದು ಇಸ್ಲಾಮಿ ಸಾಮುದಾಯಿಕ ನಾಯಕತ್ವದಲ್ಲಿ ದುಡಿಯಬೇಕು. ಸಾಕಷ್ಟು ಸಹನೆ, ಸಂಯಮದಿಂದ ಮೈ ಮನಸ್ಸುಗಳನ್ನು ಇಸ್ಲಾಮಿ ಸಮಗ್ರತೆಯತ್ತ ಅಣಿಗೊಳಿಸಿಕೊಂಡಿರುವ ಹೋರಾಟದ ಅಗತ್ಯವಿದೆ.

# ನಿರ್ಲಕ್ಷಿಸಿದರೆ ತಾಲಿಬಾನ್ ಜೊತೆ ಸೇರುವೆ: ಕರ್ಝಾಯಿ



**ಕಾಬೂಲ್:** ಅಫ್ಘಾನಿಸ್ತಾನದ ಅಧ್ಯಕ್ಷ ಹಾಮಿದ್ ಕರ್ಝಾಯಿ ಮತ್ತು ನ್ಯಾಟೋ ರಾಷ್ಟ್ರಗಳ ನಡುವಿನ ಭಿನ್ನಮತ ಉಲ್ಬಣಗೊಂಡಿದ್ದು, ತನ್ನನ್ನು ಮೂಲೆ ಗುಂಪು ಮಾಡಲು ಪ್ರಯತ್ನಿಸಿದಲ್ಲಿ ಅಧ್ಯಕ್ಷ ಹುದ್ದೆ ತೊರೆದು ತಾಲಿಬಾನ್ ಜೊತೆ ಸೇರುವುದಾಗಿ ಬೆದರಿಕೆ ಹಾಕಿದ್ದಾರೆ.

ಕಳೆದ ಆಗಸ್ಟ್‌ನಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ನಡೆದ ಅಕ್ರಮಗಳಲ್ಲಿ ವಿದೇಶಿಯರ ಕೈವಾಡವಿದೆ. ಅವರು ತನ್ನ ಸರಕಾರವನ್ನು ದುರ್ಬಲಗೊಳಿಸಲು ಯತ್ನಿಸುತ್ತಿದ್ದಾರೆ. ಅಫಘಾನ್‌ನಲ್ಲಿ ತಾನಿವತ್ತು ಸಾರ್ವಭೌಮ ಸರಕಾರವನ್ನು ನಡೆಸುತ್ತಿಲ್ಲ. ತನ್ನದು ಕೈಗೊಂಬೆ ಸರಕಾರ ಮಾತ್ರವಾಗಿದೆ ಎಂದಿರುವುದು ಸದ್ಯ ಅಮೇರಿಕ ಮತ್ತು ಕರ್ಝಾಯಿ ನಡುವಣ ವಿವಾದಕ್ಕೆ ಇನ್ನಷ್ಟು ತುಪ್ಪ ಸುರಿದಿದೆ. ಈ ಮಧ್ಯೆ ಕರ್ಝಾಯಿಯವರು ಮೇ 12ರಂದು ಶ್ವೇತಭವನಕ್ಕೆ ಭೇಟಿ ನೀಡುವ ಕಾರ್ಯಕ್ರಮವಿದ್ದು, ಇದೀಗ ಅಮೇರಿಕ ಅದನ್ನು ರದ್ದುಪಡಿಸುವ ಕುರಿತು ವ್ಯಾಪಕ ಸಂಶಯ ವ್ಯಕ್ತವಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಅಮೇರಿಕ ನೇತೃತ್ವದ ನ್ಯಾಟೋ ಪಡೆ ನಾಗರಿಕರ ಮೇಲೆ ದಾಳಿ ನಡೆಸುವುದನ್ನು ಎಗ್ಗಿಲ್ಲದೇ ಮುಂದುವರಿಸುತ್ತಿರುವುದು ಮತ್ತು ಕರ್ಝಾಯಿಯನ್ನು ಲೆಕ್ಕಕ್ಕೇ ತೆಗೆದುಕೊಳ್ಳದಿರುವುದು ಭಿನ್ನಮತಕ್ಕೆ ಕಾರಣ ಎನ್ನಲಾಗುತ್ತಿದೆ. ಅಲ್ಲದೇ ಕರ್ಝಾಯಿ ವಿರುದ್ಧ ಅಫಘನ್ನರ ಆಕ್ರೋಶ ದಿನೇ ದಿನೇ ಹೆಚ್ಚುತ್ತಿರುವುದೂ ಇದಕ್ಕೆ ಇನ್ನೊಂದು ಕಾರಣ ಎನ್ನಲಾಗುತ್ತಿದೆ.

ಸದ್ಯ ಅಫಘಾನ್‌ನಲ್ಲಿ 1,20,000 ವಿದೇಶಿ ಸೈನಿಕರಿದ್ದಾರೆ.

## ಶಾರ್ಜಾದಲ್ಲಿ ಲುಂಗಿಗೆ ನಿಷೇಧ?



**ಶಾರ್ಜಾ:** ಲುಂಗಿ ಧರಿಸುವುದರ ವಿರುದ್ಧ ಶಾರ್ಜಾ ಪೊಲೀಸರು ದಂಡ ಪ್ರಯೋಗಿಸುತ್ತಿದ್ದು, ಈಗಾಗಲೇ ಓರ್ವ ಏಶಿಯನ್ ನಾಗರಿಕನನ್ನು 'ಲುಂಗಿ' ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಿದೆ.

ಗಲ್ಫ್ ನ್ಯೂಸ್‌ನ ಪ್ರಕಾರ, ಬಂಧಿತ ವ್ಯಕ್ತಿಗೆ ಈ ಮೊದಲು ಲುಂಗಿ ಧರಿಸದಂತೆ ಪೊಲೀಸರು ಎಚ್ಚರಿಕೆ ನೀಡಿದ್ದರು. ಅದು ಸಾರ್ವಜನಿಕ ಶಿಸ್ತಿಗೆ ವಿರುದ್ಧವಾಗಿದೆ ಎಂದಿದ್ದರು.

ಶಾರ್ಜಾದಲ್ಲಿ 10 ವರ್ಷಗಳ ಹಿಂದೆಯೇ 'ಅಶಿಸ್ತಿನ' ಉಡುಗೆಯನ್ನು ತಡೆಯುವ ಕಾನೂನನ್ನು ಜಾರಿಗೆ ತರಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಆದರೆ ತನ್ನ ಲುಂಗಿ ಅಶಿಸ್ತು ಹೇಗಾಗುತ್ತದೆ ಎಂದು ಬಂಧಿತ ವ್ಯಕ್ತಿ ಪ್ರಶ್ನಿಸಿದ್ದು, ಮಾಧ್ಯಮಗಳಲ್ಲಿ ಇದು ಚರ್ಚೆಗೊಳಗಾಗಿದೆ.

## ಗುಂಡಿಕ್ಕಿ ಗಹಗಹಿಸಿದ ಯೋಧರು

**ವಾಷಿಂಗ್ಟನ್:** ಇರಾಕಿಯನ್ನರಿಗೆ ಗುಂಡಿಕ್ಕಿ, ಗಹಗಹಿಸಿ ನಗುವ ಅಮೇರಿಕನ್ ಯೋಧರ ದೃಶ್ಯವು ಬಹಿರಂಗಗೊಂಡಿದ್ದು ಇದು ಅಮೇರಿಕವನ್ನು ತೀವ್ರ ಮುಜುಗರಕ್ಕೆ ಸಿಲುಕಿಸಿದೆ.

ಈ ಘಟನೆ 2007 ಜುಲೈಯಲ್ಲಿ ನಡೆದಿದ್ದು, ರಾಯಿಟರ್ಸ್ ಸುದ್ದಿ ಸಂಸ್ಥೆ 38 ನಿಮಿಷಗಳ ಈ ಕಪ್ಪು-ಬಿಳುಪು ವೀಡಿಯೋವನ್ನು ಬಿಡುಗಡೆಗೊಳಿಸಿದೆ.

ಬಗ್ದಾದ್‌ನಲ್ಲಿ ನಡೆದು ಹೋಗುತ್ತಿದ್ದ ನಾಗರಿಕರ ಮೇಲೆ ಎರಡು ಅಪಾಚೆ ಹೆಲಿಕಾಪ್ಟರ್‌ನಿಂದ ಗುಂಡಿಕ್ಕಲಾಗಿತ್ತು. ಈ ದಾಳಿಯಲ್ಲಿ 12 ಮಂದಿ ಸಾವಿಗೀಡಾಗಿದ್ದರು. ಇದರಲ್ಲಿ ರಾಯಿಟರ್ಸ್ ಸುದ್ದಿ ಸಂಸ್ಥೆಯ ಫೋಟೋಗ್ರಾಫರ್ ನಮಿರ್ ನೂರ್ ಎಲ್ದಾನ್ ಮತ್ತು ಚಾಲಕ ಸಈದ್ ಮೃತಪಟ್ಟಿದ್ದರು.

ಸೇನಾ ವಕ್ತಾರರು ಈ ವೀಡಿಯೋ ದೃಶ್ಯವನ್ನು ಅಸಲಿ ಎಂದು ಒಪ್ಪಿಕೊಂಡಿದ್ದಾರೆ.

ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ. ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು. ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.

(ಕುರ್‌ಆನ್ 2:29)

*Managing Partner*

RAJA BRICKS & TILE INDUSTRIES

*P.B. No. 34, Rajanagar, Sira Road,*
*Tumkur - 572 101. Karnataka, India*
*Ph: 0816 - 6531933/44/55, Fax: 0816 - 2211633*

## ಅಲ್ ಅಝ್ಹರ್‌ನ ನಿರ್ದೇಶಕರಾಗಿ ಡಾ| ಅಹ್ಮದ್ ತಯ್ಯಿಬ್

**ಕೈರೋ:** ಇಲ್ಲಿನ ಪ್ರಸಿದ್ಧ ಅಲ್ ಅಝ್ಹರ್ ವಿಶ್ವವಿದ್ಯಾಲಯದ 43ನೇ ನಿರ್ದೇಶಕರಾಗಿ ಡಾ| ಅಹ್ಮದ್ ತಯ್ಯಿಬ್ ಅಧಿಕಾರ ವಹಿಸಿಕೊಂಡರು. 66ರ ಹರೆಯದ ಅಹ್ಮದ್ ತಯ್ಯಿಬ್‌ರನ್ನು ಈಜಿಪ್ಟ್‌ನ ಅಧ್ಯಕ್ಷ ಹುಸ್ನಿ ಮುಬಾರಕ್‌ರ ನಿರ್ದೇಶನದಂತೆ ಆಯ್ಕೆ ಮಾಡಲಾಯಿತು. 1977ರಲ್ಲಿ ಧರ್ಮ ಮತ್ತು ತತ್ವಶಾಸ್ತ್ರದಲ್ಲಿ ಅವರು ಅಲ್‌ಅಝ್ಹರ್‌ನಲ್ಲಿ ಡಾಕ್ಟರೇಟ್ ಗಳಿಸಿದ್ದರು. ಅವರು ಅಲ್ ಅಝ್ಹರ್ ಯೂನಿವರ್ಸಿಟಿಯ ಧಾರ್ಮಿಕ ಸಂವಾದಗಳ ನೇತೃತ್ವವನ್ನು ವಹಿಸಿಕೊಂಡಿದ್ದರು. ಕರ್ಮಶಾಸ್ತ್ರಗಳು, ಶರೀಅತ್‌ನ ಕುರಿತು ಅನೇಕ ಗ್ರಂಥಗಳನ್ನು ರಚಿಸಿದ ಇವರು ಅರಬಿ ಅಲ್ಲದೆ ಇಂಗ್ಲಿಷ್ ಹಾಗೂ ಫ್ರೆಂಚ್ ಭಾಷೆಯಲ್ಲಿ ಹೆಚ್ಚು ಪರಿಣತಿ ಹೊಂದಿದ್ದಾರೆ. ಅನೇಕ ಫ್ರೆಂಚ್ ಕೃತಿಗಳನ್ನು ಅರಬಿ ಭಾಷೆಗೆ ಬಾಷಾಂತರಿಸಿರುತ್ತಾರೆ.

## 16 ಬ್ರದರ್‌ಹುಡ್ ನಾಯಕರ ಬಿಡುಗಡೆ

**ಕೈರೋ:** ಕಳೆದ ಫೆಬ್ರವರಿಯಲ್ಲಿ ಬಂಧಿಸಲ್ಪಟ್ಟಿದ್ದ ಮುಸ್ಲಿಮ್ ಬ್ರದರ್‌ಹುಡ್‌ನ ಹಿರಿಯ ನೇತಾರರೂ ಸೇರಿ 16 ಮಂದಿಯನ್ನು ಈಜಿಪ್ಟ್‌ನ ಸರಕಾರ ಕೋರ್ಟ್ ಆದೇಶದಂತೆ ಬಿಡುಗಡೆಗೊಳಿಸಿದೆ.

ಬ್ರದರ್‌ಹುಡ್‌ನ ಉಪನಾಯಕ ಮಹಮೂದ್ ಇಝ್ಝತ್, ಕಾರ್ಯಕಾರಿ ಸಮಿತಿಯ ಸದಸ್ಯ ಇಸ್ಸಾಮುಲ್ ಇರಿಯಾನ್ ಹಾಗೂ ಹಿರಿಯ ಸದಸ್ಯರಾದ ಅಬ್ದುರ್ರಹ್ಮಾನ್ ಅಲ್‌ಬಾರ್ ಮತ್ತು ಮಾಹಿ ಹಮಿದ್ ಬಿಡುಗಡೆಗೊಂಡವರಲ್ಲಿ ಸೇರಿದ್ದಾರೆ.

ಬ್ರದರ್‌ಹುಡ್ ನಾಯಕರ ಮೇಲೆ ಈಜಿಪ್ಟ್ ಆಡಳಿತ ಗುರುತರ ಆರೋಪಗಳನ್ನು ಹೊರಿಸಿತ್ತು. ಅದರಲ್ಲಿ ಇವರು ಸಯ್ಯದ್ ಕುತುಬ್‌ರು ಕಟ್ಟಿದಂಥ ತಂಡವೊಂದನ್ನು ಕಟ್ಟಲು ಹವಣಿಸುತ್ತಿದ್ದಾರೆ ಎಂಬುದೂ ಒಂದು. ಸೈಯದ್ ಕುತುಬ್‌ರನ್ನು 1960ರಲ್ಲಿ ಈಜಿಪ್ಟ್ ಸರಕಾರ ಗಲ್ಲಿಗೇರಿಸಿತ್ತು. ಆದರೆ ಕೋರ್ಟು ಈ ಆರೋಪವನ್ನು ಕಲ್ಪಿತ ಎಂದು ಎಪ್ರಿಲ್ 14, 2010ರಂದು ತಳ್ಳಿ ಹಾಕಿತ್ತು.

ಒಂದು ಪ್ರಜಾತಂತ್ರ ರಾಷ್ಟ್ರವನ್ನು ಕಟ್ಟುವುದಕ್ಕಾಗಿ ಬ್ರದರ್‌ಹುಡ್ ಶಾಂತಿಯುತ ದಾರಿಯನ್ನು ಆಯ್ಕೆ ಮಾಡಿಕೊಂಡಿದೆ. ನಮ್ಮ ಬೆಳವಣಿಗೆಯನ್ನು ಸಹಿಸಲಾರದೆ ಸರಕಾರ ನಮ್ಮನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸುತ್ತಿದೆ ಎಂದು ಹಿರಿಯ ಸದಸ್ಯ ಜಮಾಲ್ ನಾಸಿರ್ ಹೇಳಿದ್ದಾರೆ.

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8 ❖ ಸಂಚಿಕೆ: 05 ❖ 1985 ಮೇ 19 - 25

### ಭಾರತದ ಅಗ್ನಿಪರ್ವ!

ಕೇವಲ ಕಲ್ಲು ತೂರಾಟ, ಚೂರಿ, ಇರಿತಗಳಿಗೆ ಸೀಮಿತವಾಗಿದ್ದ ಭಾರತದ ಹಿಂಸಾ ಪ್ರವೃತ್ತಿ ಬಂದೂಕು ಬಾಂಬುಗಳ ಹೊಸ ಯುಗವನ್ನು ಪ್ರವೇಶಿಸಿದೆ. ಇತ್ತೀಚೆಗೆ ಹರ್ಯಾಣ, ರಾಜಸ್ಥಾನ, ಉತ್ತರ ಪ್ರದೇಶ, ದೆಹಲಿಯಲ್ಲಿ ಸ್ಫೋಟಗೊಂಡ ಟ್ರಾನ್ಸಿಸ್ಟರ್ ಬಾಂಬುಗಳ ಸರಣಿಯು ಹಿಂಸಾಚಾರಗಳೂ ಆಧುನೀಕರಣಗೊಂಡಿರುವುದರ ಸಂಕೇತವಾಗಿದೆ. ಏಕ ಕಾಲದಲ್ಲಿ ವಿವಿದೆಡೆಗಳಲ್ಲಿ ಇಂಥ ಸ್ಫೋಟಗಳನ್ನು ಯೋಜಿಸಬೇಕಿದ್ದರೆ, ಭಯೋತ್ಪಾದಕರ ಜಾಲ ಎಷ್ಟೊಂದು ವ್ಯಾಪಕ ಮತ್ತು ಪ್ರಬಲವಾಗಿದೆಯೆಂದು ಊಹಿಸಬಹುದು. ಇಂಥ ಸ್ಫೋಟಗಳಿಂದ ಒಟ್ಟು 80 ಮಂದಿ ಮೃತರಾಗಿ 609ಕ್ಕೂ ಮಿಕ್ಕ ಮಂದಿ ಗಾಯಗೊಂಡಿದ್ದಾರೆ.

ಶ್ರೀ ಹರ್‌ಚಂದ್ ಸಿಂಗ್ ಲೋಂಗಾವಾಲ್ ಮತ್ತಿತರ ನಾಯಕರ ಬಿಡುಗಡೆ ಹಾಗೂ ಸಿಕ್ಖ್ ವಿದ್ಯಾರ್ಥಿ ಫೆಡರೇಶನ್ ನಿಷೇಧ ರದ್ದು ಇತ್ಯಾದಿ ಕ್ರಮಗಳಿಂದ ಸರಕಾರವು ಸಿಕ್ಖರ ಮನವೊಲಿಸಲು ಪ್ರಯತ್ನಿಸಿತು. ಆದರೆ ಸಿಕ್ಖ್ ನಾಯಕರ ಪ್ರತಿಕ್ರಿಯೆಯು ಸಮಸ್ಯೆಯ ಪರಿಹಾರದ ನಿಟ್ಟಿನಲ್ಲಿ ಆಶಾಜನಕವಾಗಿರಲಿಲ್ಲ. ಮಾತ್ರವಲ್ಲದೆ ಒಂದೊಮ್ಮೆ ಪರಿಹಾರವಾದಂತೆ ಭಾಸವಾಗುತ್ತಿದ್ದ ಸಮಸ್ಯೆಯು ಇದೀಗ ಪುನಃ ತನ್ನ ಹಿಂದಿನ ಸ್ಥಿತಿಗೆ ತಲುಪಿದೆ. ಇದೀಗ ಉಲ್ಬಣಗೊಂಡಿರುವ ಹಿಂಸಾಚಾರಗಳು ಭಿಂದ್ರನ್‌ವಾಲೆ ಹಾಗೂ ಅಮೃತಸರದ ಸೇನಾ ಕಾರ್ಯಾಚರಣೆಯನ್ನು ಪುನಃ ಜ್ಞಾಪಿಸುವಂತೆ ಮಾಡುತ್ತಿವೆ.

## ಗದ್ದಾಫಿ ದಾರಿಯಲ್ಲಿ ಉರ್ದುಗಾನ್: ಇಸ್ರೇಲ್ ಟೀಕೆ



**ವೆನೆಝುವೇಲಾ:** ತುರ್ಕಿಯ ಪ್ರಧಾನಮಂತ್ರಿ ರಜಬ್ ತ್ವಯ್ಯಿಬ್ ಉರ್ದುಗಾನ್‌ರನ್ನು ಲಿಬಿಯದ ಅಧ್ಯಕ್ಷ ಗದ್ದಾಫಿ ಮತ್ತು ವೆನೆಝುವೇಲಾದ ಅಧ್ಯಕ್ಷ ಹ್ಯೂಗೋ ಚಾವೇಝ್‌ಗೆ ಇಸ್ರೇಲ್ ವಿದೇಶಾಂಗ ಸಚಿವ ಅವಿಗ್ದೋರ್ ಲಿಬರ್‌ಮನ್‌ರು ಹೋಲಿಸಿದ್ದಾರೆ.

ಉರ್ದುಗಾನ್‌ರು ನಿಧಾನವಾಗಿ ಗದ್ದಾಫಿ ಮತ್ತು ಚಾವೇಝ್‌ರ ದಾರಿಯನ್ನು ಅನುಸರಿಸುತ್ತಿದ್ದಾರೆ. ಇದು ತುರ್ಕಿಯ ಸಮಸ್ಯೆಯಲ್ಲ, ಉರ್ದುಗಾನ್‌ರದ್ದು ಎಂದವರು ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚೆಗೆ ಫ್ರಾನ್ಸ್‌ನ ಪತ್ರಿಕೆಯೊಂದಕ್ಕೆ ಹೇಳಿಕೆ ನೀಡಿದ್ದ ಉರ್ದುಗಾನ್, ಇಸ್ರೇಲ್‌ಗೆ ಶಾಂತಿಯಲ್ಲಿ ನಂಬಿಕೆಯಿಲ್ಲ, ಅದು ಶಾಂತಿಯ ಬದಲು ಯುದ್ಧದ ವಾತಾವರಣವನ್ನು ನಿರ್ಮಿಸಲು ಹೆಚ್ಚು ಉತ್ಸುಕವಾಗಿದೆ ಎಂದಿದ್ದರು.

## ಗ್ವಾಂಟನಾಮೋ: ನಿರಪರಾಧಿಗಳೇ ಹೆಚ್ಚು




**ಗ್ವಾಂಟನಾಮೋ:** ಸೆರೆಮನೆಯಲ್ಲಿ ನೂರಕ್ಕಿಂತಲೂ ಅಧಿಕ ಮಂದಿ ನಿರಪರಾಧಿಗಳಿದ್ದಾರೆ. ಅಮೇರಿಕನ್ ಆಡಳಿತಕ್ಕೆ ಅದು ಮೊದಲೇ ತಿಳಿದಿತ್ತು ಎಂಬುದಾಗಿ ಮಾಜಿ ಉನ್ನತಾಧಿಕಾರಿ ಕಾಲಿನ್ ಪಾವೆಲ್‌ರ ಸಹಾಯಕರಾದ ಕರ್ನಲ್ ವಿಲ್‌ಕರ್ಸನ್ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಇರಾಕ್ ವಿರುದ್ಧದ ಯುದ್ಧಕ್ಕೆ ಬಾಧಕವಾಗಬಹುದೆಂದು ಬಗೆದು ಜಾರ್ಜ್ ಬುಶ್ ಈ ವಿಷಯದಲ್ಲಿ ಏನೂ ಕ್ರಮಕೈಗೊಂಡಿರಲಿಲ್ಲ ಎಂದು ಬ್ರಿಟನ್‌ನ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

2010ರಲ್ಲಿ ಬಂಧಿಸಲಾದ 742 ಮಂದಿಯಲ್ಲಿ ಹೆಚ್ಚಿನವರು ನಿರಪರಾಧಿಗಳಾಗಿದ್ದರು. ಇದು ಬುಶ್ ಹಾಗೂ ಡಿಕ್‌ಚೆನಿಯವರಿಗೆ ತಿಳಿದಿತ್ತು ಎಂದೂ ಅವರು ಹೇಳಿದ್ದಾರೆ. ಇವರಲ್ಲಿ 93ರ ವೃದ್ಧರಿಂದ ಹಿಡಿದು ಎಳೆಯ ಮಕ್ಕಳೂ ಸೇರಿದ್ದರು. ಇವರನ್ನು ಬಂಧಿಸಿರುವುದು ಪಾಕಿಸ್ತಾನ ಹಾಗೂ ಅಫ್‌ಘಾನಿಸ್ತಾನದ ಸೈನಿಕರೇ ಹೊರತು ಅಮೇರಿಕದ ಸೈನಿಕರಲ್ಲ ಎಂಬ ಆಘಾತಕಾರಿ ಸುದ್ದಿಯನ್ನೂ ಅವರು ಹೊರಗೆಡಹಿದ್ದಾರೆ. ನಿರಪರಾಧಿಗಳನ್ನು ಹಿಂಸಿಸಲಾಗುತ್ತಿದೆಯೆಂದು ತಿಳಿದೂ ಬುಶ್‌ರವರು ನಿಗೂಢ ಮೌನ ವಹಿಸಿದ್ದರು ಎಂದು ಅವರು ಬಹಿರಂಗಪಡಿಸಿದ್ದಾರೆ.

## ಜಿಐಓ: ಮೇ 3-9 ರಜಾದಿನ ಶಿಬಿರ

ಮಂಗಳೂರು: ಜಿಐಓ ಮಂಗಳೂರಿನ ವತಿಯಿಂದ 2010 ಮೇ 3ರಿಂದ 9ರ ವರೆಗೆ ಇಲ್ಲಿನ ಹಿದಾಯತ್ ಸೆಂಟರ್‌ನಲ್ಲಿ ಯುವತಿಯರಿಗಾಗಿ ಇಸ್ಲಾಮೀ ರಜಾದಿನ ಶಿಬಿರ ನಡೆಯಲಿರುವುದು. 12ರಿಂದ 18ರ ವಯೋಮಿತಿಯವರಿಗೆ ಅವಕಾಶ. ಇಸ್ಲಾಮೀ ಕರ್ಮಶಾಸ್ತ್ರ, ಕುರ್‌ಆನ್-ಹದೀಸ್ ಅಧ್ಯಯನ, ಇಸ್ಲಾಮೀ ಇತಿಹಾಸ ಮುಂತಾದ ತರಗತಿಗಳಿರುವುದು. ಕಾರ್ಯಕ್ರಮ ಬೆಳಿಗ್ಗೆ 10:00ರಿಂದ ಮಧ್ಯಾಹ್ನ 1:00ರ ವರೆಗೆ ಜರಗಲಿರುವುದು. ಅರ್ಜಿಯು ನಗರದ ಹಿದಾಯತ್ ಸೆಂಟರ್‌ನಲ್ಲಿ ಲಭ್ಯವಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಎಪ್ರಿಲ್ 24. ಪ್ರವೇಶ ಶುಲ್ಕ ರೂ. 100.

ಗರ್ಲ್ಸ್ ಇಸ್ಲಾಮಿಕ್ ಆರ್ಗನೈಝೇಶನ್, ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಬಂದರ್, ಮಂಗಳೂರು. Ph: 2410358

## ಉಚಿತ ನೇತ್ರ ತಪಾಸಣೆ



ಮಾನ್ವಿ: ಜಮಾಅತೆ ಇಸ್ಲಾಮೀ ಹಿಂದ್ ಮಾನ್ವಿ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ರಾಯಚೂರು ಹಾಗೂ ಸಾರ್ವಜನಿಕ ಸರಕಾರಿ ಆಸ್ಪತ್ರೆ ಮಾನ್ವಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸ್ಥಳೀಯ ಶಾಸಕರಾದ ಜಿ. ಹಂಪಯ್ಯ ನಾಯಕ ಆಗಮಿಸಿದ್ದರು.

ನೇತ್ರ ತಜ್ಞರಾದ ಡಾ| ಶರಣಬಸಪ್ಪ ಹಾಗೂ ಡಾ| ವೆಂಕಟೇಶ ಆಚಾರ ಸಂದರ್ಭೋಚಿತವಾಗಿ ಮಾತನಾಡಿದರು. ಅನ್ವರ್ ಪಾಶಾ ಉಮರಿ ಅಧ್ಯಕ್ಷತೆ ವಹಿಸಿದ್ದರು. ಶಿಬಿರದ ಸಹ ಸಂಚಾಲಕರಾದ ಶೇಖ್ ಬಾಬಾ ಹುಸೇನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್.ಐ.ಓ. ಸ್ಥಳೀಯ ಅಧ್ಯಕ್ಷ ಅಲೀಮ್ ಖಾನ್ ಕುರ್‌ಆನ್ ಪಠಿಸಿದರು. ಮುಹಮ್ಮದ್ ದಸ್ತಗೀರ್ ಸ್ವಾಗತಿಸಿದರು. ಶಿಬಿರದ ಸಂಚಾಲಕ ಅಬ್ದುಲ್ ಕರೀಮ್ ಖಾನ್ ಧನ್ಯವಾದವಿತ್ತರು. ಈ ಶಿಬಿರದಲ್ಲಿ 520 ಮಂದಿಯನ್ನು ತಪಾಸಿಸಲಾಯಿತು ಮತ್ತು 103 ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಿ, ಲೆನ್ಸ್ ಅಳವಡಿಸಲಾಯಿತು. ಹಾಗೆಯೇ 103 ಜನರಿಗೆ ಉಚಿತವಾಗಿ ಕನ್ನಡಕಗಳನ್ನು ವಿತರಿಸಲಾಯಿತು.

## ಸಾರ್ವಜನಿಕ ಸಭೆ

ಉಪ್ಪಿನಂಗಡಿ: "ಪ್ರತಿಯೊಂದು ಆತ್ಮಕ್ಕೂ ಮರಣದ ರುಚಿಯನ್ನು ಸವಿಯಲಿಕ್ಕಿದೆ. ಮರಣದ ನಂತರ ಪರಲೋಕದಲ್ಲಿ ನಿನ್ನ ಆಯುಷ್ಯವನ್ನು ಯಾವ ರೀತಿ ವಿನಿಯೋಗಿಸಿದೆ ಎಂಬ ಅಲ್ಲಾಹನ ಪ್ರಶ್ನೆಗೆ ಸರಿಯಾದ ಉತ್ತರ ನೀಡಲು ನಾವು ಸನ್ನದ್ಧರಾಗಬೇಕಿದೆ. ಆದ್ದರಿಂದ ಕುರ್‌ಆನಿನ ಸಾಮಿಪ್ಯ ವನ್ನು ನಾವು ಬೆಳೆಸಬೇಕು" ಎಂದು ಯೂತ್‌ವಿಂಗ್ ಜ.ಇ. ಹಿಂದ್ ಇಸ್ಲಾಮೀ ಹಿಂದ್ ಇದರ ದ.ಕ. ಜಿಲ್ಲಾ ಉಪಸಂಚಾಲಕರಾದ ಮುಹಮ್ಮದ್ ಮುಹ್ಸಿನ್ ಮಂಗಳೂರು ಕರೆಯಿತ್ತರು.

ಅವರು ಇಲ್ಲಿಗೆ ಸಮೀಪದ ಶಾಂತಿ ನಗರದಲ್ಲಿ ಎಪ್ರಿಲ್ 2ರಂದು 'ಪ್ರತಿಯೊಬ್ಬ ಮರಣದ ರುಚಿ ಸವಿಯಲಿಕ್ಕಿದೆ' ಎಂಬ ವಿಷಯದಲ್ಲಿ ಯೂತ್‌ವಿಂಗ್ ಉಪ್ಪಿನಂಗಡಿ ಶಾಖೆ ಏರ್ಪಡಿಸಿದ್ದ ಭಾಷಣ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಜಮಾಅತೆ ಇಸ್ಲಾಮೀ ಹಿಂದ್ ದ.ಕ. ಜಿಲ್ಲಾ ಉಪಸಂಚಾಲಕರಾದ ಅಮೀನ್ ಅಹ್ಸನ್‌ರವರು ಸಂದರ್ಭೋಚಿತವಾಗಿ ಮಾತನಾಡಿದರು. ಆರಂಭದಲ್ಲಿ ಅಸ್ಲಮ್‌ರವರು ಕುರ್‌ಆನ್ ಪಠಿಸಿದರು. ಸಲೀಮ್ ಬೋಳಂಗಡಿ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

## ಹಸ್ತಪ್ರತಿ ಆಹ್ವಾನ

ಮಂಗಳೂರು: ಬ್ಯಾರಿ ಭಾಷೆಯಲ್ಲಿ ಬರೆದ ಪ್ರಕಟನೆಗೆ ಸಿದ್ಧವಾಗಿರುವ ಕತೆ, ಕವನ, ಲೇಖನ, ಚುಟುಕುಗಳ ಹಸ್ತಪ್ರತಿಯನ್ನು ಪ್ರಕಟನೆಗೆ ಆಹ್ವಾನಿಸಲಾಗಿದೆ. ಆಯ್ಕೆಯಾದ ಹಸ್ತಪ್ರತಿಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು. ಪ್ರಕಟವಾದ ಕತೆ, ಕವನ, ಚುಟುಕು ಹಾಗೂ ಪುಸ್ತಕಕ್ಕೆ ಗೌರವ ಧನ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 9481017495ನ್ನು ಸಂಪರ್ಕಿಸಬಹುದು.

## ಹಸಿವು ಮುಕ್ತ ಸಮಾಜದೆಡೆಗೆ

ಬಿ.ಸಿ.ರೋಡ್: "ಸಮಾಜದಲ್ಲಿ ಬಡತನವು ವ್ಯಾಪಕವಾಗಿದೆ. ನಮ್ಮಲ್ಲಿನ ಕೆಲವೇ ಶ್ರೀಮಂತರನ್ನು ತೋರಿಸಿ ಶ್ರೀಮಂತರಾಷ್ಟ್ರ ಎಂದು ನಾವು ಹೆಮ್ಮೆ ಪಡುತ್ತಿದ್ದೇವೆ. ಆದರೆ ಇನ್ನೊಂದೆಡೆ ಅಸಂಖ್ಯ ಮಂದಿ ಬಡತನದಿಂದ ನಲುಗುತ್ತಿದ್ದರೂ ಅವರನ್ನು ಕಡೆಗಣಿಸಲಾಗುತ್ತದೆ" ಎಂದು ಯೂತ್‌ವಿಂಗ್ ಜಮಾಅತೆ ಇಸ್ಲಾಮೀ ಹಿಂದ್ ಇದರ ದ.ಕ. ಜಿಲ್ಲಾ ಕಾರ್ಯದರ್ಶಿ ಮುಹಮ್ಮದ್ ಮುಬೀನ್ ಉಳ್ಳಾಲ ತಿಳಿಸಿದರು.

ಅವರು ಬಿ.ಸಿ.ರೋಡ್‌ನ ಲಯನ್ಸ್ ಭವನದಲ್ಲಿ ಎಪ್ರಿಲ್ 2ರಂದು ನಡೆದ 'ಹಸಿವು ಮುಕ್ತ ಸಮಾಜದೆಡೆಗೆ' ಎಂಬ ವಿಷಯದಲ್ಲಿ ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ನವಚೇತನ ಟ್ರಸ್ಟ್‌ನ ರಾಜಾ ಪಲ್ಲಮಜಲು ಮಾತನಾಡುತ್ತಾ, "ಇಂದು ಜಾತಿಯಾಧಾರಿತ ವಿಷಯಗಳಿಗೆ ಹೆಚ್ಚು ಗಮನ ಹರಿಸುತ್ತಿದ್ದೇವೆ. ನಾವು ಬಡವರ ಹಸಿವನ್ನು ನೀಗಿಸುವ ಪ್ರಯತ್ನದಲ್ಲಿ ಮುಂದುವರಿಯಬೇಕು. ಈ ನಿಟ್ಟಿನಲ್ಲಿ ಜಾತಿ ಮತ ಬೇಧ ಮರೆತು ಕಾರ್ಯಾಚರಿಸುವ ಯೂತ್‌ವಿಂಗ್‌ನ ಕಾರ್ಯ ವಿಧಾನ ಶ್ಲಾಘನೀಯ" ಎಂದರು.

ಬಂಟ್ವಾಳ ಪುರಸಭೆಯ ಉಪಾಧ್ಯಕ್ಷ ಇಕ್ಬಾಲ್‌ರವರು, "ಹಸಿವು ಧರ್ಮ ರಹಿತವಾಗಿದೆ. ಬಡವರ ಹಸಿವನ್ನು ನೀಗಿಸಲು ಶ್ರೀಮಂತರು ಮುಂದಾಗಬೇಕು" ಎಂದು ಕರೆಯಿತ್ತರು. ಜ.ಇ. ಹಿಂದ್ ಪಾಣೆಮಂಗಳೂರು ವರ್ತುಲದ ಕಾರ್ಯದರ್ಶಿ ಮುಖ್ತಾರ್ ಅಹ್ಮದ್ ಸಂದರ್ಭೋಚಿತವಾಗಿ ಮಾತನಾಡಿದರು. ಯೂತ್‌ವಿಂಗ್‌ನ ಜಿಲ್ಲಾ ಉಪಸಂಚಾಲಕ ಜ| ಮುಹಮ್ಮದ್ ಮುಹ್‌ಸಿನ್ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಬ್ದುಲ್ ಹಮೀದ್ ಬಂಟ್ವಾಳ ಕುರ್‌ಆನ್ ಪಠಿಸಿದರು. ಎಂ.ಎಚ್. ಶುಕೂರ್ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

## ಮನುಷ್ಯರಲ್ಲಿ ಮಲ ತಿನ್ನಬೇಕಾದವರೂ... (ಮುಖಪುಟದಿಂದ)

ಕೈಗೆತ್ತಿಕೊಂಡು ದುರ್ಬಲರ ಮೇಲೆ ಅನ್ಯಾಯ, ಅಕ್ರಮಗಳನ್ನು ನಡೆಸುವವರಿಗೆ ಕಡಿವಾಣ ಹಾಕಲು ಇದು ಸಹಾಯಕವಾಗಬೇಕು.

ಭಾರತ ಸ್ವತಂತ್ರಗೊಂಡು 6 ದಶಕಗಳೇ ಕಳೆದರೂ ಇಲ್ಲಿ ಮೇಲು-ಕೀಳು ಬೇಧಭಾವ ಕೊನೆಗೊಂಡಿಲ್ಲ. ಕೆಳವರ್ಗದ ಜಾತಿಯವರ ಮೇಲೆ ಮೇಲ್ವರ್ಗದವರು ನಡೆಸುತ್ತಿರುವ ದೌರ್ಜನ್ಯಗಳು ಅಲ್ಲಲ್ಲಿ ವರದಿಯಾಗುತ್ತಿವೆ. ದೇಶದಲ್ಲಿ ನಡೆಯುತ್ತಿರುವ ಕೆಲವೊಂದು ಘಟನೆಗಳು ಎದೆ ಝಲ್ಲೆನಿಸುವಂತಿರುತ್ತವೆ. ಮೇಲ್ವರ್ಗದವರನ್ನು ಪ್ರೀತಿಸಿದ ಕಾರಣಕ್ಕಾಗಿ ದಲಿತ ಕಾಲನಿಗಳೇ ಬೆಂಕಿಗಾಹುತಿಯಾಗಿ ಭಸ್ಮವಾಗುತ್ತಿವೆ. ದಲಿತ ಮಹಿಳೆಯನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸುವ ಹೇಯ ಘಟನೆಗಳೂ ಅಲ್ಲಲ್ಲಿ ಕೇಳಿ ಬರುತ್ತವೆ. ಗಾಂಧೀಜಿಯವರು ಘೋಷಿಸಿದ ಹರಿಜನರನ್ನು ಕುರಿಗಳಂತೆ ಕಾಣುವುದನ್ನು ನಾವು ನೋಡುತ್ತೇವೆ.

ನೆರೆಯ ಕೇರಳದಲ್ಲಿ ಕಳ್ಳತನ ಮಾಡುತ್ತಿದ್ದ ಗಂಡನನ್ನು ಹಾಜರುಪಡಿಸಬೇಕೆಂದು 'ಸುಜಾ' ಎಂಬ ದಲಿತ ಗರ್ಭಿಣಿ ಮಹಿಳೆಗೆ ಪೊಲೀಸನೊಬ್ಬ ನೀಡಿದ ಏಟಿನಿಂದಾಗಿ ಆಕೆಯ ಗರ್ಭಪಾತವಾಯಿತು. ತನ್ನ ಗಂಡ ಮಾಡಿದ ತಪ್ಪಿಗೆ ತನ್ನ ಕರುಳಕುಡಿಯನ್ನೇ ಬಲಿ ನೀಡಬೇಕಾಯಿತು. ಇದೇ ಹೆಚ್ಚು ಸಾಕ್ಷರತೆಯಿರುವ ಕೇರಳದಲ್ಲಿ ಹೆಣ್ಣು ಮಗುವೊಂದು ಶಾಲೆಯಲ್ಲಿ ಮಲ ವಿಸರ್ಜನೆ ಮಾಡಿದ ಕಾರಣಕ್ಕೆ ಆಕೆಯ ಟಿಫಿನ್ ಬಾಕ್ಸ್‌ಗೆ ಮಲವನ್ನು ತುಂಬಿಸಿ ಮನೆಗೆ ಕಳುಹಿಸಿಕೊಡಲಾಯಿತು. ಇದೂ ಕೂಡಾ ಆಕೆ ದಲಿತೆ ಎಂಬ ಕಾರಣಕ್ಕಾಗಿ.

ಖಾಪ್ ಪಂಚಾಯತ್ ನೀಡಿದ ಕರಾಳ ತೀರ್ಪಿನ ವಿರುದ್ಧ ಈ ಯುವಕನ ಸಂಬಂಧಿಗಳು ಕೋರ್ಟಿನ ಮೊರೆ ಹೋಗದಿದ್ದರೆ ಇದು ಹತ್ತರಲ್ಲಿ ಹನ್ನೊಂದನೇ ಘಟನೆಯಾಗಿ ಮರೆಯಾಗುತ್ತಿತ್ತು. ಒಂದೇ ವರ್ಗದವರ ಮಧ್ಯೆ ನಡೆದ ವಿವಾಹದ ಬಗ್ಗೆ ಈ ರೀತಿಯ ಜಾತಿ ಆಧಾರಿತ ಪ್ರಕರಣಗಳು ನಡೆದಿರುವುದು ಪ್ರಕರಣದ ಗಂಭೀರತೆಯನ್ನು ತೋರಿಸುತ್ತದೆ. ಖಾಪ್ ಪಂಚಾಯತ್‌ನ ವಿರುದ್ಧ ನೀಡಿದ ತೀರ್ಪು ನಿಜಕ್ಕೂ ಒಂದು ಆಶಾದಾಯಕ ಬೆಳವಣಿಗೆ. ಇಲ್ಲಿ ನಡೆಯುತ್ತಿರುವ ದುರ್ಬಲರ ವಿರುದ್ಧದ ದೌರ್ಜನ್ಯಗಳನ್ನು ಕೊನೆಗಾಣಿಸಲು ಇದು ನೆರವಾಗಬೇಕಾದ ಅಗತ್ಯವಿದೆ. ಮಲ ತಿನ್ನಿಸುವ ಪಂಚಾಯತ್‌ಗಳಿಗೆ ತಿಲಾಂಜಲಿ ಹಾಡಲು ಜನತೆ ಮುಂದಾಗಬೇಕು. ದೇಶದ ಕಾನೂನನ್ನು ಗೌರವಿಸಿ ಪ್ರಜಾಹಿತವನ್ನು ಕಾಪಾಡುವ ಹೊಣೆ ಕೂಡಾ ಅಧಿಕಾರಿಗಳ ಮೇಲಿದೆ. ಆದರೆ ಇಂತಹ ಅನೇಕ ಪ್ರಕರಣಗಳಲ್ಲಿ ಪೊಲೀಸರು ಮೂಕ ಪ್ರೇಕ್ಷಕರಾಗಿರುವ ವರದಿಗಳು ಕಂಡುಬರುವುದು ಸಾಮಾನ್ಯವಾಗಿದೆ. ದುರ್ಬಲರಿಗೆ, ಮರ್ದಿತರಿಗೆ, ತುಳಿತಕ್ಕೊಳಗಾದವರಿಗೆ ನ್ಯಾಯ ದೊರಕಿಸಲು ನ್ಯಾಯಾಲಯಗಳು ಇಂತಹ ಉತ್ತಮ ತೀರ್ಮಾನಗಳ ಮೂಲಕ ಮುಂದೆ ಬರಬೇಕು. ಸಾಧಾರಣವಾಗಿ ಪ್ರೇಮ ಪ್ರಕರಣಗಳಿಗೆ ಎರವಾಗುವುದು ದುರ್ಬಲರ ಪ್ರಾಣ, ಮಾನಗಳು ಎಂಬ ಸತ್ಯವನ್ನು ನಾವು ಅರಿಯಬೇಕಾಗಿದೆ.

## 'ದಿ ಹಿಂದೂ'ವಿನ ಪ್ರವೀಣ್ ಸ್ವಾಮಿ ವಿರುದ್ಧ ದಾವೆ

(ಮುಖಪುಟದಿಂದ)

ಜಮಾಅತೆ ಇಸ್ಲಾಮೀ ಹಿಂದನ್ನು ದೂಷಿಸುವಂತಹ ನೀತಿಯು ಇನ್ನೂ ಮುಂದುವರಿಸಿದರೆ, ಅನಿವಾರ್ಯವಾಗಿ ನ್ಯಾಯಾಲಯದ ಮೊರೆ ಹೋಗಬೇಕಾದೀತು" ಎಂದು 'ದಿ ಹಿಂದೂ'ವಿನ ಸಂಪಾದಕರಿಗೆ ಬರೆದ ಪತ್ರದಲ್ಲಿ ಜಮಾಅತೆ ಇಸ್ಲಾಮೀ ಹಿಂದ್‌ನ ಮಾಧ್ಯಮ ಸಂಯೋಜಕರಾದ ಎಸ್.ಕ್ಯು.ಆರ್. ಇಲ್ಯಾಸ್ ತಿಳಿಸಿದ್ದಾರೆ.

2010 ಮಾರ್ಚ್ 23ರಂದು ದಿ ಹಿಂದೂವಿನಲ್ಲಿ ಪ್ರಕಟವಾದ 'ಇಸ್ಲಾಮಿಝಂ, ಮಾಡರ್ನಿಟಿ ಆಂಡ್ ಇಂಡಿಯನ್ ಮುಜಾಹಿದೀನ್' ಎಂಬ ಲೇಖನದಲ್ಲಿ ಡಾ| ಇರ್ಫಾನ್ ಅಹ್ಮದ್‌ರವರ 'ಇಸ್ಲಾಮ್ ಆಂಡ್ ಡೆಮಾಕ್ರಸಿ ಇನ್ ಇಂಡಿಯಾ: ದಿ ಟ್ರಾನ್ಸ್‌ಫಾರ್ಮೇಶನ್ ಆಫ್ ಜಮಾಅತೆ ಇಸ್ಲಾಮೀ' ಎಂಬ ಪುಸ್ತಕದ ಬಗ್ಗೆ ಉಲ್ಲೇಖಿಸುತ್ತಾ ಪ್ರವೀಣ್ ಸ್ವಾಮಿ ಹೀಗೆ ಬರೆದಿದ್ದಾರೆ, "ಆಝಮ್‌ಗಢದಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ನಡೆಸುತ್ತಿರುವ ಜಮೀಯತುಲ್ ಫಲಾಹ್ ವಿದ್ಯಾಲಯದಲ್ಲಿ ಜಮಾಅತೆ ಇಸ್ಲಾಮೀಯ ಸಂಸ್ಥೆಗಳು ಮತ್ತು ಸಿಮಿಯ ನಡುವೆ ವಾಗ್ವಾದ ನಡೆಯುತ್ತಿದೆ. ಅದನ್ನು ಜಮಾಅತ್ ಹೊಸ ರಾಜಕೀಯ ಸ್ಥಾನ ಗಳಿಸುವ ನಿಟ್ಟಿನಲ್ಲಿ ನಿಷ್ಕರ್ಷಿಸಲು ತುರ್ತು ಸ್ಥಿತಿಯ ಬಳಿಕ ರಚಿಸಿತ್ತು. ಆದರೆ ಬಳಿಕ 'ಸಿಮಿ'ಯು ಜಿಹಾದಿಗಳಿಗೆ ಬೆಂಬಲ ನೀಡುವ ಮೂಲಕ ಪಕ್ಷದ ವರಿಷ್ಠರನ್ನು ಪೇಚಾಟಕ್ಕೀಡುಮಾಡಿತು."

ಅದೇನಿದ್ದರೂ ಈ ಆಪಾದನೆಗಳನ್ನು ಜಮಾಅತ್ ಹಾಸ್ಯಾಸ್ಪದ ಮತ್ತು ತಪ್ಪು ದಾರಿಗೆ ಎಳೆಯುವಂತಹ ಕೃತ್ಯ ಎಂದು ಬಣ್ಣಿಸಿದೆ. "ಪ್ರವೀಣ್ ಸ್ವಾಮಿಯವರು ಮುಸ್ಲಿಮ್ ಸಂಘಟನೆಗಳನ್ನು ವಿಶೇಷತಃ ಜಮಾಅತೆ ಇಸ್ಲಾಮೀ ಹಿಂದನ್ನು ನಿರಂತರ ದೂಷಿಸುವ ಪ್ರವೃತ್ತಿಯನ್ನು ಹೊಂದಿದ್ದಾರೆ. ಪ್ರಸ್ತುತ ಲೇಖನವು ಅದರ ಒಂದು ಉದಾಹರಣೆಯಾಗಿದೆ" ಎಂದು ಎಸ್.ಕ್ಯು.ಆರ್. ಇಲ್ಯಾಸ್ ಹೇಳುತ್ತಾರೆ. "ಜಮಾಅತೆ ಇಸ್ಲಾಮೀ ಹಿಂದ್ ಒಂದು ಶಾಂತಿಯುತ ಮತ್ತು ನಿರ್ಮಾಣಾತ್ಮಕ ಚಟುವಟಿಕೆಯನ್ನು ನಡೆಸುತ್ತಾ ಬಂದಿರುವ ಸಂಘಟನೆಯಾಗಿದೆ. ಇದರ ಕಾರ್ಯ ಚಟುವಟಿಕೆಯು ಪಾರದರ್ಶಕವಾದುದು" ಎಂದೂ ಅವರು ಹೇಳಿದ್ದಾರೆ.


## ಖದೀಜ ಮುಸ್ಲಿಮ್ ಲೇಡೀಸ್ ಹಾಸ್ಟೆಲ್

ಕಳೆದ 7 ವರ್ಷಗಳಿಂದ ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿರುವ ಮುಸ್ಲಿಮ್ ಮಹಿಳಾ ಹಾಸ್ಟೆಲ್‌ಗೆ ಸೇರಬಯಸುವವರಿಗೆ ಸದವಕಾಶ. ಸೇರಬಯಸುವ ವಿದ್ಯಾರ್ಥಿನಿಯರು ಮತ್ತು ಮಹಿಳೆಯರು ಕೂಡಲೇ ಸಂಪರ್ಕಿಸಿರಿ:

ನಮ್ಮಲ್ಲಿರುವ ಸೌಲಭ್ಯಗಳು

- ಸಸ್ಯಹಾರಿ ಹಾಗೂ ಮಾಂಸಹಾರಿ ಉಪಹಾರ
- ನಮಾಝ್ ಕೊಠಡಿ
- ಲಿಫ್ಟ್ ಸೌಲಭ್ಯ
- ಪ್ರತಿ ದಿನ ಖುರ್‌ಆನ್ ತರಗತಿ
- ಭಾನುವಾರ ಬೆಳಿಗ್ಗೆ ಎರಡು ಗಂಟೆಗಳ ಧಾರ್ಮಿಕ ತರಗತಿ
- ದಿನದ ಎಲ್ಲಾ ಸಮಯದಲ್ಲೂ ಸೆಕ್ಯೂರಿಟಿ ಸೌಲಭ್ಯ
- 24 ಗಂಟೆ ಪೂರ್ತಿ ಬಿಸಿ ನೀರಿನ ಸೌಕರ್ಯ ಲಭ್ಯ

ನಗರದ ಹೃದಯ ಭಾಗದಲ್ಲಿ

ಆಸಕ್ತರು ಕೂಡಲೇ ಸಂಪರ್ಕಿಸಿರಿ:

**Mob: 9844231535 / 0824-4277867, 4277868**

ಸಿಟಿಲೈಟ್ ಬಿಲ್ಡಿಂಗ್, 4ನೇ ಮಹಡಿ ಬಲ್ಮಠ ರೋಡ್, ಮಂಗಳೂರು

Now @ Kankanady

Rifa
Burkha House
We CRAFT as per your Choice ...
Shop No. 220, Kunil Complex,
Kankanady, Mangalore
Ph. : 2434543
Cell : 94815 14543
94815 14541

To.______________________________

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ಎಪ್ರಿಲ್ 18 – 24 / 1431 ಜುಮಾದಿಲ್ ಅವ್ವಲ್ 02 – 08

BIS 916 ಹಾಲ್‌ಮಾರ್ಕ್ ಚಿನ್ನಕ್ಕೆ ಮಂಗಳೂರಿಗಿಂತ ಅತ್ಯಂತ ಕಡಿಮೆ ದರ: ಕಾಸರಗೋಡು ಸುಲ್ತಾನ್‌ನಲ್ಲಿ
Sulthan GOLD INTERNATIONAL
ಮದುವೆಯ
ಖರೀದಿಗೆ
ವಿಶೇಷ ರಿಯಾಯಿತಿ.

KASARAGOD. Ph: 0499-220064, 223746

'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 13-04-2010 (Tuesday) & 15-04-2010 (Thursday)

# ಸಹೂಲತ್ ಮೈಕ್ರೋ ಫೈನಾನ್ಸ್ ಸೊಸೈಟಿಗೆ ಚಾಲನೆ

**ನವದೆಹಲಿ:** ಬಡ್ಡಿರಹಿತ ಇಸ್ಲಾಮೀ ಬ್ಯಾಂಕಿಂಗ್ ಕುರಿತ ವ್ಯಾಪಕ ಬೇಡಿಕೆಯನ್ನು ಅನುಸರಿಸಿ 'ಸಹೂಲತ್ ಮೈಕ್ರೋ ಫೈನಾನ್ಸ್ ಸೊಸೈಟಿ' ಎಂಬ ಹೆಸರಲ್ಲಿ ಅಖಿಲ ಭಾರತೀಯ ಮಟ್ಟದ ಒಂದು ಮೈಕ್ರೋ ಫೈನಾನ್ಸ್ ಸಂಸ್ಥೆಯನ್ನು ಇತ್ತೀಚೆಗೆ ನವದೆಹಲಿಯಲ್ಲಿ ಸ್ಥಾಪಿಸಲಾಯಿತು. ದೇಶದಾದ್ಯಂತದ ಒಟ್ಟು 21 ಮಂದಿ ವಿಖ್ಯಾತ ವಿದ್ವಾಂಸರು, ಆರ್ಥಿಕ ತಜ್ಞರು ಮತ್ತು ಸಾಮಾಜಿಕ ಕಾರ್ಯಕರ್ತರು ನಡೆಸಿದ ಸಭೆಯಲ್ಲಿ ಸರ್ವಾನುಮತದಿಂದ ಪ್ರೊ| ಕೆ.ಎ. ಸಿದ್ದೀಕ್ ಹಸನ್‌ರವರನ್ನು ಅಧ್ಯಕ್ಷರನ್ನಾಗಿಯೂ ಅರ್ಶದ್ ಅಜ್ಮಲ್‌ರನ್ನು ಉಪಾಧ್ಯಕ್ಷರನ್ನಾಗಿಯೂ ನೇಮಿಸಲಾಯಿತು. ಹಾಗೆಯೇ ಒಟ್ಟು 11 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು. ಮಸ್ಕತ್‌ನ ಇಸ್ಲಾಮೀ ಬ್ಯಾಂಕ್‌ನ ವ್ಯವಸ್ಥಾಪಕರಾದ ಅಮೀರ್ ಅಲಿಯವರು ಸಂಸ್ಥೆಯ ಸ್ಥಾಪನಾ ವೆಚ್ಚವಾದ 11 ಲಕ್ಷ ರೂ. ಕೊಡುಗೆಯನ್ನು ನೀಡಿದರು. ಪ್ರಸ್ತುತ ಮೈಕ್ರೋ ಫೈನಾನ್ಸ್ ಸೊಸೈಟಿಯನ್ನು 'ಸೊಸೈಟೀಸ್ ರಿಜಿಸ್ಟ್ರೇಶನ್ ಆ್ಯಕ್ಟ್ 1860'ರ ಆಧಾರದಲ್ಲಿ ರಾಷ್ಟ್ರಮಟ್ಟದ ಎನ್.ಜಿ.ಓ. ಆಗಿ ರಿಜಿಸ್ಟರ್ ಮಾಡಲಾಗುವುದು.

# ಗೋ ಸಂತತಿ ಉಳಿಸುವುದೆಂದರೆ... (ಮುಖಪುಟದಿಂದ)

ಕೊಡದಿದ್ದರೂ ನೀರಿನ ಬಿಲ್ಲನ್ನು ಯಾಕೆ ಏರಿಸುವುದಕ್ಕೆ ನೋಡುವುದು? ಚುನಾವಣೆ ಇತ್ಯಾದಿ ಇರುವಾಗ ಸಮರ್ಪಕವಾಗಿ ಕರೆಂಟು ವಿತರಿಸಿ ತಮ್ಮ ಪರವಾಗಿಯೇ ಫಲಿತಾಂಶ ಹೊರಬಿದ್ದ ಕೂಡಲೇ ಕರೆಂಟೇಕೆ ಪ್ರಾಣ ಪಕ್ಷಿಯಂತೆ ಹಾರಿ ಹೋಗುವುದು ಇತ್ಯಾದಿ ಪ್ರಶ್ನೆಗಳಿಗೆ ಯಡಿಯೂರಪ್ಪ ಸರಕಾರ ಜನತೆಗೆ ಸಮಜಾಯಿಷಿ ನೀಡಬೇಕು. ಈ ಎಲ್ಲ ವಿದ್ಯಮಾನಗಳನ್ನು ನೋಡುವಾಗ ಬಹುಶಃ ಅಣು ವಿದ್ಯುತ್ ಸ್ಥಾವರ ಇತ್ಯಾದಿಗಳನ್ನು ವಿರೋಧಿಸಿ ಹೋರಾಡುವವರಿಗೆ ಪಾಠ ಕಲಿಸಬೇಕೆಂದು ಕರೆಂಟು ಸಚಿವರು ಬಹಳ ಉತ್ತಮ ಯೋಜನೆಯನ್ನೇ ರೂಪಿಸುತ್ತಿದ್ದಾರೆಂದು ಅನಿಸುತ್ತಿದೆ. ನೀರಿಲ್ಲ, ಕರೆಂಟಿಲ್ಲ ಎಂಬ ಬೇಡಿಕೆಯೆತ್ತಿದರೆ ಈ ಹೋರಾಟಗಾರರ ವಿರುದ್ಧ ಪ್ರಜೆಗಳನ್ನು ಎತ್ತಿ ಕಟ್ಟಬಹುದೆಂದು ಸರಕಾರದ ಚಿಂತನೆಯಿದ್ದರೂ ಇರಬಹುದು. ಒಟ್ಟಿನಲ್ಲಿ ಜನರನ್ನು ಖೆಡ್ಡಾದಲ್ಲಿ ಕೆಡಹುವ ದಮನ ನೀತಿಯಂತೂ ಜಾರಿಯಾಗುತ್ತಿದೆ ಎಂಬಂಶವನ್ನು ಯಾರಿಂದಲೂ ನಿರಾಕರಿಸಲು ಸಾಧ್ಯವಿಲ್ಲ. ಗೋವುಗಳನ್ನು ಉಳಿಸಲು ಹೊರಟು ಮಾನವ ಪ್ರಾಣವನ್ನೇ ಹಿಂಡಹೊರಟಿರುವುದು ಅಭಿವೃದ್ಧಿಯಲ್ಲ, ಅದರ ಹೆಸರಿನಲ್ಲಿ ನಡೆಯುವ ಷಡ್ಯಂತ್ರವಾಗಿದೆ.

Unique Opportunity for Girls
Value Based Modern Education
ADMISSION OPEN
B.A., B.Com, BCA @
HIRA WOMEN'S COLLEGE
Ph: 0824-2460332
HIRA GIRLS' HIGH SCHOOL
Hira Nagar, Babbukatte, P.O. Permannur.
Ph: 0824-2460331

INTRODUCING
SMART CLASS
FROM THIS ACADEMIC YEAR
PUC Arts & Com. @
WOMEN'S ISLAMIC P.U. COLLEGE
T.C. Road, Thokkottu, Ullal.
Ph: 0824-2463223

# ಈ ಮಸೂದೆ ದೌರ್ಜನ್ಯವನ್ನು ತಡೆದೀತೇ?

(ಮುಖಪುಟದಿಂದ)

ವರದಿಗಳು ಬೆಚ್ಚಿ ಬೀಳಿಸುವಂತಿದೆ. ಈ ಕುರಿತು ಮಾನವ ಹಕ್ಕುಗಳ ಆಯೋಗ ಕ್ರಮಕೈಗೊಳ್ಳಲು ಬಯಸಿತ್ತು. ಕಸ್ಟಡಿ ಸಾವುಗಳು, ಅತ್ಯಾಚಾರ ಪ್ರಕರಣಗಳು ನಡೆದ 24 ಗಂಟೆಗಳೊಳಗಾಗಿ ತನಗೆ ವರದಿ ಸಲ್ಲಿಸಬೇಕೆಂದು ಮಾನವ ಹಕ್ಕು ಆಯೋಗವು ಜಿಲ್ಲಾ ಮ್ಯಾಜಿಸ್ಟ್ರೇಟು ಗಳಿಗೆ ಮತ್ತು ಜಿಲ್ಲಾ ಪೊಲೀಸಧಿಕಾರಿಗಳಿಗೆ ತಾಕೀತು ಮಾಡಿತ್ತು. ಆನಂತರ ನೀಡಿದ ವರದಿ ಪ್ರಕಾರ 1994 ರಿಂದ 2008ರ ವರೆಗೆ ನಮ್ಮ ದೇಶದಲ್ಲಿ 16,836 ಕಸ್ಟಡಿ ಸಾವುಗಳು ಸಂಭವಿಸಿವೆ. ವರ್ಷಂಪ್ರತಿ ಕಸ್ಟಡಿ ಸಾವುಗಳ ಸಂಖ್ಯೆಯಲ್ಲಿ ವರ್ಧನೆಯಾಗುತ್ತಿದೆ ಎಂಬುದು ಕಳವಳಕಾರಿಯಾಗಿದೆ. ಈ ವರದಿಯ ಪ್ರಕಾರ ಪೊಲೀಸ್ ಕಸ್ಟಡಿಯಲ್ಲಿ 2,207 ಮಂದಿ ಬಲಿಯಾದರೆ, ನ್ಯಾಯಾಂಗ ಕಸ್ಟಡಿಯಲ್ಲಿ 14,629 ಜನರು ಜೀವ ಕಳಕೊಂಡಿದ್ದಾರೆ. ದೌರ್ಜನ್ಯಕ್ಕೊಳಗಾಗಿ ಮೃತಪಟ್ಟವರ ಸಂಖ್ಯೆ ಇದರ ದುಪ್ಪಟ್ಟು ಆಗಬಹುದೆಂದು ಆಯೋಗವು ತಿಳಿಸಿದೆ. ಇದು ಎಷ್ಟು ಮಿತಿ ಮೀರುತ್ತಿದೆ ಯೆಂದರೆ ಸರಿಯಾದ ಅಂಕಿ ಅಂಶಗಳೂ ಸಿಗುತ್ತಿಲ್ಲ ಎಂದು ಆಯೋಗ ತಿಳಿಸಿದೆ. ಜಮ್ಮು ಕಾಶ್ಮೀರ ಮುಂತಾದ ಸೇನೆ ನಿಯೋಜಿತವಾಗಿರುವ ಪ್ರದೇಶಗಳಲ್ಲಿ ಇದು ಮಿತಿ ಮೀರುತ್ತಿದೆ. ಅನೇಕ ಬಂಧಿತರ ನಾಪತ್ತೆ ಪ್ರಕರಣಗಳೂ ಇಲ್ಲಿ ನಡೆಯುತ್ತಿವೆ. ಇಲ್ಲಿ ಕಸ್ಟಡಿ ಸಾವುಗಳಿಗೆ ಲೆಕ್ಕವಿಲ್ಲ. ಅದಕ್ಕೆ ಪರಿಹಾರ ಕೂಡಾ ನೀಡುತ್ತಿಲ್ಲ. ಅಪರಾಧಿಗಳಿಗೆ ಶಿಕ್ಷೆಯೂ ಆಗುತ್ತಿಲ್ಲ. ಈ ಬಗ್ಗೆ ವಿಚಾರಣೆ ಕೂಡಾ ಇಲ್ಲ ಎಂಬುದು ವಾಸ್ತವವಾಗಿದೆ.

ಸ್ವತಂತ್ರ ಭಾರತದಲ್ಲಿ ನಡೆಯುತ್ತಿರುವ ಈ ಕಸ್ಟಡಿ ಸಾವುಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. 1992ರಲ್ಲಿ ಭಾರತದಲ್ಲಿ ನಡೆದ ಕಸ್ಟಡಿ ಸಾವುಗಳು, ಅತ್ಯಾಚಾರ ಪ್ರಕರಣಗಳ ಕುರಿತು ಆಮ್ನೆಸ್ಟಿ ಇಂಟರ್‌ನೇಶನಲ್ ತಯಾರಿಸಿದ ವರದಿ; ಅದೇ ರೀತಿ 2009ರಲ್ಲಿ ಪೊಲೀಸರ ದೌರ್ಜನ್ಯಗಳ ಕುರಿತು ಹ್ಯೂಮನ್ ರೈಟ್ಸ್ ವಾಚ್ ಬಿಡುಗಡೆಗೊಳಿಸಿದ ವರದಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿವೆ. ಇವೆಲ್ಲವೂ ಭಾರತದ ವರ್ಚಸ್ಸಿಗೆ ಧಕ್ಕೆಯುಂಟು ಮಾಡುವಂತಹ ವರದಿಗಳಾಗಿವೆ.

ಈ ಬಗ್ಗೆ ತಡವಾಗಿ ಎಚ್ಚೆತ್ತ ಸರಕಾರ ಬಹುದಿನಗಳಿಂದ ನಿರೀಕ್ಷೆಯಲ್ಲಿದ್ದಂತಹ 'ದೌರ್ಜನ್ಯ ತಡೆ ಕಾಯ್ದೆ - 2010' ಮಸೂದೆಯನ್ನು ಎಪ್ರಿಲ್ 15ರಂದು ಸಂಸತ್ತಿ ನಲ್ಲಿ ಮಂಡಿಸಲು ನಿರ್ಧರಿಸಿದೆ. 1997ರಲ್ಲಿ ವಿಶ್ವ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಧೋರಣೆಗೆ (ಯು.ಎನ್.ಸಿ.ಐ.ಟಿ.) ಸಹಿ ಹಾಕಿದ ಭಾರತ ನಂತರ ಆ ಬಗ್ಗೆ ನಿರ್ಲಕ್ಷ್ಯ ವಹಿಸಿತ್ತು. ಈ ಕಾನೂನಿನ ಪ್ರಕಾರ, "ಓರ್ವ ಸರಕಾರಿ ಉದ್ಯೋಗಿಯು ನೇರವಾಗಿ ಓರ್ವ ವ್ಯಕ್ತಿಯ ಮೇಲೆ ಆತನ ಅರಿವಿಗೆ ಬರುವಂತೆಯೋ ಅಥವಾ ಆತನ ಅನುಮತಿ ಪಡೆದೋ, ಪಡೆಯದೆಯೋ, ದೈಹಿಕವಾಗಿಯೂ ಮಾನಸಿಕವಾಗಿಯೂ ಹಾನಿ ಮಾಡುವುದು ಅಪರಾಧವಾಗಿದೆ. ಓರ್ವನನ್ನು ಬಂಧಿಸಿ ಸಾಕ್ಷ್ಯಾಧಾರಗಳಿಗಾಗಿಯೋ ಅಥವಾ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡುವುದಕ್ಕಾಗಿಯೋ ಹಿಂಸಿಸುವುದು ಅಪರಾಧವಾಗಿದೆ. ಮತ, ಜಾತಿ, ವರ್ಗ, ವರ್ಣಗಳ ನೆಪದಲ್ಲಿ ಸತಾಯಿಸಿ ದೌರ್ಜನ್ಯವೆಸಗುವುದು ಅಪರಾಧವಾಗಿದೆ. ಇಂತಹ ಅಪರಾಧವೆಸಗಿದರೆ ಹತ್ತು ವರ್ಷದ ವರೆಗೆ ಕಠಿಣ ಶಿಕ್ಷೆ ಅನುಭವಿಸಬೇಕೆಂದು ಈ ಕಾನೂನು ತಿಳಿಸುತ್ತದೆ.

ನಿಜವಾಗಿ ಇಲ್ಲಿ ಕಾನೂನಿಗೇನೂ ಕೊರತೆಯಿಲ್ಲ. ಅದು ಅನುಷ್ಠಾನಕ್ಕೆ ಬರುವುದರ ಬಗ್ಗೆ ಮಾತ್ರ ಅನುಮಾನವಿರುವುದು. ಆದ್ದರಿಂದ ಹತ್ತರಲ್ಲಿ ಹನ್ನೊಂದರಂತೆ ಈ ಕಾನೂನು ಆಗಬಾರದು. ನ್ಯಾಯ ವಂಚಿತರಿಗೆ ನ್ಯಾಯ ಸಿಗಲು ಈ ಕಾನೂನು ನೆರವಾಗಬೇಕು.

ಶಿಹಾಬ್ ರೆಸಿಡೆನ್ಸಿಯಲ್ ಸ್ಕೂಲ್ ಶಿಹಾಬ್ ಇಂಗ್ಲಿಷ್ ಮೀಡಿಯಂ ಸ್ಕೂಲ್
ಪ್ರೈಮರಿ, ಅಪ್ಪರ್ ಪ್ರೈಮರಿ ಮತ್ತು ಪ್ರೌಢ ಶಾಲೆಯ ಮಕ್ಕಳ ಧಾರ್ಮಿಕ ಹಾಗೂ ಲೌಕಿಕ ವಿದ್ಯಾ ಕೇಂದ್ರ

ಪ್ರತೀ ವರ್ಷ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುವ ಅತ್ಯುತ್ತಮ ಶಾಲೆ.
ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ.
ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ.
ಎಸ್. ಎಸ್. ಎಲ್.ಸಿ. ವಿದ್ಯಾಭ್ಯಾಸದ ಜೊತೆಗೆ
ಕಂಪ್ಯೂಟರ್ ತರಬೇತಿ.
ಅರ್ಹತೆಗನುಸಾರ ವಿದ್ಯಾರ್ಥಿವೇತನ.
ಮಂಗಳೂರಿನಿಂದ 32 k.m. ದಕ್ಷಿಣದಲ್ಲಿ ರಾಷ್ಟ್ರೀಯ ಹೆದ್ದಾರಿ 17ರ ಪಕ್ಕದ ಪ್ರಶಾಂತ ವಾತಾವರಣ.
ದಾಖಲಾತಿಗಾಗಿ ಸಂಪರ್ಕಿಸಿರಿ
ಚೇಯರ್‌ಮೆನ್,
ಶೇಕ್ ಅಬ್ದುಲ್ಲಾ, ಬಿ.ಎ; ಎಫ್.ಸಿ.ಎ.,
ಚಾರ್ಟರ್ಡ್ ಅಕೌಂಟೆಂಟ್, ಚರ್ಚ್ ಬಿಲ್ಡಿಂಗ್, ಕೊಡಿಯಾಲ್ ಬೈಲ್,
ಮಂಗಳೂರು - 575 003. ಫೋನ್ : 0824 - 2440339 (0), 2495121(R)
ಇಮೈಲ್ : sheikhabdullah@email.com ಫ್ಯಾಕ್ಸ್ : 0824 - 4256762
ಮೊಬೈಲ್ : 98440 35786
ಪ್ರಾಂಶುಪಾಲರು,
ಶಿಹಾಬುಲ್ ಉಲೂಮ್ ರೆಸಿಡೆನ್ಸಿಯಲ್ ಸ್ಕೂಲ್, ಅಡ್ಕ ಬಂದಿಯೋಡ್,
ಮಂಗಲಪಾಡಿ - 671 324 ಉಪ್ಪಳ, ಕಾಸರಗೋಡ್ ಜಿಲ್ಲೆ.
ಫೋನ್.: 04998 - 240222, 240333. ಫ್ಯಾಕ್ಸ್ : 240333
ವೆಬ್‌ಸೈಟ್ : www.shihabfoundation.org

Printed & Published by M. Sadullah on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. **Editor: A.K. Kukkila, CHIEF EDITOR: P. NOOR MUHAMMED**
Ph: 2422786. Fax: 91-0824-2426846. E-mail: **sanmargamatter@gmail.com** Website: **www.sanmarga.com** (Regd. with RNI No. 29903/78)